SRI K. H. RANGANATH.—Madam, I beg to introduce the Karnataka Agricultral Produce Marketing (Regulation) Third Amendment) Bill, 1976.

MADAM SPEAKER:—The Bill is introduced.**

## KARNATAKA MUNICIPALITIES (AMENDMENT) BILL 1976. Motion to Consider, (Debate Continued)

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಮಾನ್ಯ ಅಧ್ಯಕ್ಷಿಣಿಯವರೇ, ನಾನು ಮೊನ್ನೆ ದಿವಸ ಮಾತನಾಡುವಾಗ, ಈ ನಗರ ಸಭೆ ಮಸೂದೆಯಲ್ಲಿ ಅಳವಡಿಸಿರತಕ್ಕಂಥ ಒಂದು ವಿಧಿಯಲ್ಲಿ ಒಬ್ಬ ನಗರ ಸಭೆಯ ಸದಸ್ಯನನ್ನು, ಆ ಸದಸ್ಯತ್ವದಿಂದ ತೆಗೆದುಹಾಕತಕ್ಕಂಥ ಕಾಲದಲ್ಲಿ ಹಿಂದೆ ಇದ್ದಂಥ ವ್ಯವಧಾನವನ್ನು ಕೈ ಬಿಟ್ಟು ಹೊಸ ವ್ಯವಧಾನವನ್ನು ಈಗ ಏನು ತಿದ್ದುಪಡಿ ಮುಖೇನ ಅಳವಡಿಸಿ ಕೊಂಡಿದ್ದಾರೆ ಅದು ಘಾತಕವಾದ ಕೆಲಸ ಎನ್ನುವ ಮಾತನ್ನು ಹೇಳಿದ್ದೇ, ಅದೇ ಮಾತನ್ನು ಮುಂದುವರಿಸುತ್ತಾ ಈಗಲಾದರೂ ಹೇಳತಕ್ಕಂಥದ್ದು ಇಷ್ಟೆ. ಹಿಂದೆ ಏನು ಪದ ಇತ್ತು ಎಂದರೆ "after giving him an opportunity of being heard' ಎಂದು ಹಿಂದೆ ಈ ರೀತಿ ಇದ್ದುದನ್ನು ತೆಗೆದು ಹಾಕಿ ಈಗ 'Provided that no Councillor shall be removed except after being afforded an opportunity for submitting an explanation. ಎಂದು ಸೇರಿಸಿದ್ದೀರ. ಆದುದರಿಂದ ಈಗ ಏನು ಒಂದು ವಾಕ್ಯ ಹಿಂದೆ ಇತ್ತು ಅದನ್ನು ತೆಗೆದು ಆ ಸ್ಥಾನದಲ್ಲಿ ಹೊಸ ವಾಕ್ಯವನ್ನು ಸೇರಿಸಿದ್ದಾರೆ. ಇದು ಘಾತುಕತವಾದ ಕೆಲಸ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಒಬ್ಬ ಚುನಾಯಿತ ಸದಸ್ಯನನ್ನು ತೆಗೆದು ಹಾಕಬೇಕಾದರೆ ಅವನಿಗೆ ಸಾಕಷ್ಟು ಅವಕಾಶಗಳನ್ನು ಕೊಡಬೇಕಾಗುತ್ತದೆ ಮತ್ತು ಅವನನ್ನು ಕೇಳಬೇಕಾಗುತ್ತದೆ; ನೇರವಾಗಿ ಕೇಳಬೇಕಾಗುತ್ತದೆ ಅವನು ತನ್ನ ಅಹವಾಲನ್ನು ಎದುರಿಗೆ ಹೇಳಬೇಕಾಗುತ್ತದೆ ಮತ್ತು ರಿಟ್ ಪಿಟಿಷನ್ ಹಾಕುವುದಕ್ಕೆ ಅವಕಾಶ ವಿರಬೇಕು ಮತ್ತು ಸಂಬಂಧಪಟ್ಟ ಸರ್ಕಾರದ ಅಧಿಕಾರಿಗಳ ಮುಂದೆ ಅವರು ಆರ್ಗ್ಯುಮೆಂಟ್ ಮಾಡುವುದಕ್ಕೂ ಅವಕಾಶವಿರುತ್ತದೆ. ಆದರೆ ಈಗ ತಂದಿರತಕ್ಕಂಥ ತಿದ್ದುಪಡಿ ಮುಖಾಂತರ ಏನಾಗುತ್ತದೆ ಎಂದರೆ ಕೇವಲ ಒಂದು ಬರಹದ ಹೇಳಿಕೆಯನ್ನು ಕೇಳಬೇಕಾದಂಥ ಅಗತ್ಯತೆ ಇರುವದಿಲ್ಲ ಮತ್ತು ಆರ್ಗ್ಯುಮೆಂಟ್ ಮಾಡುವುದಕ್ಕೆ ಅಗತ್ಯವಿರುವುದಿಲ್ಲ, ನೇರವಾಗಿ ಹೇಳಿಕೆ ಬಂದರೆ ಬಂತು ಇಲ್ಲದಿದ್ದರೆ, ಇಲ್ಲ. ಇವತ್ತು ಮಂತ್ರಿಗಳು ಇದ್ದರೆ At the pleasure of the Chief Minister a Minister holds office. If at any time he does not wish to continue a Minister, he can throw him out. ಇದರಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಯಾವುದೇ ಒಂದು ತಪ್ಪಿಗೋಸ್ಕರ ತೆಗೆದುಹಾಕಬೇಕೆಂದು ಸರ್ಕಾರದ ಮುಂದೆ ಪರಿಶೀಲನೆ ಬರುತ್ತದೆಯೋ ಅಂಥ ಸಂದರ್ಭದಲ್ಲಿ ಹಿಂದೆ ಅವನಿಗೆ ಅವಕಾಶಗಳನ್ನು ಕೊಟ್ಟು ಅವನನ್ನು ತೆಗೆದುಹಾಕಬಹುದೆಂದು ಇತ್ತು. ಇವತ್ತು ಸಹ ತಾವು ಅದೇ ಪದಗಳನ್ನು, ವಾಕ್ಯಗಳನ್ನು ಇಡುವುದರಿಂದ ಅವಕಾಶ ಎನ್ನತಕ್ಕಂಥ ವ್ಯಾಪ್ತಿ ಇನ್ನಷ್ಟು ಪರಿಪೂರ್ಣವಾಗುತ್ತಿತ್ತು ಮತ್ತು ಅರ್ಥಪೂರ್ಣವಾಗುತ್ತಿತ್ತು, ಆದರೆ ಇವತ್ತು ತಂದಿರತಕ್ಕಂಥ ತಿದ್ದುಪಡಿ ಸಾಧುವಾದುದಲ್ಲ. ಮಾನ್ಯ ಅಧ್ಯಕ್ಷರೇ ಅನೇಕ ವಿಚಾರಗಳಲ್ಲಿ ಯಾವುದಾದರೂ ಒಬ್ಬ ಸದಸ್ಯನನ್ನು ತೆಗೆದುಹಾಕತಕ್ಕಂಥ ಕಾಲದಲ್ಲಿ ಕೇವಲ ಹಿಂದೆ ಇದ್ದಂಥ ಒಂದು ಪದ ಒಂದು ವಾಕ್ಯವೇ ಅವರಿಗೆ ಅಡ್ಡಿ ಬರತಕ್ಕಂಥ ಪ್ರಸಂಗ ಉಂಟಾಗಿದ್ದರೆ, ಬಿಕ್ಕಟ್ಟು ಏನಾದರೂ ಉಂಟಾಗಿದ್ದರೆ, ಆ ಬಿಕ್ಕಟ್ಟಿನಿಂದ ನಗರ ಸಭೆಯ ಮೇಲೆ ಘಾತುಕ ಉಂಟಾಗಿದ್ದರೆ, ಸಾರ್ವಜನಿಕರ ಹಿತಕ್ಕೆ ಧಕ್ಕೆ. ಉಂಟಾಗಿದ್ದರೆ ಅಂಥ ಉದಾಹರಣೆಯನ್ನು ಸರ್ಕಾರದವರು ಏನಾದರೂ ನಮಗೆ ಕೊಟ್ಟು ಈ ಒಂದು ತಿದ್ದುಪಡಿಯನ್ನು ತಂದಿದ್ದರೆ ನಾವು ಒಪ್ಪಿಕೊಳ್ಳಬಹುಗಾಗಿತ್ತು. ಇವತ್ತು ಯಾವುದೋ ಒಂದು ಮೂಲೆಯಲ್ಲಿರತಕ್ಕಂಥ ಒಬ್ಬ ಮನುಷ್ಯ ಬೇಡವಾಗಿದ್ದು ಅವನನ್ನು ತೆಗೆದುಹಾಕಬೇಕು ಎನ್ನುವ

** Bills appended as Annexure I to this Volume.

ಉದ್ದೇಶದಿಂದ, ಅವನು ಅಗ್ರ್ಯುಮೆಂಟ್ ಮಾಡಿದರೆ, ಅವನನ್ನು ಕೇಳಿದರೆ ಏನಾದರೂ ಅಭಿಪ್ರಾಯಕ್ಕೆ ಬಂದು ಬಿಡಬೇಕಾಗುತ್ತದೆಂದು ಇದನ್ನು ತಂದಿದ್ದೀರಿ. ಬೇರೆ ಬೇಡ ಎಂದಮೇಲೆ ಅವರನ್ನು ತೆಗೆದು ಹಾಕಿ ಬಿಡುವುದು, ಅದಕ್ಕಾಗಿ ಆರ್ಗ್ಯುಮೆಂಟ್ ಏತಕ್ಕೆ ಬೇಕು? ನೇರವಾಗಿ ಅವರಿಂದ ಒಂದು ಹೇಳಿಕೆಯನ್ನು ಪಡೆದರೆ ಸಾಕು; ಒಪ್ಪಿಗೆಯಾದರೆ ಇಟ್ಟುಕೊಳ್ಳಬಹುದು ಇಲ್ಲದಿದ್ದರೆ ಬಿಟ್ಟುಬಿಡಬಹುದು. ಹೀಗೆ ಮಾಡಿದರೆ ನ್ಯಾಚುರಲ್ ಜಸ್ಟೀಸ್ ಎನ್ನುವುದಕ್ಕೆ ಸ್ವಲ್ಪವೂ ಕೂಡ ಕಲ್ಪನೆಯಿಲ್ಲದಂತಾಗುತ್ತದೆ ನಾವು ನ್ಯಾಚುರಲ್ ಜಸ್ಟೀಸ್‌ನ್ನು ಹೆಚ್ಚು ಕಡನೆ ಪ್ರಜಾಪ್ರಭುತ್ವದಲ್ಲಿ ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇವೆ. ಯಾರೇ ಒಬ್ಬ ಮನುಷ್ಯನನ್ನು ನೇಣಿಗೆ ಹಾಕುವುದಕ್ಕಾಗಲೀ ಅಥವಾ ಶಿಕ್ಷೆ ವಿಧಿಸುವುದಕ್ಕಾಗಲೀ ಅವನಿಗೆ ಸಾಕಷ್ಟು ಅವಕಾಶವನ್ನು ಕೊಟ್ಟು, ಅವನ್ನು ರುಜುವಾತು ಮಾಡಿ, proved beyond reasonable doubt-moral turptitude. ...ಎಂಬ ಪದಗಳನ್ನು ಉಪಯೋಗಿಸಿ ಶಿಕ್ಷೆಯನ್ನು ವಿಧಿಸುವ ಕಾಲದ ವ್ಯವಸ್ಥೆಯಲ್ಲಿದ್ದೇವೆ. ಹೀಗಿರುವಾಗ ಇದನ್ನು ಮಾನ್ಯ ಮಂತ್ರಿಗಳು ಮರೆತು ಇಂಥ ಒಂದು ಪದಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಇದು ಸಲ್ಲತಕ್ಕದ್ದಲ್ಲ; ಇದನ್ನು ಕೈಬಿಡಬೇಕು ಮತ್ತು ಹಿಂದೆ ಇದ್ದ ಶಬ್ದಗಳನ್ನೊಳಗೊಂಡ ವಾಕ್ಯಗಳನ್ನೇ ಉಳಿಸಿಕೊಳ್ಳಬೇಕೆಂದು ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಇನ್ನೊಂದು ಸಂದರ್ಭದಲ್ಲಿ ನಗರಸಭೆಯ ಸದಸ್ಯರನ್ನು ತೆಗೆದುಹಾಕುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಇದು ಯಾವಾಗ ಎಂದರೆ, ಯಾರು, ತಾನು ಪಡೆದುಕೊಂಡಿರುವ ಹಣವನ್ನು ಕೊಡುವುದಿಲ್ಲ; ಆತನ ಮೇಲೆ ಡಿಕ್ರಿಯಾಗುತ್ತದೆ ಅನಂತರ ಅದು ಸಿವಿಲ್ ಕೋರ್ಟಿಗೆ ಬಂದು, ಅಲ್ಲಿಗೂ ಆತನಿಗೆ ಹಣ ಕೊಡಲು ಶಕ್ತಿ ಇರದಿದ್ದರೆ, ಆತನನ್ನು ಜೈಲಿಗೆ ಕಳುಹಿಸಬಹುದು. ಇದೇನೂ ಕ್ರಿಮಿನಲ್ ಅಪರಾಧವಲ್ಲ, ಹಿಂದೆ ಯಾರು ಕ್ರಿಮಿನಲ್ ಅಪರಾಧಕ್ಕೊಳಗಾಗಿ, ಮಾರಲ್ ಟರ್ಪಿಟ್ಯೂಡ್‌ಗೆ ಒಳಗಾಗಿದ್ದ ಸಂದರ್ಭದಲ್ಲಿ ಆತನನ್ನು ತೆಗೆದುಹಾಕುವುದಕ್ಕೆ ಅವಕಾಶವಿತ್ತು ಮತ್ತು ಆತನು ಸದಸ್ಯನಾಗುವುದಕ್ಕೆ ಅನರ್ಹನೆಂದು ತೀರ್ಮಾನಿಸುವುದಕ್ಕೂ ಅವಕಾಶವಿತ್ತು ಆದರೆ, ಸಿವಿಲ್ ಕೋರ್ಟಿನಲ್ಲಿ ಯಾವುದೋ ಒಂದು ಡಿಕ್ರಿ ಇದೆ ಎಂದು ಹೇಳಿ ಆವನನ್ನು ಸಿವಿಲ್ ಜೈಲಿಗೆ ಕಳುಹಿಸಿದರೆ, ಆ ಆಧಾರವನ್ನಿಟ್ಟುಕೊಂಡು ಆತನನ್ನು ಸದಸ್ಯತ್ವದಿಂದ ತೆಗೆದು ಹಾಕುವುದಕ್ಕೆ ಹೊರಟಿದ್ದೀರಲ್ಲ ಅದು ನಿಮ್ಮ ತಲೆಗೆ ಎಲ್ಲಿಂದ ಹೊಳೆಯಿತು ಮತ್ತು ಯಾವ ಕಕ್ಷೆಯಿಂದ ಬಂತು ಎಂಬುದು ನನಗೆ ಅರ್ಥವಾಗಲಿಲ್ಲ. ಈ ನಗರಸಭೆಯ ಸದಸ್ಯರು ಯಾವುದೋ ಒಂದು ವಟಾರದಲ್ಲಿ ಅಥವಾ ಒಂದು ವಿಭಾಗದಲ್ಲಿ ಆರಿಸಿ ಬರುವ ಸಾಮಾನ್ಯ ಜನರಾಗಿರುತ್ತಾರೆ. ಅವರು ಸಾವಿರ ಅಥವಾ ಎರಡು ಸಾವಿರ ರೂಪಾಯಿಗಳನ್ನು ಅಕಸ್ಮಾತ್ ಸಾಲವಾಗಿ ತೆಗೆದುಕೊಂಡಿರುತ್ತಾರೆ. ಆ ಹಣದ ಮೇಲೆ ಡಿಕ್ರಿ ಹಾಕಿದಾಗ, ಒಂದುವೇಳೆ ಆ ಹಣವನ್ನು ಕೊಡುವುದಕ್ಕೆ ಆತನಿಗಾಗದಿದ್ದರೆ, ಆತನನ್ನು ಜೈಲಿಗೆ ಕಳುಹಿಸಿಬಿಡುತ್ತಾರೆ. Has he got any intention to commit criminal offence? It is purely a civil matter.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರು ಏನನ್ನು ಕುರಿತು ಭಾಷಣ ಮಾಡುತ್ತಿದ್ದಾರೆ, ಅದರ ಅರ್ಥ ಹಾಗಿಲ್ಲ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕಾಗಿದೆ. If he has not paid or discharged any debts, dues of the Municipal Council in respect of which decree has been obtained and in execution of the decree he is sent to jail In that case he is debarred ಇಷ್ಟು ಮಾತ್ರ ಹೊರತು, ಎಲ್ಲವನ್ನೂ ಎಂದು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬಾರದು.

ಶ್ರೀ ಕಾಗೋಡು ತಿಮ್ಮಪ್ಪ.— ಹಾಗಿದ್ದರೆ, ನಾನು ಇದರ ಬಗ್ಗೆ ಹೆಚ್ಚು ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ.

ಇನ್ನು ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ತೆಗೆದುಹಾಕುವುದರ ಬಗ್ಗೆ ಒಂದು ಹೊಸ ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ತಂದಿದ್ದಾರೆ ಸದಸ್ಯರನ್ನು ತೆಗೆದುಹಾಕುವುದಕ್ಕೆ ಹೇಗೆ ಹೊಸ ಪದಗಳನ್ನು ಸೇರಿಸಿ ವಾಕ್ಯ ಮಾಡಿದ್ದಾರೋ, ಹಾಗೆಯೇ ಇವರ ಬಗ್ಗೆ ಕೂಡ ಹೊಸ ಪದಗಳನ್ನು ಸೇರಿಸಿ ವಾಕ್ಯ ಮಾಡಿದ್ದಾರೆ. ಹಿಂದೆ ಇದ್ದಂಥ ವಾಕ್ಯದಲ್ಲಿ ಮಾನ್ಯ ಮಂತ್ರಿಗಳಿಗೇನು ಅಡಚಣೆಯಿತ್ತು ಮತ್ತು ಈಗ ಅಳವಡಿಸಿಕೊಂಡಿರುವ ಹೊಸ ವಾಕ್ಯದಿಂದ ಏನು ಸುಲಭವಾಗುತ್ತದೆ ಮತ್ತು ಏನು ಲಾಭವಿದೆ ಎಂದು ನಾನು ಕೇಳಬಯಸುತ್ತೇನೆ. ಒಬ್ಬ ಅಧ್ಯಕ್ಷರು ಅಥವಾ ಉಪಾಧ್ಯಕ್ಷರನ್ನು ತೆಗೆಯುವ ಮೊದಲು ಅಥವಾ ತೆಗೆಯಬೇಕಾದರೆ ಅವರ ಸ್ಥಾನಮಾನಗಳನ್ನು ನಾವು ಗೌರವಿಸಬೇಕಾಗುತ್ತದೆ ಮಂತ್ರಿಗಳಾಗಿ

ದವರು, ಮುಖ್ಯ ಮಂತ್ರಿಗಳಾಗಿದ್ದವರು ಎಂತೆಂತಹ ಭ್ರಷ್ಟಾಚಾರಗಳನ್ನು ನಡೆಸಿದ್ದಾರೆನ್ನುವುದನ್ನು ಇತಿಹಾಸದಿಂದ ಮತ್ತು ಅನುಭವದಿಂದ ನಾವೂ ಕೇಳಿದ್ದೇವೆ, ಮಾನ್ಯ ಮಂತ್ರಿಗಳೂ ಕೇಳಿದ್ದಾರೆ. ಅಂಥವರು ನಡೆಸಿದಂಥ ಭಾರಿ ಭಾರಿ ದೊಡ್ಡ ಭ್ರಷ್ಟಾಚಾರಗಳನ್ನು ನಗರಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ನಡೆಸುವುದಕ್ಕೆ ಸಾಧ್ಯವೇ ಇಲ್ಲ. ನಮ್ಮಲ್ಲಿ ಸ ಮಾನ್ಯವಾಗಿ ಒಂದು ಅಸ್ತ್ರವಿದೆ ನಾವು ಈ ಖಡ್ಗವನ್ನು ಹೇಗೆ ಬೇಕಾದರೆ ಝಳಪಿಸಬಹುದು ಸುಲಭವಾಗಿ ಕತ್ತನ್ನು ತೆಗೆಯಬೇಕೆಂಬ ಆಸೆ ಬಂದಾಗ, ಆಗ ನಾವು ಈ ಖಡ್ಗವನ್ನು ಝಳಪಿಸಬಹುದು. ಈ ರೀತಿಯಾಗಬಾರದು. ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳು ಜನತೆಯಿಂದ ಆರಿಸಿಬಂದ ಜನತಾ ಪ್ರತಿನಿಧಿಗಳು. ಅಂಥವರನ್ನು ತೆಗೆದುಹಾಕ ಬೇಕಾದಾಗ ಅವರಿಗೆ ಸಾಕಷ್ಟು ಅವಕಾಶವನ್ನು ಕೊಟ್ಟು, ತೀರ್ಮಾನಕ್ಕೆ ಬರಬೇಕಾಗಿದೆ. ಅವರೆ, ಅವರನ್ನು ಕೇಳುವ ಸಂದರ್ಭದಲ್ಲಿ ಅಥವಾ ಅವಕಾಶ ಕೊಡುವ ಸಂದರ್ಭದಲ್ಲಿ ಸರ್ಕಾರವು ಆ ಬಗ್ಗೆ ಹಿಂದೆ ಮುಂದು ನೋಡುವ ಪ್ರಸಂಗ ಬರಬಾರದು ಅಷ್ಟೆ. ಇವರ ಬಗ್ಗೆ ನಾವು ವ್ಯಕ್ತಿಯನ್ನು ದೃಷ್ಟಿಯಲ್ಲಿ ಟ್ಟುಕೊಂಡು ಆಲೋಚನೆ ಮಾಡಬಾರದು, ಅವರ ಅಧಿಕಾರದ ವ್ಯಾಪ್ತಿಯ ದೃಷ್ಟಿಯಿಂದ ಆಲೋಚನೆ ಮಾಡಬೇಕಾಗಿದೆ. ಇಲ್ಲಿ ನಮಗೆ ವಿಶಾಲ ದೃಷ್ಟಿ ಅವಶ್ಯವಿದೆ. ಇಂಥಾ ವಿಚಾರಗಳಲ್ಲಿ ನಾವು ಸಂಕುಚಿತ ಮನೋಭಾವನೆಯಿಂದಿರಬಾರದು. ಆದರೆ, ಮಾನ್ಯ ಮಂತ್ರಿಗಳು ಈ ತಿದ್ದುಪಡಿಯನ್ನು ಏನು ತಂದಿದ್ದಾರೆ, ಇವರಿಂದ ಸರ್ಕಾರದ ಸಂಕುಚಿತ ಮನೋಭಾವನೆಯನ್ನು ಎತ್ತಿ ತೋರಿಸುತ್ತದೆ ಈ ದೃಷ್ಟಿಯಲ್ಲಿ ನಾವು ಹೋಗಬಾರದು. ಈಗಾಗಲೇ ಶಿರಾಳಕೊಪ್ಪದ ಮುನಿಸಿಪಾಲಿಟಿ ಬಗ್ಗೆ ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದಾರೆ ಸರ್ಕಾರದ ಈ ತೀರ್ಮಾನ ಸರಿ ಇರಬಹುದು ಅಥವಾ ಇಲ್ಲದೇ ಇರಬಹುದು. ಆ ಕುರಿತು ನಾನು ಹೇಳುವುದಕ್ಕೆ ಹೋಗುವುದಿಲ್ಲ. When discretion is given it is completely left to the person who exercises it. I do not come in the way of his discretion. The method in which it is exercised is questioned. ನೀವು ತೀರ್ಮಾನ ತೆಗೆದುಕೊಳ್ಳುವಾಗ, ಅವರನ್ನು ತೆಗೆದು ಹಾಕುವ ಹಾಗೆ ಮಾಡಿ, ಅಥವಾ ಇರುವ ಹಾಗೆ ಮಾಡಿ. ಆದರೆ, ತೀರ್ಮಾನ ಕೊಡುವುದಕ್ಕೆ ಮೊದಲು, ಆತನಿಗೆ ಸಂಪೂರ್ಣವಾದ ಅವಕಾಶವನ್ನು ಕೊಟ್ಟು ಆ ಮೇಲೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ ಆಗ ಯಾರೂ ಕೂಡ ಪ್ರಶ್ನೆ ಮಾಡುವಂತಿರುವುದಿಲ್ಲ ಹಾಗೇನಾದರೂ ಮಾಡದಿದ್ದರೆ, ಒಂದು ವೇಳೆ ಆತ ಹೈಕೋರ್ಟಿಗೆ ರಿಟ್ ಹೋಗಬಹುದು ಆಗ ಹೈಕೋರ್ಟಿನವರು ಆತನಿಗೆ ಸಾಕಷ್ಟು ಅವಕಾಶಗಳನ್ನು ಕೊಡಲಿಲ್ಲ ಎಂದು ತೀರ್ಮಾನ ಕೊಟ್ಟಮೇಲೆ ಆತ ಪುನಃ ಸರ್ಕಾರಕ್ಕೆ ವಾಪಸ್ಸು ಬರಬಹುದು. ಆಗ ಸರ್ಕಾರದ ಬೆಲೆ ಏನಾಯಿತು ? ಆತನಿಗೆ ಸಂಪೂರ್ಣವಾದ ಅವಕಾಶವನ್ನು ಕೊಟ್ಟ ಮೇಲೆ ತೀರ್ಮಾನ ತೆಗೆದುಕೊಂಡರೆ, ಮುಂದೆ ನ್ಯಾಯಾಲಯ ಕೂಡ ಸರ್ಕಾರದ ತೀರ್ಮಾನವನ್ನೇ ಎತ್ತಿ ಹಿಡಿಯುತ್ತದೆ. ಈ ರೀತಿಯ ಒಂದು ತತ್ವವನ್ನನಳವಡಿಸಿಕೊಂಡು, ಕ್ರಮವನ್ನನುಸರಿಸಿದರೆ ಮತ್ತು ಈ ವಿಧಾನದಲ್ಲಿ ನಡೆದರೆ, ಆಗ ಯಾರೂ ಕೂಡ ಸರ್ಕಾರದ ತೀರ್ಮಾನವನ್ನು ಪ್ರಶ್ನೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಮಾನ್ಯ ಸಚಿವರು ಕಾನೂನು ಪಂಡಿತರಾಗಿದ್ದಾರೆ, ನ್ಯಾಯವಾದಿಗಳಾಗಿದ್ದಾರೆ. ಎಷ್ಟೋ ಪ್ರಕರಣಗಳನ್ನು ನಡೆಸಿದ್ದಾರೆ ಮತ್ತು "ಅಪಾರ್ಚುನಿಟಿ ಟು ಬಿ ಹರ್ಡ್" ಎನ್ನುವ ಶಬ್ದದ ವ್ಯಾಖ್ಯೆಯ ವ್ಯಾಪ್ತಿಯನ್ನು ಮಾನ್ಯ ಮಂತ್ರಿಗಳು ನನಗಿಂತಲೂ ಚೆನ್ನಾಗಿ ತಿಳಿದುಕೊಂಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯಮಂತ್ರಿಗಳು ಸೀನಿಯರ್ ಲಾಯರ್ ಆಗಿದ್ದಾರೆ ಅವರು ಇಂಥಾ ತಿದ್ದುಪಡಿಯನ್ನು ತರುತ್ತಿದ್ದಾರೆ ಎಂದರೆ, ನಾವೇನು ಹೇಳಬೇಕು? ಮೇಲಾಗಿ ಮಾನ್ಯ ಮಂತ್ರಿಗಳು ಪ್ರಖ್ಯಾತ ಕ್ರಿಮಿನಲ್ ಲಾಯರ್; ಅವರಿಗೆ ಇದು ಬಹಳ ಚೆನ್ನಾಗಿ ಗೊತ್ತಿದೆ. ಇಷ್ಟೆಲ್ಲಾ ಪದದ ವ್ಯಾಪ್ತಿ ಮತ್ತು ವಿಶಾಲತೆಯನ್ನು ತಿಳಿದುಕೊಂಡ ಮಾನ್ಯ ಮಂತ್ರಿಗಳೇ ಈ ತಿದ್ದುಪಡಿಯನ್ನು ತಂದಿದ್ದಕ್ಕೆ ನಾನು ವಿಷಾದ ಪಡುತ್ತೇನೆ ಮತ್ತು ಇದು ಅವರ ಪ್ರಜ್ಞೆಯ ಕಕ್ಷೆಯಲ್ಲಿ ಬರಬಾರದಾಗಿತ್ತು ಎಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ಹಿಂದಿನ ವಾಕ್ಯ ಮತ್ತು ಅದರ ಅರ್ಥ ಏನಿತ್ತು ಅದನ್ನೇ ಮುಂದುವರಿಸಿ, ಈಗಿರುವುದನ್ನು ಕೈಬಿಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

1-30 ಪಿ.ಎಂ.

ಮಾನ್ಯ ಅಧ್ಯಕ್ಷರೇ, ನಗರಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಕೆಲವೊಂದು ಸಂಭಾವನೆ ಕೊಡತಕ್ಕ ವಿಷಯದಲ್ಲಿ ತಿದ್ದುಪಡಿ ತಂದಿದ್ದಾರೆ. ಮೊದಲನೆ ವರ್ಗಕ್ಕೆ 100-75 ಹಾಗೂ ಇನ್ನೊಂದು ವರ್ಗಕ್ಕೆ 150-200 ಎಂದು ಮಾಡಿದ್ದಾರೆ. 10 ಸಾವಿರ ದಿಂದ 30 ಸಾವಿರ ಜನ ಸಂಖ್ಯೆಯಿರುವ

ನಗರಸಭೆಗಳಲ್ಲಿ ಅಧ್ಯಕ್ಷರಾದವರು ಕೆಲಸ ಮಾಡಬೇಕಾದರೆ, ಸಾಕಷ್ಟು ಸಮಯವನ್ನು ನಗರಸಭೆಯಲ್ಲಿಯೇ ಕಳೆಯಬೇಕಾಗುತ್ತದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿ ದುಡ್ಡಿದ್ದವರು ಬರುತ್ತಾರೆ, ದುಡ್ಡಿಲ್ಲದೇ ಇರುವವರು ಬರುತ್ತಾರೆ. ನಮ್ಮಲ್ಲಿ ಒಬ್ಬರು ಅಧ್ಯಕ್ಷರಾಗುವುದಕ್ಕಾಗಿ 60-70 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಗರಸಭೆಯ ಸದಸ್ಯರನ್ನೆಲ್ಲಾ ದೇಶಾಂತರ ಕರೆದುಕೊಂಡು ಹೋಗಿ ತಿರುಗಿಸಿದ್ದರು ಆ ಸಂದರ್ಭದಲ್ಲಿ ಚೆಕ್ ನೀಡಿದ್ದರು. ಮೂರು ವರ್ಷವಾದ ಮೇಲೆ ಆ ಬಗ್ಗೆ ದಾವಾ ಹಾಕಿ ನಂತರ ಡಿಕ್ರಿ ಆಯಿತು. ಸರ್ಕಾರ 10-20 ಸಾವಿರ ರೂಪಾಯಿಗಳನ್ನು ಸಂಭಾವನೆ ರೂಪದಲ್ಲಿ ಕೊಟ್ಟರೆ ಇಂಥಾದ್ದು ನಡೆಯುವುದಕ್ಕೆ ಅವಕಾಶವಾಗುವುದಿಲ್ಲ. ಬೆಂಗಳೂರು ನಗರದಲ್ಲಿ ಮೇಯರ್ ಆಗತಕ್ಕ ಕಾಲದಲ್ಲಿ ಇಂಥಾದ್ದು ನಡೆಯುತ್ತದೆ. ಯಾರು ಜಾಸ್ತಿ ಕೊಡುತ್ತಾರೋ ಅವರನ್ನು ಚುನಾಯಿಸುವುದು, ಪ್ರಜಾಪ್ರಭುತ್ವದಲ್ಲಿ ಇದ್ದವನು ಬರುತ್ತಾನೆ ಇಲ್ಲದವನು ಬರುತ್ತಾನೆ. ನಗರಸಭೆಯ ಅಧ್ಯಕ್ಷರಿಗೆ ಜವಾಬ್ದಾರಿ ಹಾಗೂ ಹೆಚ್ಚಿನ ಅಧಿಕಾರ ಕೊಟ್ಟಿದ್ದೀರಿ ಜವಾಬ್ದಾರಿಯುತವಾದ ಕೆಲಸವನ್ನು ದಿವಸದಲ್ಲಿ ಕನಿಷ್ಟ 8 ಗಂಟೆಗಳ ಕಾಲ ಮಾಡಬೇಕಾಗುತ್ತದೆ. ನೀವು ಕೊಡಬೇಕೆಂದಿರುವ 100-75 ರೂಪಾಯಿಗಳು ಸಾಕಾಗುವುದಿಲ್ಲ. ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ ನಗರಸಭೆಯ ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ ಏನೂ ಉತ್ಪತ್ತಿ ಇರುವುದಿಲ್ಲ. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿ ಮುಗಿಯುವಷ್ಟರಲ್ಲಿ 2-3 ಸಾವಿರ ರೂಪಾಯಿ ಸಾಲ ಮಾಡಿಕೊಂಡಿರುವವರು ನಮ್ಮ ಸಾಗರದಲ್ಲಿ ಇದ್ದು ಪಾಪರ್ ಆಗಿದ್ದಾರೆ. ಮೊದಲನೆ ವರ್ಗಕ್ಕೆ 200 ರೂಪಾಯಿ ಕೊಡಬೇಕು, ಉಪಾಧ್ಯಕ್ಷರಿಗೆ 100 ರೂಪಾಯಿ ಆದರೂ ಮಾಡಬೇಕು. ಕೆಲಸ ಬೇಕಾದರೆ ಜಾಸ್ತಿ ತೆಗೆದುಕೊಳ್ಳಿ. ತಾಲ್ಲೂಕು ಬೋರ್ಡು ಅಧ್ಯಕ್ಷರು ತಿಂಗಳಿಗೆ 100 ರೂಪಾಯಿ ಸಂಭಾವನೆ ಪಡೆಯುತ್ತಾರೆ. ತಾಲ್ಲೂಕು ಬೋರ್ಡಿಗೂ ಮತ್ತು ನಗರಸಭೆಗೂ ಏನು ವ್ಯತ್ಯಾಸ ಇದೆ? ಇವನು 30 ಸಾವಿರ ಜನ ಜವಾಬ್ದಾರಿ ಹೊರತ್ತಾನೆ. ಹಣಕಾಸು ಎಷ್ಟಿರುತ್ತದೆ? 30 ಸಾವಿರ ಜನಸಂಖ್ಯೆಯುಳ್ಳತಕ್ಕ ನಗರಸಭೆಗೆ 4-5 ಲಕ್ಷ ರೂಪಾಯಿ ಆದಾಯ ಇರುತ್ತದೆ. ಇಡೀ ತಾಲ್ಲೂಕು ಬೋರ್ಡಿಗೆ 2-3 ಲಕ್ಷ ರೂಪಾಯಿ ಆದಾಯ ಇರುವುದಿಲ್ಲ. ನಗರಸಭೆಯಲ್ಲಿ ಕೆಲಸ ಜಾಸ್ತಿಯಿದ್ದರೂ ತಾವು ಏನು ಕೊಡುವುದಕ್ಕೆ ಏರ್ಪಾಡು ಮಾಡಿದ್ದೀರಿ ಅದು ಕಡಿಮೆಯಾಯಿತು. ಇತ್ತೀಚೆಗೆ ದಾವಣಗೆರೆಯಲ್ಲಿ ನಗರಸಭಾಧ್ಯಕ್ಷರ ಸಮ್ಮೇಳನ ನಡೆಯಿತು. ಅಲ್ಲಿನ ಶಿಫಾರಸ್ಸುಗಳ ಆಧಾರದ ಮೇಲೆ ತರಬೇಕಾದ ಪರಿಸ್ಥಿತಿ ಉದ್ಭವವಾಯಿತು ಎನ್ನುವ ಮಾತನ್ನು ಹೇಳಿದ್ದೀರಿ: ಸ್ವಾಮಿ ಅಲ್ಲಿ ಇದು ನನಗೆ ತಿಳಿದಮಟ್ಟಿಗೆ ತೀರ್ಮಾನವಾಗಿಲ್ಲ. ತಾವು ಕೂಡ ಆ ಸಭೆಯಲ್ಲಿ ಹಾಜರಿದ್ದೀರಿ. ತಮ್ಮ ಸಮಕ್ಷಮದಲ್ಲಿಯೇ ಅಲ್ಲಿ ಏನು ತೀರ್ಮಾನ ಮಾಡಿದ್ದಾರೆ; 100-75 ಎಂದು ತೀರ್ಮಾನ ಮಾಡಿಲ್ಲ. ಆ ಸಮ್ಮೇಳನಕ್ಕೆ ತಾವೇ ಕಾರಣಕರ್ತರಾಗಿದ್ದೀರಿ; ಅಲ್ಲಿ ತೀರ್ಮಾನ ಮಾಡಿದ್ದನ್ನು ಕೈಬಿಟ್ಟು ಈ ತಿದ್ದುಪಡಿ ತಂದಿರುವುದನ್ನು ನೋಡಿದರೆ; ತಾವು ಈ ಸಮ್ಮೇಳನ ನಡೆಯುವುದಕ್ಕೆ ಏತಕ್ಕೆ ಅವಕಾಶಕೊಟ್ಟಿರಿ. ಇಲ್ಲಿ ತೀರ್ಮಾನ ಮಾಡುವಂತಾದ್ದು ಏನೂ ಇಲ್ಲ ಎಂದು ಮಂತ್ರಿಗಳು ಹೇಳಿಬಿಟ್ಟಿದ್ದರೆ ಇಂಥಾದ್ದು ಉದ್ಭವವಾಗುತ್ತಾ ಇರಲಿಲ್ಲ. ತಾವು ಅಲ್ಲಿ ಭಾಗವಹಿಸಿದ್ದೀರಿ; ತಾವು ಒಬ್ಬ ಭಾಗದಾರಿಯಾಗಿ ಇದ್ದೀರಿ ಇಂಥಾದ್ದರಲ್ಲಿ ತಾವು ಹಿಂದೆ ಹೋದರೆ ಅದು ವಚನಭ್ರಷ್ಟತನವಾಗುತ್ತದೆ. ಅಧ್ಯಕ್ಷರೇ, ಇನ್ನೊಂದು ಏನು ಎಂದರೆ ಸೆಕ್ಷನ್ 72ಕ್ಕೆ ತಿದ್ದುಪಡಿ ತಂದಿದಾರೆ. ಇದು ಹೆಚ್ಚು ಕಡಿಮೆ ನಗರಸಭೆಗಳ ಮೂಲಭೂತವಾದ ಕರ್ತವ್ಯ. ನಿವೇಶನಗಳನ್ನು ಹಂಚತಕ್ಕದ್ದು; ಸರ್ಕಾರದ ಪೂರ್ವಭಾವಿ ಅನುಮತಿ ಪಡೆದು ಇವತ್ತು ಹಂಚಿಕೆ ಮಾಡತಕ್ಕದ್ದು ಅದರ ಮೂಲ ಉದ್ದೇಶ. ನಮ್ಮ ಅನುಭವದ ಪ್ರಕಾರ ಒಂದು ಸಣ್ಣ ನಿವೇಶನ ಕೊಡುವುದಾದರೂ ಅದು ಸರ್ಕಾರದಿಂದ ಮಂಜೂರು ಆಗಬೇಕು. ಸರ್ಕಾರಕ್ಕೆ ಬರೆಯುವಾಗ, ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳು, ಡಿವಿಜನಲ್ ಕಮೀಷನರ್, ಕಾರ್ಯದರ್ಶಿ, ಡೆಪ್ಯುಟಿ ಕಾರ್ಯದರ್ಶಿ ಅಲ್ಲಿಂದ ಮಂತ್ರಿಗಳಿಗೆ ಒಂದೊಂದು ಕಡೆಯೂ ಒಂದು ತಿಂಗಳು ಕಳೆದು ಸರ್ಕಾರದಲ್ಲಿ ಎರಡು ತಿಂಗಳು ಕಳೆದು; ಒಂದು ನಿವೇಶನ ಮಂಜೂರು ಆಗಬೇಕಾದರೆ; ಕನಿಷ್ಟಪಕ್ಷ ಅಲ್ಲಿಂದ ಇಲ್ಲಿಗೆ ಬಂದು ವಾಪಸ್ಸು ಹೋಗಬೇಕಾದರೆ 6 ತಿಂಗಳು ಮೇಲ್ಪಟ್ಟು ಆಗುತ್ತದೆ. ಇಲ್ಲಿಗೆ ಬಂದಮೇಲೆ ಕಾರ್ಯದರ್ಶಿಗಳು ಏನಾದರೂ ಒಂದು ಕೊಕ್ಕೆ ಹಾಕುತ್ತಾರೆ; ಮತ್ತೆ ಅದು ಯಥಾಪ್ರಕಾರ ಮುನಿಸಿಪಾಲಿಟಿಗೆ ಹೋಗುತ್ತದೆ. ಹೀಗಾಗಿ ನಗರಸಭೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನಿವೇಶನ ಇಲ್ಲದೇ ಇರತಕ್ಕವರಿಗೆ ನಿವೇಶನ ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ನಿಮ್ಮ 20 ಅಂಶದ ಕಾರ್ಯಕ್ರಮದಲ್ಲಿ ಇದೂ ಒಂದು ಅಂಗ. ಎಲ್ಲಿ ನೋಡಿದರೂ ಇದರ ಬಗ್ಗೆ

ಪ್ರಚಾರ ನಡೆಯುತ್ತಿದೆ; ನಿನ್ನೆ ಎಗ್ಸಿಬಿಷನ್‌ಗೆ ಹೋಗಿದ್ದೆ ಅಲ್ಲಿ ಕೂಡ 20 ಅಂಶದ ಕಾರ್ಯಕ್ರಮ ಇವೆ; ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ; ಕೃಷ್ಣ ಫ್ಲೋರ್ ಮಿಲ್‌ನವರಿಗೂ 20 ಅಂಶ ಕಾರ್ಯಕ್ರಮಕ್ಕೂ ಏನು ಸಂಬಂಧ? ಅವನು ಕಾಪ ಮಿಲ್ಲಿನ ಮುಂದೆ ಒಂದು ಬೋರ್ಡು ಹಾಕಿದ್ದಾರೆ. ಇವತ್ತು ಇದು ಒಂದು ದೊಡ್ಡ ಕಾರ್ಯಕ್ರಮ; ಇದರ ಬಗ್ಗೆ ರಿಲಿಜನ್ ಇರಬೇಕು; ಇವನ್ನು ಜಾರಿಗೆ ತರತಕ್ಕ ಮನೋಭಾವ ಇರಬೇಕು; ಅಲ್ಲಿ ಇದರ ಪ್ರಚಾರ ನಡೆಯಬೇಕು. ಈ ಸನ್ನಿವೇಶದಲ್ಲಿ ಮತ್ತೆ ಸರ್ಕಾರ ಈ ಬಗ್ಗೆ ಅವಕಾಶ ಇಟ್ಟುಕೊಳ್ಳುವುದಾದರೆ, ಸಕಾಲದಲ್ಲಿ ಸಮಯಬದ್ಧವಾಗಿ ನಿವೇಶನ ಹಂಚತಕ್ಕ ಕೆಲಸ ಆಗುವುದಿಲ್ಲ. ಕನಿಷ್ಠಪಕ್ಷ ನಿವೇಶನ ಹೀನರಿಗೆ; ವಸತಿ ಹೀನರಿಗೆ ಹಂಚಿಕೆ ಮಾಡುವುದಾದರೂ ಸಂಪೂರ್ಣ ಸ್ವಾಯತ್ತತೆ ಹಾಗೂ ಸರ್ವಾಧಿಕಾರವನ್ನು ನಗರಸಭೆಗಳಿಗೆ ಕೊಡುವುದು ಒಳ್ಳೆಯದು. ಟ್ರಸ್ಟ್ ಮುಂತಾದುವುಗಳ ಬಗ್ಗೆ ನಿಮ್ಮ ಅಧಿಕಾರ ಇಟ್ಟುಕೊಳ್ಳಿ. ಈ ವಿಚಾರದಲ್ಲಿ ದಾವಣಗೆರೆಯ ಸಮ್ಮೇಳನದಲ್ಲಿ ಸಾಕಷ್ಟು ಚರ್ಚೆಯಾಗಿದೆ ಎಂದು ತಿಳಿದಿದ್ದೇನೆ. ಈ ಬಗ್ಗೆ ಎಲ್ಲಾ ನಗರಸಭಾ ಅಧ್ಯಕ್ಷರು ಒತ್ತಾಯ ಮಾಡಿದ್ದಾರೆ; ಅವರ ಕಷ್ಟಸುಖಗಳನ್ನು ಹೇಳಿಕೊಂಡಿದ್ದಾರೆ. ಸರ್ಕಾರಿ ಅಧಿಕಾರಿಗಳ ಮಟ್ಟದಲ್ಲಿ ಎಷ್ಟು ತಡವಾಗುತ್ತಿದೆ; ಡಿಲೆಯಾಗುತ್ತದೆ ಎಂಬುದನ್ನು ತಮ್ಮ ಮುಂದೆ ನಿವೇದನೆ ಮಾಡಿಕೊಂಡಿದ್ದಾರೆ. ಹಿಂದು ಸಾರಿ ಮಾನ್ಯ ಬಸವಲಿಂಗಪ್ಪನವರು ಪೌರಾಡಳಿತ ಮಂತ್ರಿಗಳಾಗಿದ್ದಾಗ 50-100 ನಿವೇಶನಗಳ ಹಂಚಿಕೆ ಬಗ್ಗೆ ಒಂದು ವರ್ಷ ಓಡಾಡಿದ್ದೇನೆ. 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರತಕ್ಕ ಆತ್ಮವಿಶ್ವಾಸ ತಮಗೆ ಇರುವುದಾದರೆ; ಸೆಕ್ಷನ್ 72ಕ್ಕೆ ತಂದಿರುವ ತಿದ್ದುಪಡಿಯನ್ನು ಕೈಬಿಟ್ಟು ಸಂಪೂರ್ಣ ಅಧಿಕಾರವನ್ನು ನಗರಸಭೆಗೆ ಕೊಡಬೇಕು ಎಂದು ಹೇಳುತ್ತೇನೆ. ಮತ್ತೆ ಬೇಕಾದರೆ ಅವರು ಸಮಯವನ್ನು ತೆಗೆದುಕೊಂಡು ಹೇಳಲಿ. ಈ ನಗರಸಭೆಯಲ್ಲಿ ಏನೇನು ತೊಂದರೆಗಳು ಇವೆ ಎನ್ನುವುದನ್ನು ಆಲೋಚನೆ ಮಾಡಿ ನೋಡಲಿ. ಅವರಿಗೆ 'ಹೌದು' ಅನಿಸುವುದಾದರೆ ಇದರ ಬಗ್ಗೆ ಪುನರ್ವಿಮರ್ಶೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಕೆ ನಾಯಕರ್.—72ನೇ ಕ್ಲಾಸ್‌ನಲ್ಲಿ ಬರತಕ್ಕಂಥಾದ್ದು ಏನು ಎಂದರೆ ಈ ಮುನಿಸಿಪಾಲಿಟಿಗೆ ಸಂಬಂಧಪಟ್ಟಂತೆ ಆಸ್ತಿ ಏನು ಇದೆ ಇಮ್ಮೂವಬಲ್ ಪ್ರಾಪರ್ಟಿ ಏನು ಇದೆ ಅದನ್ನು ಸೇಲ್‌ಗಾಗಲಿ ಅಥವಾ ಲೀಸ್ ವಗೈರೆಗಾಗಲಿ ಅವರು ಕೊಡಬೇಕಾಗಿದ್ದರೆ ಅದಕ್ಕೆ ಸರ್ಕಾರದ ಪ್ರೀವಿಯಸ್ ಅಪ್ರೂವಲ್ ಪಡೆಯಬೇಕು ಅಂತ ಇದೆ. ಅದು ಯಾವಾಗ ಎಂದರೆ ಆ ಪ್ರಾಪರ್ಟಿ ವ್ಯಾಲ್ಯೂ 2 ಸಾವಿರ ರೂಪಾಯಿಗಿಂತ ಹೆಚ್ಚಾಗಿದ್ದರೆ ಸರ್ಕಾರದಿಂದ ಪ್ರೀವಿಯಸ್ ಅಪ್ರೂವಲ್ ಪಡೆಯಬೇಕು ಅಂತ ಇದೆ. ಅದಕ್ಕೆ ನಾವು ಏನು ಮಾಡಿದ್ದೇವೆ ಎಂದರೆ ಆ ಪ್ರಾಪರ್ಟಿ ವ್ಯಾಲ್ಯೂ 5 ಸಾವಿರಕ್ಕಿಂತ ಹೆಚ್ಚಾಗಿದ್ದರೆ ಅವರು ಆ ಆಸ್ತಿಯನ್ನು ಸೇಲ್‌ಗಾಗಲಿ, ಲೀಸ್ ವಗೈರೆಗಾಗಲಿ ಕೊಡಬೇಕಾಗಿದ್ದರೆ ಸರ್ಕಾರದ ಪ್ರೀವಿಯಸ್ ಅಪ್ರೂವಲ್ ಪಡೆಯಬೇಕು ಅಂತ ಮಾಡಿದ್ದೇವೆ ಆ ಬಗ್ಗೆ ಇರತಕ್ಕಂಥಾ ಜವಾಬ್ದಾರಿ ಸರ್ಕಾರಕ್ಕೆ. ಮುನಿಸಿಪಾಲಿಟಿಯವರಿಗೆ ಆ ಒಂದು ಜವಾಬ್ದಾರಿ ಇಲ್ಲ. ಅವರು ಯಾವ ಪ್ರಾಪರ್ಟಿಯನ್ನು ವಿಲೇವಾರಿ ಮಾಡುತ್ತಾರೆ ಅದು ಸಾವಿರಕ್ಕಿಂತ ಹೆಚ್ಚು ವ್ಯಾಲ್ಯೂಯಬಲ್ ಆಗಿದ್ದರೆ ಮಾತ್ರ ಅದು ಸರ್ಕಾರದ ಪ್ರೀವಿಯಸ್ ಅಪ್ರೂವಲ್‌ಗೆ ಬರಬೇಕು ಅಂತ ಇದರಲ್ಲಿ ಇದೆ.

ಅದೇ ರೀತಿಯಾಗಿ 5 ಸಾವಿರಕ್ಕಿಂತ ಹೆಚ್ಚು ವಾಲ್ಯೂ ಇದ್ದರೆ ಆ ಕಾಂಟ್ರಾಕ್ಟ್ ಬಗ್ಗೆಯೂ ಇದೇ ರೀತಿ ಇದೆ. ಈ ಒಂದು ಸ್ವಾಯತ್ತತೆ ಮುನಿಸಿಪಾಲಿಟಿಗೆ ಇಲ್ಲ ಆದರೆ ಮಾನ್ಯ ಸದಸ್ಯರು ಸೈಟಿನ ಬಗ್ಗೆ ಏನು ಹೇಳಿದರು ಅದು ಇದರಲ್ಲಿ ಬರುವುದಿಲ್ಲ. 20 ಅಂಶದ ಕಾರ್ಯಕ್ರಮದಲ್ಲಿ ಈ ಸೈಟುಗಳನ್ನು ಹಂಚತಕ್ಕಂಥಾ ಕಾರ್ಯಕ್ರಮ ಪ್ರತ್ಯೇಕವಾಗಿ ಇದೆ. ಸೈಟು ಹಂಚುವ ಕಾರ್ಯಕ್ರಮ ಸರ್ಕಾರಕ್ಕೆ ಇದೆ, ಇದು ಮುನಿಸಿಪಾಲಿಟಿಗೆ ಸಂಬಂಧಪಟ್ಟ ಆಸ್ತಿಯನ್ನು ವಿಲೇವಾರಿ ಮಾಡಬೇಕಾದರೆ ಈ ರೀತಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದಕ್ಕೆ ನಾನು ಉತ್ತರ ಹೇಳುತ್ತೇನೆ. ಇದನ್ನು ನಾನು ಸಾಕ್ಷೀಭೂತವಾಗಿ ಹೇಳುತ್ತೇನೆ, ಇದು ಗಾಳಿ ಮಾತಲ್ಲ. ಉದಾಹರಣೆ ಕೊಡುತ್ತೇನೆ. ಸಾಗರ ನಗರಸಭೆಗೆ ಸುಮಾರು 18-20 ಎಕರೆ ಜಮೀನನ್ನು ರೆವಿನ್ಯೂನಿಂದ ಮುನಿಸಿಪಾಲಿಟಿಗೆ ಟ್ರಾನ್ಸ್‌ಫರ್ ಮಾಡಿದರು. ಇದು ಮುನಿಸಿಪಾಲಿಟಿ ಆಸ್ತಿಯಾಯಿತು ಅಲ್ಲವೇ ಸ್ವಾಮಿ?

ಶ್ರೀ ಡಿ. ಕೆ. ನಾಯಕರ್.—ಅದು ಮುನಿಸಿಪಾಲಿಟಿ ಆಸ್ತಿಯಾಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ಅಂತಹ ಆಸ್ತಿಯನ್ನು ವಿತರಣೆ ಮಾಡಬೇಕಾದರೆ ಸರ್ಕಾರಕ್ಕೆ ತಿಳಿಸಿ ಕೊಡಬೇಕು. ಆದರೆ ಇದರಲ್ಲಿ ಈ ರೀತಿ ಇದೆ:—

"No free grant of immovable property whatever may be its value, no grant for an upset price and no lease for a term exceeding five years, and no sale or other transfer of immovable property exceeding two thousand rupees in value shall be valid unless the previous sanction of the Government is obtained."

ತಾವು ಇದರಲ್ಲಿ ಏನು ಮಾಡಿದ್ದೀರಿ ಎಂದರೆ 2 ಸಾವಿರ ಅಂತ ಇದ್ದುದನ್ನು 5 ಸಾವಿರಕ್ಕೆ ಏರಿಸಿದ್ದೀರಿ. On what basis you have arrived at that valuation? ಅವರು ಅಪ್‌ಸೆಟ್ ಪ್ರೈಸ್‌ಗೆ ಕೊಡುವ ಹಾಗಿದ್ದರೆ ನಿಮ್ಮ ಹತ್ತಿರವೇ ಅವರು ಬರಬೇಕಾಗಿಲ್ಲ. ಈಗ ನಗರಸಭೆಯಲ್ಲಿ ಸ್ಲಮ್ಸ್ ಬೇಕಾದಷ್ಟು ಇವೆ. ಆ ಜನರಿಗೆ ಅಪ್‌ಸೆಟ್ ಪ್ರೈಸ್‌ನಲ್ಲಿ ಕೊಡುತ್ತೇವೆ ಎಂದರೂ ಕೂಡ ಅದಕ್ಕೆ ಅಲಿನಿಯೇಷನ್ ಛಾರ್ಜಸ್, ಕಾಸ್ಟ್ ಆಫ್ ವರ್ಕ್ ಇವೆಲ್ಲವನ್ನು ವರ್ಕ್ ಮಾಡಿ ಅದಕ್ಕೆ ಒಂದು ಬೆಲೆ ನಿಗದಿ ಮಾಡಬೇಕಾಗಿದೆ. ಈ ರೀತಿ ಮಾಡಿದರೆ ಅವರಿಗೇನು ಪ್ರಯೋಜನವಾಗುತ್ತದೆ? ನಿಮಗೆ ಹೇಳಬೇಕಾದರೆ ಈವೊತ್ತು ಯಾವ ಮನುಷ್ಯನಿಗೇ ಆಗಲಿ 20' × 30' ಅಡಿ ಜಾಗ ಒಂದು ಕುಟುಂಬಕ್ಕೆ ಬೇಕೇ ಬೇಕಾಗುತ್ತದೆ. ಈ ಒಂದು ಸಣ್ಣ ನಿವೇಶನಕ್ಕಾದರೂ ಮಾರ್ಕೆಟ್ ವ್ಯಾಲ್ಯೂ ಕಂಡುಹಿಡಿದರೂ ಕೂಡ ಅದಕ್ಕೂ 5 ಸಾವಿರ ರೂಪಾಯಿ ಮೇಲೆ ಆಗುತ್ತದೆ. ಆದಾಗ್ಯೂ ಕೂಡ ಇದು ಮಾರ್ಕೆಟ್ ವ್ಯಾಲ್ಯೂ ಕಂಡುಹಿಡಿಯುವ ವಿಧಾನವಲ್ಲ. ಮುನಿಸಿಪಾಲಿಟಿ ಆಕ್ಟ್‌ನಲ್ಲಿ ಕೂಡ ಇದಕ್ಕೆ ಬೇರೆ ಫಾರ್ಮುಲಾ ಇಲ್ಲ. ಇದಕ್ಕೆ ಮಾರ್ಕೆಟ್ ವ್ಯಾಲ್ಯೂ ಕಂಡುಹಿಡಿಯಬೇಕಾದರೆ ಸಬ್‌ರಿಜಿಸ್ಟ್ರಾರ್ ಆಫೀಸಿಗೆ ಹೋಗಿ ಅಲ್ಲಿರುವ ದಾಖಲೆಗಳನ್ನು ನೋಡಬೇಕಾಗುತ್ತದೆ ಸುತ್ತಮುತ್ತ ಇರುವ ಪ್ರಾಪರ್ಟಿ ಯಾವ ರೀತಿ ಪರ್ಚೇಸ್ ಮಾಡಿದ್ದಾರೆ ಅನ್ನುವುದನ್ನೂ ಕೂಡ ಒಂದು ಆಧಾರ ಇಟ್ಟುಕೊಂಡು ಈ ಒಂದು ಜಾಗಕ್ಕೆ ವ್ಯಾಲ್ಯೂಯೇಷನ್ ಕಂಡುಹಿಡಿಯಬೇಕಾಗುತ್ತದೆ. ನೀವು ಯಾವುದಾದರೂ ಒಂದು ಫಾರ್ಮುಲಾ ಇಟ್ಟುಕೊಂಡು ಆ ಮುನಿಸಿಪಾಲಿಟಿಯವರು ಆ ಜಾಗಕ್ಕೆ ಏನು ಅಸೆಸ್‌ಮೆಂಟ್ ಮಾಡಿದ್ದಾರೆ ಅದರ ಒಂದು ಆಧಾರದ ಮೇಲೆ ಏನಾದರೂ ಒಂದು ವ್ಯಾಲ್ಯೂ ಮಾಡುವ ಹಾಗೆ ಮಾಡಿದ್ದರೆ ಪರವಾಯಿಲ್ಲ. ಅದೂ ಇಲ್ಲ. ಅದು 500 ರೂಪಾಯಿ ಬೆಲೆಬಾಳುವ ಸೈಟು ಆದರೂ ಆಗಬಹುದು. ಒಂದುವೇಳೆ ಆ 500 ರೂಪಾಯಿ ಸೈಟನ್ನು ಒಬ್ಬರು ಮಾರಾಟ ಮಾಡುತ್ತಾರೆ ಎಂದು ಇಟ್ಟುಕೊಳ್ಳೋಣ. ಅಸಿಸ್ಟೆಂಟ್ ಕಮೀಷನರ್ ಹೇಳುತ್ತಾರೆ, ಅಲ್ಲದೆ ಡೆಪ್ಯೂಟಿ ಕಮೀಷನರೂ ಸಹ ಹೇಳುತ್ತಾರೆ ಆ ಸೈಟು 5 ಸಾವಿರ ರೂಪಾಯಿ ವ್ಯಾಲ್ಯೂ ಆಗುತ್ತದೆ ಎಂದು ಹೇಳುತ್ತಾರೆ. ಆವಾಗ ನೀವು ಅದರ ಬಗ್ಗೆ ಇನ್‌ಫರ್ಮೇಷನ್ ಅನ್ನು ಕಲೆಕ್ಟ್ ಮಾಡಬೇಕಾಗುತ್ತದೆ. ಅದಕ್ಕೆ ರೆವಿನ್ಯೂ ಇನ್‌ಸ್ಪೆಕ್ಟರನ್ನು ಕರೆದು ವಿಚಾರಿಸಿ ಅದು 5 ಸಾವಿರ ರೂಪಾಯಿ ವ್ಯಾಲ್ಯೂ ಆಗುತ್ತದೆಯೇ ಏನು ಅನ್ನುವುದನ್ನು ವಿಚಾರಿಸಬೇಕಾಗುತ್ತದೆ. ಇಷ್ಟೆಲ್ಲಾ ತೊಂದರೆ ಇರುವುದರಿಂದ ನಾನು ಹೇಳುವುದು ಈ 72ನೇ ಕ್ಲಾಸನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ನನಗೆ ಗೊತ್ತು. ತಮಗೆ ಈ ಬಗ್ಗೆ ಕೆಲವು ಅನುಮಾನಗಳು ಇವೆ. ಕೆಲವು ನಗರಸಭೆಗಳಲ್ಲಿ ಇದರ ದುರುಪಯೋಗ ನಡೆದಿದೆ. ಕೆಲವು ನಗರಸಭೆಯಲ್ಲಿ ತನ್ನದೇ ಅದಂಥಾ ಆಸ್ತಿಯನ್ನು 200 ರೂಪಾಯಿಗೆ ಕೊಡುತ್ತಾರೆ ಎಂದು ತಿಳಿದುಕೊಂಡಿದ್ದೀರಿ. ಅಪ್‌ಸೆಟ್ ಪ್ರೈಸ್‌ನಂತೆ ಅವರು 500 ರೂಪಾಯಿಗೆ ಕೊಟ್ಟಿದ್ದಾರೆಯೇ ಅನ್ನುವ ಅನುಮಾನ ಬರುತ್ತದೆ. ಈ ಸೆಕ್ಷನ್ ಪ್ರಕಾರ ಅಪ್‌ಸೆಟ್‌ಪ್ರೈಸ್‌ನಲ್ಲಿರತಕ್ಕಂಥಾ ಆಸ್ತಿಯನ್ನು ಅವರು ವಿತರಣೆ ಮಾಡುವ ಕಾಲದಲ್ಲಿ ಸರ್ಕಾರದ ಪೂರ್ವಭಾವಿ ಅನುಮತಿ ಇಲ್ಲದೆ ಕೊಡುವ ಹಾಗಿಲ್ಲ. ಪ್ರಿವಿಯಸ್ ಸ್ಯಾಂಕ್ಷನ್ ಅವಶ್ಯಕವಾಗಿ ಬೇಕೇ ಬೇಕು. ಅಪ್‌ಸೆಟ್ ಪ್ರೈಸ್‌ನಲ್ಲಿ ಯಾರಿಗಾದರೂ ಕೊಡಬೇಕಾಗಿದ್ದರೂ ಕೂಡ ಡಿಸರ್ವಿಂಗ್ ಪರ್ಸನ್ಸ್, ಸೈಟ್‌ಲೆಸ್ ಪರ್ಸನ್ ಇದ್ದರೆ ಅಂಥಾವರಿಗೆ ಕೊಡಿ.

ಶ್ರೀ ಡಿ. ಕೆ. ನಾಯಕರ್.—ಆದರಲ್ಲೂ ದುರುಪಯೋಗ ಆದರೆ?

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಅಧಿಕಾರಿಯೇ ಆಗಲಿ ರೂಲ್ಸ್ ಅಂಡ್ ಪ್ರೊಸೀಜರ್ ಅನ್ನು ವಯಲೇಟ್ ಮಾಡಿದರೆ ಆತನು ಶಿಕ್ಷೆಗೆ ಗುರಿಯಾಗಲೇ ಬೇಕು. ಆದಕ್ಕೆ ನಾನು ಹೇಳುವುದು ಈಗ ದರಖಾಸ್ತು ಜಮೀನನ್ನು ಕೊಡಬೇಕಾದರೆ ಯಾವರೀತಿಯಾಗಿ ರೂಲ್ಸ್ ಅಂಡ್ ಪ್ರೊಸೀಜರ್ ಮಾಡಿದ್ದೀರೋ ಆರೀತಿ ಮಾಡಲಿ. ದರಖಾಸ್ತಿನಲ್ಲಿ ಯಾವರೀತಿಯಾಗಿ ಅಪ್ಲಿಕೇಷನ್ ಕರೆದು ರೆವಿನ್ಯೂ ಇನ್‌ಸ್ಪೆಕ್ಟರಿಂದ ಮಹಜರ್ ವಗೈರೆ ನಡೆದು, ಯಾವರೀತಿಯಾಗಿ ಪ್ರಿಯಾರಿಟಿ ಕೊಟ್ಟು ಆ ಜಮೀನನ್ನು ವಿತರಣೆ ಮಾಡುತ್ತಾರೋ ಆರೀತಿ ಮಾಡಲಿ. ನಿಮಗೆ ಒಂದು ಉದಾಹರಣೆ ಹೇಳುವುದಾದರೆ ಸೊರಬ ತಾಲ್ಲೂಕಿನ ತಾಸೀಲ್ದಾರರು ಅವರಿಗೆ ಟ್ರಾನ್ಸ್‌ಫರ್ ಆದಮೇಲೆ ಸುಮಾರು 300-400 ಎಕರೆ ಜಮೀನನ್ನು ಬೇರೆಯವರಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಯಾವ ಅಧಿಕಾರಿ ಈ ರೀತಿಯಾಗಿ ರೂಲ್ಸ್ ಅಂಡ್ ಪ್ರೊಸೀಜರನ್ನು ವಯಲೇಟ್ ಮಾಡಿದರೆ ಆತನಿಗೆ ಶಿಕ್ಷೆ ಆಗುವಂತೆ ಒಂದು ರೂಲ್ಸ್ ಮಾಡಿರಿ. ಯಾರು ಮೋಸ ಮಾಡುತ್ತಾರೋ ಯಾರು ವಂಚನೆ ಮಾಡುತ್ತಾರೋ ಅಂಥಾವರಿಗೆ ಶಿಕ್ಷೆ ಕೊಡುವಂತೆ ಒಂದು ರೂಲ್ಸ್ ಮಾಡಿರಿ. ಮಾಡುವರು ಏನಾದರೂ ಮಾಡುತ್ತಾರೆ. ಒಂದು ಮನೆಯಲ್ಲಿ ಒಬ್ಬರು ಇದ್ದರೆ 4 ಜನರಿಗೆ ಆ ದರಖಾಸ್ತು ಜಮೀನನ್ನು ಮಂಜೂರು ಮಾಡುತ್ತಾರೆ, ವಂಚನೆ, ಮೋಸ ಮಾಡಬೇಕಾದರೆ ಮಾಡುವವರು ಯಾವ ಕಾರಣದಿಂದಲಾದರೂ ಯಾವರೀತಿಯಲ್ಲಾದರೂ ಮಾಡುತ್ತಾರೆ ಅದಕ್ಕೇನೂ ಮಾಡುವುದಕ್ಕಾಗುವುದಿಲ್ಲ. ಆದರೆ ನಾನು ಹೇಳುವುದು ಸರ್ಕಾರದ ವತಿಯಿಂದ ಇವರ ಮೇಲ್ವಿಚಾರಣೆ ಬಗ್ಗೆ ಸಾಕಷ್ಟು ಜಾಗ್ರತೆ ವಹಿಸಿ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ಈ ನಿವೇಶನಗಳ ವಿತರಣೆಯ ಕಾರ್ಯಕ್ರಮವನ್ನು ಸರ್ಕಾರದವರೇ ಇಟ್ಟುಕೊಂಡಿದ್ದಾರೆ. ನಾನು ಹೇಳುವುದು ಈ ಬಗ್ಗೆ ಒಂದು ನಿಯಮಾವಳಿ ಮಾಡಿಕೊಂಡು ನಗರಸಭೆಗೂ ಈ ಒಂದು ಅಧಿಕಾರವನ್ನೂ ಕೊಡಿ. ಈ ನಗರಸಭೆಯವರು ನಿವೇಶನವನ್ನು ಕೊಡುವಾಗ ಏನಾದರೂ ರೂಲ್ಸ್ ಅಂಡ್ ಪ್ರೊಸೀಜರ್ ಅನ್ನು ವಯಲೇಷನ್ ಮಾಡಿದರೆ ಅದಕ್ಕೆ ಅವರೇ ಬಾಧ್ಯರಾಗುತ್ತಾರೆ. ಅಥವಾ ಯಾವ ಅಧಿಕಾರಿಯೇ ಆಗಲಿ ರೂಲ್ಸ್ ಅಂಡ್ ಪ್ರೊಸೀಜರ್ ವಯಲೇಷನ್ ಮಾಡಿದರೆ ಅವರು ಭಾಧ್ಯರಾಗುತ್ತಾರೆ. ಅದುಬಿಟ್ಟು ಎಲ್ಲಾ ಅಧಿಕಾರವೂ ಸರ್ಕಾರದ ಹತ್ತಿರ ಇರುವುದು ಸರಿಯಾದುದಲ್ಲ ಎಂದು ಹೇಳುತ್ತೇನೆ. ದಯವಿಟ್ಟು ಈ ವಿಷಯದ ಬಗ್ಗೆ ತಾವು ಪುನರ್‌ಪರಿಶೀಲಿಸಬೇಕು. ತಾವು ಈಗ ಇದಕ್ಕೆ ಏನೊಂದು ತಿದ್ದುಪಡಿ ತಂದಿದ್ದೀರೋ ಅದು ಅಷ್ಟು ಸಹಾಯಕವಾಗಿಲ್ಲ ಎಂದು ಹೇಳುತ್ತೇನೆ. ನೀವು ತಂದಿರುವುದು ಯಾವ ಪ್ರಾಪರ್ಟಿಯೇ ಆಗಲಿ ವಿತರಣೆ ಮಾಡಬೇಕಾಗಿದ್ದರೆ 2 ಸಾವಿರ ಇದ್ದುದನ್ನು 5 ಸಾವಿರ ಇದ್ದರೆ ಮಾತ್ರ ಅದಕ್ಕೆ ಸರ್ಕಾರದ ಪ್ರೀವಿಯಸ್ ಅಪ್ರೂವಲ್ ಪಡೆಯಬೇಕು ಅಂತ ಮಾಡಿದ್ದೀರಿ. ಫ್ರೀಗ್ರಾಂಟ್ ಇದ್ದರೆ, ಅಪ್‌ಸೆಟ್ ಪ್ರೈಸ್‌ನಲ್ಲಿ ಕೊಡುವುದಾದರೆ ಈ ತಿದ್ದುಪಡಿಯಿಂದ ಏನು ಸಹಾಯಕವಾಗುತ್ತದೆ ಹೇಳಿ. ದಾವಣಗೆರೆ ಸಮ್ಮೇಳನದಲ್ಲಿ ಈ ಬಗ್ಗೆ ಮಂತ್ರಿಗಳು ಏನೋ ಸಹಾಯ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದರು; ಏನೋ ಉದ್ಧಾರ ಮಾಡುತ್ತಾರೆ ಎಂದು ಅವರು ತಿಳಿದುಕೊಂಡಿದ್ದರು. ಈ ರೀತಿ ಕಣ್ಣಿಗೆ ಮಣ್ಣು ಎರಚುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ದಯವಿಟ್ಟು ಈ 72ನೇ ಕ್ಲಾಸ್ ಅನ್ನು ದೀರ್ಘವಾಗಿ ಪರ್ಯಾಲೋಚನೆ ಮಾಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ನೀವು ಯಾವಾಗ ಈ ಒಂದು ಅಧಿಕಾರವನ್ನು ತಮ್ಮ ಕೈಯಲ್ಲಿಟ್ಟುಕೊಳ್ಳಬೇಕೆಂದರೆ, ಈಗ ಉದಾಹರಣೆಗೆ ಮಾನ್ಯ ಶಾಮಣ್ಣನವರು ಬೆಂಗಳೂರು ನಗರಸಭೆಯವರು ಯಾರೋ ಭಟ್ ಎಂಬುವರಿಗೆ ನಗರಸಭೆಗೆ ಸೇರಿದ ಬೆಲೆ ಬಾಳುವಂತಹ ಜಾಗವನ್ನು ಕೊಟ್ಟರು ಎಂದು ಹೇಳಿದರು. ಅದೇರೀತಿ ಕೃಷ್ಣ ಫ್ಲೋರ್ ಮಿಲ್ ನವರಿಗೆ ಬೆಂಗಳೂರು ನಗರಸಭೆಯವರು ಬೆಲೆ ಬಾಳುವ ಜಾಗವನ್ನು ಅಂದರೆ ಹತ್ತು ಲಕ್ಷ ರೂ. ಬೆಲೆ ಬಾಳುವ ಜಾಗವನ್ನು ಸುಲಭ ಬೆಲೆಗೆ ೩೦ ವರ್ಷದ ಲೀಸ್‌ಗೆ ಕೊಟ್ಟಿದ್ದಾರೆಂದು ಹೇಳಿದರು. ಇಂತಹ ಸಂದರ್ಭಗಳಲ್ಲಿ ಬೇಕಾದರೆ ಸರ್ಕಾರದ ಅನುಮತಿ ಇಲ್ಲದೆ ಕೊಡಬಾರದೆಂದು ಕಡ್ಡಾಯ ಹಾಕಿ. ಇಂತಹ ಬೆಲೆ ಬಾಳತಕ್ಕಂಥ ಸೈಟ್‌ಗಳನ್ನು ಮಾನ್ಯ ಕೃಷ್ಣನ್ ಅವರಿಗೂ ಕೊಟ್ಟರೆ ಅವರು ಬೇಡವೆಂದು ಹೇಳುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ವೈಯಕ್ತಿಕವಾಗಿ ನನಗೆ ಸೈಟ್ ಬೇಕೆಂದು ಕೇಳಿಲ್ಲ. ಆದರೆ ನಮ್ಮ ಪಾರ್ಟಿಯ ಹೆಸರಿನಲ್ಲಿ ಅಂತಹ ಜಾಗವನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ —ಏನಿದ್ದರೂ ಇಂತಹ ಜಾಲ ಮಾಡಿ ಇಂತಹ ದೊಡ್ಡ ಸೈಟ್‌ಗಳನ್ನು ಪಡೆಯಬಹುದೇ ಹೊರತು, ವೈಯಕ್ತಿಕವಾಗಿ ಸಂಪಾದನೆ ಮಾಡಲು ಯಾರಿಗೂ ಸಾಧ್ಯವಾಗುವುದಿಲ್ಲ. ಅಲ್ಲದೆ ನಾನು ಕೆಲವು ಪ್ರಾಮಾಣಿಕತನವಾದಂಥ ಗುಣಗಳನ್ನು ಅಳವಡಿಸಿಕೊಂಡಿರುವುದರಿಂದ, ಈ ರೀತಿ ಯಿಂದ ಸೈಟ್‌ಗಳನ್ನು ಪಡೆಯಲು ಹೋಗುವುದಿಲ್ಲ. ಒಟ್ಟಿನಲ್ಲಿ ನಾನು ಹೇಳುವುದೇನೆಂದರೆ, ಲಾಭದಾಯಕ ವಾದಂಥ ನಿವೇಶನಗಳನ್ನು ನಗರಸಭೆಯವರು ಬೇರೆಯವರಿಗೆ ಕೊಡತಕ್ಕಂಥ ಕಾಲದಲ್ಲಿ ಸರ್ಕಾರದ ಪೂರ್ವಭಾವಿ ಮಂಜೂರಾತಿ ಪಡೆದು ಕೊಡಬೇಕು ಎಂಬತಕ್ಕಂಥ ಅಧಿಕಾರವನ್ನು ಬೇಕಾದರೆ ಇಟ್ಟುಕೊಳ್ಳಿ. ಆದರೆ ನಗರಸಭೆಯವರು ಪರದೇಶಿಗಳಿಗೆ ಕೊಡುವ ಸೈಟಿನ ವಿಚಾರದಲ್ಲಿಯೂ ತಾವು ಅಧಿಕಾರ ಇಟ್ಟು ಕೊಂಡರೆ ಅದು ಯಾವ ಸಮಾಜವಾದವಾಗುತ್ತದೆ ? ಈ ಒಂದು ತಿದ್ದುಪಡಿಯು ಹೊಸ ವ್ಯವಸ್ಥೆಯ ಅವತಾರವಾಗಿದೆ, ಹೊಸ ವ್ಯವಸ್ಥೆಯ ಪುನರ್ನಿರ್ಮಾಣವಾಗಿದೆ ಎಂದು ನನಗೆ ಕಾಣುವುದಿಲ್ಲ. ಇಲ್ಲಿ ಹೊಸದಾಗಿ ಏನೂ ಬದಲಾವಣೆ ಮಾಡಿದಂತೆ ಕಾಣುತ್ತಿಲ್ಲ, ೨೦ ಅಂಶದ ಕಾರ್ಯವನ್ನು ಈ ದೇಶದಲ್ಲಿ ಜಾರಿಗೆ ಕೊಟ್ಟಮೇಲೆ, ಒಂದು ಹೊಸ ಸಮಾಜವನ್ನು ನಿರ್ಮಾಣ ಮಾಡುತ್ತೇವೆ, ಒಂದು ಹೊಸ ವ್ಯವಸ್ಥೆ ಯನ್ನು ನಿರ್ಮಾಣ ಮಾಡುತ್ತೇವೆ ಎಂಬತಕ್ಕಂಥ ಒಂದು ಬಹುದೊಡ್ಡ ಕಿರೀಟಧಾರಣೆ ಮಾಡಿದಿರಿ. ಆದರೆ ಇವೊತ್ತು ಕೆಲಸ ಮಾಡತಕ್ಕಂಥ ಕಾಲದಲ್ಲಿ ಮಾರ್ವಾಡಿ ತರಹ ಅಸಲು ಹೋದರೂ ಪರವಾಗಿಲ್ಲ, ಬಡ್ಡಿ ಬರಲಿ ಎನ್ನತಕ್ಕಂಥ ಸಮಾಜವಾದವನ್ನು ಜಾರಿಗೆ ತರುವುದಕ್ಕೆ ಹೊರಟಿದ್ದೀರಿ. ಇದು ಸಮಾಜವಾದದ ಬಗ್ಗೆ ವಿಚಾರ ಮಾಡತಕ್ಕಂಥ ರೀತಿನೀತಿಯೋ ಎಂದು ತಮ್ಮನ್ನು ಕೇಳುತ್ತೇನೆ. ಈಗ ಕಾಲ ಮುಂದೆ ಹೋಗಿದೆ. ಮತ್ತು ಇನ್ನೂ ಹೋಗಬೇಕಾಗಿದೆ. ಆದರೆ ತಾವು ಮಾತ್ರ ಹಳೆಯ ಶಾನುಭೋಗರ ತರಹವೇ ಅಧಿಕಾರ ತಮ್ಮ ಬಳಿಯೇ ಇರಬೇಕೆಂದು ಹೇಳಿದರೆ ಅದು ನಿಜವಾದ ಸಮಾಜವಾದ ವಾಗುವುದಿಲ್ಲ ಆದ್ದರಿದ ಈ ಒಂದು ಅಧಿಕಾರವನ್ನು ದಯವಿಟ್ಟು ನಗರಸಭೆಗಳಿಗೇ ಕೊಡಬೇಕೆಂದು ಹೇಳುತ್ತೇನೆ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಅಧಿಕಾರವಿರಬೇಕು ಎನ್ನುವ ಸಿದ್ಧಾಂತವನ್ನು ನಾವು ಒಪ್ಪಿ ಕೊಂಡಿದ್ದೇವೆ. ಮತ್ತು ಅಧಿಕಾರ ವಿಕೇಂದ್ರೀಕರಣವಾಗಬೇಕೆಂಬ ಸಿದ್ಧಾಂತವನ್ನು ಸಹ ನಾವು ಒಪ್ಪಿ ಕೊಂಡಿದ್ದೇವೆ ಅದರಂತೆ ನಾವು ಸ್ಥಾನೀಕ ಸಂಸ್ಥೆಗಳಿಗೆ ಪೂರ್ಣವಾದಂಥ ಸ್ವಾಯತ್ತತೆಯನ್ನು ಕೊಟ್ಟರೆ, ಅವು ಚೆನ್ನಾಗಿ ಕೆಲಸ ಮಾಡುತ್ತವೆ. ಅವುಗಳು ಏನಾದರು ತಪ್ಪು ಮಾಡಿದರೆ, ಅವುಗಳ ವಿರುದ್ಧವಾಗಿ ಕ್ರಮ ಕೈಕೊಳ್ಳುವುದಕ್ಕೆ ತಮಗೆ ಅಧಿಕಾರವಿದ್ದೇ ಇದೆ. ಈಗಾಗಲೇ ಒಬ್ಬರು ಅಧ್ಯಕ್ಷರನ್ನು ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಅವರ ವಿರುದ್ಧ ಕ್ರಮ ತೆಗೆದ ಕೊಂಡಿರಿ, ಅದನ್ನು ಹೈಕೋರ್ಟಿನವರೂ ಸಹ ಒಪ್ಪಿಕೊಂಡರು. ಆದ್ದರಿಂದ ತಪ್ಪು ಮಾಡಿದವರನ್ನು ಆ ಜಾಗದಿಂದ ಕಿತ್ತುಹಾಕುವುದಕ್ಕೆ ಮತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬೇಕಾದಂಥ ಅಧಿಕಾರವನ್ನು ತಾವು ಇಟ್ಟುಕೊಂಡು, ಉಳಿದಂತೆ ಎಲ್ಲ ಕೆಲಸಗಳನ್ನು ಮಾಡಲು ಅವರಿಗೆ ಅಧಿಕಾರ ಕೊಡಬೇಕು. ಆದರೆ ಈ ವಿಚಾರದಲ್ಲಿ ತಾವು ಸಾಕಷ್ಟು ವಿಚಾರ ಮಾಡದೆ ಈ ತಿದ್ದುಪಡಿಯನ್ನು ಮಾಡಿದ್ದೀರಿ. ಮಾನ್ಯ ಸಚಿವರು ಈ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡಿದ್ದರೆ ಇಂತಹ ತಿದ್ದುಪಡಿಯನ್ನು ತರುವುದಕ್ಕೆ ಹೋಗುತ್ತಿರಲಿಲ್ಲ, ಈಗಲಾದರೂ ಕೂಡ ಈ ಬಗ್ಗೆ ನಾನು ಹೇಳಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸರಿಯಾದಂಥ ತೀರ್ಮಾನಕ್ಕೆ ಬರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನನ್ನ ಸ್ನೇಹಿತರಾದಂಥ ಮಾನ್ಯ ಕೃಷ್ಣನ್ ಅವರು ಮಾತನಾಡುವಾಗ, ಮುನಿಸಿಪಾಲಿಟಿ ಗಳನ್ನು ಪಂಚಾಯತಿಗಳನ್ನಾಗಿ ಪರಿವರ್ತನೆ ಮಾಡುವ ಕೆಲಸ ಸಾಧುವಾದುದಲ್ಲ. ಆ ಕೆಲಸಕ್ಕೆ ಸರ್ಕಾರ ದವರು ಕೈಹಾಕಬಾರದು ಇದನ್ನು ಪ್ರಗತಿಪರವಾದಂಥ ಯಾವ ವಿಚಾರವಾದಿಗಳೂ ಒಪ್ಪುವುದಿಲ್ಲವೆಂದು ಹೇಳಿದ್ದಾರೆ. ನಾವು ಪ್ರಗತಿಯ ಮಾರ್ಗದಲ್ಲಿ ಹೊರಟಿರತಕ್ಕಂಥ ಕಾಲದಲ್ಲಿ ಮತ್ತು ಪ್ರಗತಿಯ ದೃಷ್ಟಿ ಯಿಂದ, ಪ್ರಗತಿಪರ ವಾದದಿಂದ ವಿಚಾರ ಮಾಡುವುದಾದರೆ ಮಾನ್ಯ ಕೃಷ್ಣನ್ ಅವರ ವಾದವನ್ನು ನಾನು ಒಪ್ಪುತ್ತೇನೆ. ಆದರೆ ನಮ್ಮ ಸರ್ಕಾರದವರಿಗೆ ಏನಿದ್ದರೂ ವಾದ ಬೇಕಾಗಿದೆಯೇ ಹೊರತು ಕೆಲಸ ಬೇಕಾಗಿಲ್ಲ. ಕೆಲಸ ಮಾಡುವ ವಿಚಾರದಲ್ಲಿ ಸರ್ಕಾರದವರು ಬಹಳ ಹಿಂದುಳಿದಿದ್ದಾರೆ. ಒಂದು ಕಡೆ ತಾವು ಬಹಳ ಪ್ರಗತಿವಾದಿಗಳೆಂದು ಹೊಗಳಿಕೊಳ್ಳುತ್ತಿದ್ದಾರೆ. ಆದರೆ ಕೆಲಸದಲ್ಲಿ ಮಾತ್ರ ೨೫ ವರ್ಷ ಗಳಷ್ಟು ಹಿಂದಿದ್ದಾರೆಂದು ವಿಚಾರವಾದಿಗಳು ಹೇಳುತ್ತಿದ್ದಾರೆ. ಆದಕಾರಣ ಈ ರೀತಿ ಮಾಡುವುದಕ್ಕೆ ತಾವು ಹೋಗಬಾರದು. ಒಂದು ಸಲ ನಗರಸಭೆ ಎಂದು ಮಾಡಿದಮೇಲೆ, ಆ ನಗರಸಭೆಯವರು ಜನತೆಗೆ ಬೇಕಾದ ಎಲ್ಲ ಸವಲತ್ತುಗಳನ್ನು ಒದಗಿಸಿಕೊಡುತ್ತಾರೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳು ತ್ತಾರೆ. ಜೊತೆಗೆ ನಗರಸಭೆ ಎಂದು ಆದಮೇಲೆ ಕಂದಾಯ ಹಾಕುವ ವಿಧಾನವೇ ಬೇರೆ ಮತ್ತು ಅದರ ಆಡಳಿತವಿಧಾನವೇ ಬೇರೆಯಾಗುತ್ತದೆ. ಈ ದೃಷ್ಟಿಯಿಂದ ನಗರಸಭೆಗಳನ್ನು ಪಂಚಾಯಿತಿಗಳ ಮಟ್ಟಕ್ಕೆ

ಇಳಿಸುವುದು ಸಾಧ್ಯವಾದಂಥ ಕೆಲಸವಲ್ಲ ಎಂದು ಹೇಳುತ್ತೇನೆ. ಪಂಚಾಯಿತಿಗಳ ಆಡಳಿತ ವಿಧಾನವೇ ಬೇರೆಯಾಗಿರುತ್ತದೆ. ಆ ವಿಧಾನದಿಂದ ಬೇರೆ ಒಂದು ವ್ಯವಸ್ಥೆಗೆ ಹೋದಮೇಲೆ ಪುನಃ ಹಿಂದಿನ ವ್ಯವಸ್ಥೆಗೇ ವಾಪಸ್ ಬರುವುದು ಅಷ್ಟೊಂದು ಚೆನ್ನಾಗಿ ಕಾಣುವುದಿಲ್ಲ. ಯಾವಾಗಲೂ ಮುಂದೆ ಹೋಗುತ್ತಿರಬೇಕು. ಒಂದು ಮೆಟ್ಟಿಲು ಹತ್ತಿದಮೇಲೆ ಮತ್ತೆ ಮೇಲಿನ ಮೆಟ್ಟಿಲಿಗೆ ಹತ್ತಬೇಕೇ ಹೊರತು ಕೆಳಕ್ಕೆ ಇಳಿಯು ಬಾರದು. ನಾವು ಈಗ ಪ್ರಗತಿಯ ಹಾದಿಯಲ್ಲಿ ಹೊರಟಿರುವಾಗ, ಅಲ್ಲಿಂದ ವಾಪಸ್ ಹಿಂದಕ್ಕೆ ನಿರ್ಗಮಿಸ ತಕ್ಕಂಥ ಕೆಲಸ ಮಾಡುವುದು ಸರಿಯಲ್ಲ. ಇದು ವಿಚಾರವಂತರು ಮಾಡುವಂತಹ ಕೆಲಸವಲ್ಲ. ಈ ಬಗ್ಗೆ ಮಾನ್ಯ ಕೃಷ್ಣನ್ ಅವರ ವಾದ ಏನಿದೆ, ಅದನ್ನು ನಾನು ಪುರಸ್ಕರಿಸುತ್ತೇನೆ ಮತ್ತು ಈ ಒಂದು ಕಲಂನ್ನು ಈ ತಿದ್ದುಪಡಿ ಮಸೂದೆಯಿಂದ ತೆಗೆದುಹಾಕಬೇಕೆಂದು ಒತ್ತಾಯಪಡಿಸುತ್ತೇನೆ. ಈ ಒಂದು ತಿದ್ದುಪಡಿ ಮಸೂದೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಎಲ್ಲಿ ಮೂಲಭೂತವಾಗಿ ಬದಲಾವಣೆಗಳನ್ನು ಮಾಡಬೇಕಾಗಿತ್ತೋ ಅಂತಹ ಕಡೆಗಳಲ್ಲಿ ಮಾಡದೆ ಕೇವಲ ತೋರುಗಾಣಿಕೆಗೆ ಕೆಲವೊಂದು ಬದಲಾವಣೆಗಳನ್ನು ಮಾಡಿದ್ದಾರೆ. ಈಗ ಮಾಡಿರತಕ್ಕಂಥ ತಿದ್ದುಪಡಿ ಗಳಿಂದ ಹೊಸ ಒಂದು ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಿಮ್ಮ ಈಗಿನ ಒಂದು ಹೊಸ ದೃಷ್ಟಿಕೋನದ ಪ್ರಕಾರ ನಗರಸಭೆಗಳಿಗೆ ಒಂದು ವಿಶಿಷ್ಟವಾದಂಥ ಸ್ಥಾನಮಾನಗಳನ್ನು ಕೊಡಬೇಕಾ ಗಿತ್ತು; ಆದರೆ ಆ ರೀತಿ ಇಲ್ಲಿ ಮಾಡಿಲ್ಲ. ನಾವು ಹೊಸ ಒಂದು ಸಮಾಜವನ್ನು ನಿರ್ಮಾಣ ಮಾಡ ಬೇಕೆಂದು ಹೊರಟಿರುವಾಗ ಸ್ಥಳೀಯ ಸಂಸ್ಥೆಗಳಿಗೂ ಸಹ ಅವರು ಸ್ವತಂತ್ರರಾಗಿ ಕೆಲಸ ಮಾಡಲು ಅವಕಾಶ ಕೊಡಬೇಕೇ ಹೊರತು, ಅವರ ಕೈಕಾಲುಗಳನ್ನು ಹಿಡಿಯುವುದಕ್ಕೆ ಹೋಗಬಾರದು. ನಮ್ಮ ಹಳೆಯ ಸಂಪ್ರದಾಯಗಳಿಗೆ ಬದಲು ಹೊಸ ಒಂದು ಕಾನೂನು ಮತ್ತು ನಿಯಮಗಳನ್ನು ರಚನೆ ಮಾಡತಕ್ಕಂಥ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಆದಷ್ಟು ಅಧಿಕಾರವನ್ನು ಬಿಟ್ಟುಕೊಡಬೇಕಾಗುತ್ತದೆ. ಆದರೆ ಕನ್‌ಸರ್‌ವೇಟಿಜಂ ಎಂದು ಹೇಳತಕ್ಕಂಥ ವಸ್ತುವನ್ನು ಈ ಕಾನೂನಿನಲ್ಲಿ ಅಳವಡಿಸಿಕೊಂಡಿದ್ದೀರಿ. ಅಂದರೆ ಅಧಿಕಾರವನ್ನು ಬಿಟ್ಟುಕೊಡುವುದಕ್ಕೆ ನೀವು ತಯಾರಾಗಿಲ್ಲ. ಕನ್‌ಸರ್‌ವೇಟಿವ್ ಅಪ್ರೋಚ್ ಇಟ್ಟುಕೊಂಡಿ ದ್ದೀರಿ. ಇದು ಸರಿಯಲ್ಲ, ಈ ಬಗ್ಗೆ ತಾವು ಸಮಗ್ರವಾಗಿ ಆಲೋಚನೆ ಮಾಡಿ ಹೊಸ ಒಂದು ತಿದ್ದುಪಡಿ ಯನ್ನು ತರಬೇಕೆಂದು ಹೇಳುತ್ತೇನೆ.

ಇನ್ನು ಸೆಕ್ಷನ್ ೬೬ಕ್ಕೆ ಒಂದು ತಿದ್ದುಪಡಿಯನ್ನು ಮಾಡಿದ್ದೀರಿ. ಅದು ಈ ರೀತಿ ಇದೆ :

"The Chairman of the Standing Committee shall be elected by the members thereof by the system of single transferable vote." ಎಂಬುದಾಗಿ ಸಾಮಾನ್ಯವಾಗಿ ನಗರಸಭೆಗಳಲ್ಲಿ ಈ ಸ್ಟಾಂಡಿಂಗ್ ಕಮಿಟಿಯೇ ಅತಿ ಹೆಚ್ಚಿನ ಅಧಿಕಾರ ಪಡೆದಿರುವ ಉಪಸಮಿತಿಯಾಗಿದೆ. ಕೌನ್ಸಿಲ್ ಸಭೆಯನ್ನು ಬಿಟ್ಟರೆ, ನಂತರ ಬರುವುದು ಈ ಸ್ಟಾಂಡಿಂಗ್ ಕಮಿಟಿ. ಆದಕಾರಣ ಇದರ ಅಧ್ಯಕ್ಷತೆಯನ್ನು ಸರ್ವೇಸಾಧಾರಣವಾಗಿ ನಗರಸಭಾಧ್ಯಕ್ಷರೇ ವಹಿಸುವುದು ಒಳ್ಳೆಯದು. ಏಕೆಂದರೆ, ಬಡ್ಜೆಟ್ ಪ್ರಪೋಜಲ್‌ಗಳನ್ನು ತಯಾರು ಮಾಡುವುದು, ಹಣಕಾಸಿನ ಬಗ್ಗೆ ವಿಚಾರ ಮಾಡುವುದು, ದೊಡ್ಡದೊಡ್ಡ ಕಾರ್ಯಕ್ರಮಗಳನ್ನು ಕೈಕೊಳ್ಳುವ ಬಗ್ಗೆ ವಿಚಾರ ಮಾಡುವುದು, ಯಾವುದೇ ಕಾಮಗಾರಿಯನ್ನು ನಿಲ್ಲಿಸುವ ಬಗ್ಗೆ ವಿಚಾರ ಮಾಡುವುದು, ಹೀಗೆ ನಾನಾ ವಿಚಾರಗಳ ಬಗ್ಗೆ ಸ್ಟಾಂಡಿಂಗ್ ಕಮಿಟಿಯೇ ತೀರ್ಮಾನ ಕೈಕೊಳ್ಳಬೇಕಾಗಿರುವುದರಿಂದ ನಗರ ಸಭಾಧ್ಯಕ್ಷರೇ ಅದರ ಅಧ್ಯಕ್ಷತೆಯನ್ನು ವಹಿಸುವುದು ಸೂಕ್ತವಾಗಿರುತ್ತದೆ. ಆದರೆ ಇಲ್ಲಿ ಸ್ಟಾಂಡಿಂಗ್ ಕಮಿಟಿ ಸದಸ್ಯರುಗಳ ಪೈಕಿಯೇ ಒಬ್ಬರನ್ನು ಅದರ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಮತ್ತು ನಗರ ಸಭಾಧ್ಯಕ್ಷರು ಎಕ್ಸ್–ಅಫಿಷಿಯೋ ಮೆಂಬರ್ ಆಗಿ ಆ ಕಮಿಟಿಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬಹು ದೆಂದು ಹೇಳಲಾಗಿದೆ. ಇದರ ಬದಲು ನಗರಸಭಾಧ್ಯಕ್ಷರೇ ಸ್ಟಾಂಡಿಂಗ್ ಕಮಿಟಿಯ ಅಧ್ಯಕ್ಷರಾದರೆ, ಆ ಕಮಿಟಿಯಲ್ಲಿ ಆದಂತಹ ತೀರ್ಮಾನಗಳನ್ನು ಕೌನ್ಸಿಲ್ ಮೀಟಿಂಗ್‌ನಲ್ಲಿ ಎತ್ತಿಹಿಡಿಯುವುದಕ್ಕೆ ಮತ್ತು ಅದನ್ನು ಪ್ರತಿಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಹಾಲಿ ತಾಲ್ಲೂಕ್ ಬೋರ್ಡಿನ ಅಧ್ಯಕ್ಷರು ಮತ್ತು ಪಂಚಾಯಿತಿ ಚೇರ್‌ಮೆನ್ ಅವರು ಅಲ್ಲಿಯ ಸ್ಟಾಂಡಿಂಗ್ ಕಮಿಟಿಯ ಅಧ್ಯಕ್ಷರಾಗಿಯೂ ಸಹ ಮುಂದುವರಿಯುವುದಕ್ಕೆ ಅವಕಾಶವಿದೆ.

2-00 ಪಿ.ಎಂ.

ಅನೇಕ ಸಾರಿ, ಸ್ಟ್ಯಾಂಡಿಂಗ್ ಕಮಿಟಿಗಳನ್ನು ಮಾಡಿದರೆ ಇವರು ಬಡ್ಜೆಟ್ಟನ್ನು ಪ್ರಿಪೇರ್ ಮಾಡುತ್ತಾರೆ, ಮಾಡಿದಂಥ ಕಾಲದಲ್ಲಿ ಅಧ್ಯಕ್ಷರು ಬೇರೆಯವರು ಇದ್ದರೆ, ಆಪಾದನೆಗಳು ಬರುವುದು ಉಂಟು. ಒಂದು ಸಾರಿ ಸ್ಟ್ಯಾಂಡಿಂಗ್ ಕಮಿಟಿಯವರು ತೀರ್ಮಾನ ಮಾಡಿದರೆ ಇದು ಕೌನ್ಸಿಲ್‌ನಲ್ಲಿ ಹೆಚ್ಚು ಮತವನ್ನು ಪಡೆಯಬೇಕಾಗುತ್ತದೆ. ಆದ್ದರಿಂದ ಇದಕ್ಕೂ ಸ್ವಲ್ಪ ಬೆಲೆ, ಜವಾಬ್ದಾರಿಯೂ ಕೂಡ ಇರುತ್ತದೆ. ಆದ್ದರಿಂದ ಈ ಕಮಿಟಿಗಳಲ್ಲಿ ಚುನಾಯಿತ ಪ್ರತಿನಿಧಿಯನ್ನು ಅಧ್ಯಕ್ಷರನ್ನಾಗಿ ಇಟ್ಟುಕೊಳ್ಳುವುದಕ್ಕೆ ಬದಲು ನಗರಸಭೆಯ ಅಧ್ಯಕ್ಷರನ್ನೇ ಇದರ ಅಧ್ಯಕ್ಷರನ್ನಾಗಿ ಮಾಡಿಕೊಳ್ಳುವುದು ಒಳ್ಳೆಯದು. ಪಂಚಾಯತಿ ಮತ್ತು ತಾಲ್ಲೂಕು ಬೋರ್ಡುಗಳಲ್ಲಿಯೂ ಇದೇ ತತ್ವವನ್ನು ಅಳವಡಿಸಿ ಕೊಂಡಿದ್ದಾರೆ. ಇದರಿಂದ ಸ್ಟ್ಯಾಂಡಿಂಗ್ ಕಮಿಟಿಗಳು ಅರ್ಥ ಪೂರ್ಣವಾಗಿ ಕೆಲಸ ಮಾಡುತ್ತವೆ. ನಗರಸಭೆಯ ಅಧ್ಯಕ್ಷರು, ಕಮಿಟಿಗಳ ಅಧ್ಯಕ್ಷರಾದರೆ, ಇದನ್ನು ಅವರು ಕೌನ್ಸಿಲ್‌ನ ಸಭೆಯಲ್ಲಿ ಎತ್ತಿ ಹಿಡಿದು ಪ್ರತಿಪಾದನೆ ಮಾಡುತ್ತಾರೆ. ಕೆಲಸ ಕಾರ್ಯಗಳ ದೃಷ್ಟಿಯಿಂದಲೂ ಸಹ ನಗರಸಭೆಯ ಅಧ್ಯಕ್ಷರುಗಳು ಸ್ಟ್ಯಾಂಡಿಂಗ್ ಕಮಿಟಿಯ ಅಧ್ಯಕ್ಷರಾಗಿರಬೇಕು ಇದನ್ನು ತಮ್ಮ ತಿದ್ದುಪಡಿಯಲ್ಲಿ ಅಳವಡಿಸಿಕೊಳ್ಳಬೇಕು ಎಂದು ಒತ್ತಾಯ ಪೂರ್ವಕವಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಶರಣಪ್ಪ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಗರಾಡಳಿತ ಮಂತ್ರಿಗಳು, ನಗರಸಭೆಯ ಒಂದು ಕಾನೂನಿನ ದರ ಒಂದು ಅಂಶದ ಬಗ್ಗೆಯಾ ತಿದ್ದುಪಡಿ ತಂದು ಸಭೆಯ ಮುಂದೆ ಇಟ್ಟಿರುವುದನ್ನು ನಾನು ಅನುಮೋದಿಸುತ್ತಾ ಕೆಲವೊಂದು ಸಲಹೆ ಸೂಚನೆಗಳನ್ನು ಕೊಡಲು ಇಷ್ಟಪಡುತ್ತೇನೆ. ಈಗ ಎಲ್ಲಾ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ನಗರಸಭೆಗಳ ಆಡಳಿತದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದುದನ್ನು ನಾನು ತಮ್ಮ ಗಮನಕ್ಕೆ ತಂದು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಡಿಸ್ಟ್ರಿಕ್ಟ ಡೆವಲಪ್‌ಮೆಂಟ್ ಕೌನ್ಸಿಲ್‌ಗಳು ಜಿಲ್ಲಾ ಮಟ್ಟದ, ತಾಲೂಕು ಮಟ್ಟದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಗುರಿಯಾಗಿಟ್ಟುಕೊಂಡು ಯಾವ ರೀತಿಯಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿವೆಯೋ ಹಾಗೆಯೇ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗಿ ಈ ಹೊಸ ಕಾಯಿದೆಯಲ್ಲಿ ತಾವು ಅವಕಾಶವನ್ನು ಕಲ್ಪಿಸಬೇಕಾಗಿದೆ ಮಾನ್ಯ ತಿಮ್ಮಪ್ಪನವರು ಹೇಳಿದ ಹಾಗೆ ನಗರಸಭೆಗಳಲ್ಲಿ ಸ್ಟ್ಯಾಂಡಿಂಗ್ ಕಮಿಟಿಗಳು ಇರುತ್ತವೆ. ಈ ಕಮಿಟಿಗಳಲ್ಲಿ ನಗರಸಭೆಯ ಅಧ್ಯಕ್ಷರೇ ಚೇರ್ಮನರು ಆದರೆ, ಇವರು ನಗರಸಭೆಯ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸಕಾರ್ಯಗಳನ್ನು ಸಾಧಿಸುವುದರಲ್ಲಿ ಹಾಗೂ ಸಂಬಂಧಪಟ್ಟ ತತ್ವಗಳನ್ನು ಪಾಲನೆ ಮಾಡುವಲ್ಲಿ, ಬರುವಂಥ ಎಡರುತೊಡರುಗಳನ್ನು ನಿವಾರಣೆ ಮಾಡುವುದಕ್ಕೆ ಸಹಾಯಕವಾಗುತ್ತದೆ. ಒಂದು ವೇಳೆ ಸ್ಟ್ಯಾಂಡಿಂಗ್ ಕಮಿಟಿಯ ಚೇರ್ಮನ್‌ರು ಬೇರೆಯವರು ಆದರೆ, ಅಲ್ಲಿ ಅನೇಕ ಭಿನ್ನಾಭಿಪ್ರಾಯಗಳು ಬರುತ್ತವೆ, ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತವಾಗುತ್ತವೆ. ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ತೆಗೆದುಕೊಂಡಂಥ ನಿರ್ಣಯಗಳು ಕೌನ್ಸಿಲ್‌ನಲ್ಲಿ ಬಿದ್ದುಹೋಗಬಹುದು. ಇದರಿಂದ ಏನಾಗುತ್ತದೆ ಎಂದರೆ, ಸ್ಟ್ಯಾಂಡಿಂಗ್ ಕಮಿಟಿಯ ನಿರ್ಣಯಗಳಿಗೆ ಹಾಗೂ ಅದು ಮಾಡುವಂಥ ಬಡ್ಜೆಟ್ಟಿಗೂ ಮಹತ್ವ ಇರುವುದಿಲ್ಲ ಬಡ್ಜೆಟ್ಟನ್ನು ತಯಾರು ಮಾಡುವುದು ಸ್ಟ್ಯಾಂಡಿಂಗ್ ಕಮಿಟಿಯ ಮುಖ್ಯ ಕೆಲಸವಾಗಿದೆ. ಇಂಥ ಕೆಲಸಗಳು ಕೌನ್ಸಿನಲ್ಲಿ ಬಿದ್ದು ಚೇರ್ಮನ್ ಮತ್ತು ಚೇರ್ಮನ್‌ರಿಗೆ ಭಿನ್ನಾಭಿಪ್ರಾಯ ಅನೇಕ ಅಭಿವೃದ್ಧಿ ಕಾರ್ಯಗಳು ನಿಂತು ಹೋಗುತ್ತವೆ. ಅದಕಾರಣ ಎಕ್ಸ್—ಆಫಿಷಿಯೋ ಅಧ್ಯಕ್ಷರಾಗಿ, ನಗರ ಸಮಿತಿಯ ಅಧ್ಯಕ್ಷರನ್ನು ಮಾಡುವುದಕ್ಕೆ ಈ ತಿದ್ದುಪಡಿಯಲ್ಲಿ ಅನುಮೋದಿಸಬೇಕಾಗುತ್ತದೆ ಎಂದು ನಾನು ಕೇಳಿಕೊಳ್ಳುತ್ತೇನೆ, ಮೊದಲು ಕೂಡಹಾಗೆಯೇ ಇತ್ತು.

ಇನ್ನೊಂದು ಅಂಶವೆಂದರೆ, ವೈಸ್ ಚೇರ್ಮನ್ ಆಗಲೀ, ಚೇರ್ಮನ್ ಆಗಲೀ ರಾಜೀನಾಮೆ ಕೊಡಬೇಕಾದರೆ, ಡೆಪ್ಯೂಟಿ ಕಮಿಷನರ್ ಅವರಿಗೆ ಕೊಡಬೇಕು. ನಮ್ಮಲ್ಲಿ ಡಿವಿಷನಲ್ ಕಮಿಷನರ್ ಅಥವಾ ಡೆವಲಪ್‌ಮೆಂಟ್ ಕಮಿಷನರ್ ಇರುವುದರಿಂದ ನಾವು ಯಾರಿಗೆ ರಾಜೀನಾಮೆಯನ್ನು ಕೊಡಬೇಕು ಎನ್ನುವುದು ಸ್ಪಷ್ಟವಾಗಿಲ್ಲ. ಇದರಲ್ಲಿ ತಾವು ಯಾರಿಗೆ ರಾಜೀನಾಮೆಯನ್ನು ಕೊಡಬೇಕು ಎನ್ನುವುದನು ಸ್ಪಷ್ಟೀಕರಣ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಹೈದರಾಬಾದ್ ಕರ್ನಾಟಕದಲ್ಲಿ ನಗರಸಮಿತಿಗಳ ಅಧ್ಯಕ್ಷರಿಗೆ ಭಾವನೆ ಕೊಡಬೇಕಾದ್ದು ಕಾಯಿದೆಯಲ್ಲಿ ಇರಲಿಲ್ಲ. ಆದಕಾರಣ, ನಗರಸಮಿತಿಯ ಅಧ್ಯಕ್ಷರು ಮತ್ತು ಪೌರಸಮಿತಿಯ ಅಧ್ಯಕ್ಷರು ಸಂಬಳ ಇಲ್ಲದೆ ಕೆಲಸ ಮಾಡತಕ್ಕ ಪ್ರಸಂಗ ಇತ್ತು. ಈಗ ನಗರ ಸಮಿತಿಯ ಅಧ್ಯಕ್ಷರಿಗೆ ೧೦೦ ರೂಪಾಯಿಗಳನ್ನು ಇಟ್ಟಿದ್ದಾರೆ, ವೈಸ್ ಚೇರ್ಮನ್ ಅವರಿಗೆ ೭೫ ರೂಪಾಯಿಗಳನ್ನು ಇಟ್ಟಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ನಿಗಧಿಮಾಡಿದ್ದಾರೋ ಗೊತ್ತಿಲ್ಲ. ನಗರಸಭೆಯ ಉತ್ಪನ್ನದ ಆಧಾರದ ಮೇಲೆ ಇವನ್ನು ಕೊಡುತ್ತಾರೋ ಅಥವಾ ಪಾಪುಲೇಷನ್ ದೃಷ್ಟಿಯಿಂದಲೋ, ಅಥವಾ ನಗರ ಪ್ರದೇಶದ ದೃಷ್ಟಿಯಿಂದಲೋ ಎನ್ನುವ ವಿಚಾರವನ್ನು ತಿಳಿಸಿಲ್ಲ. ಇಲ್ಲಿ ತಾಲ್ಲೂಕು ಬೋರ್ಡಿಗಿಂತ ಹೆಚ್ಚಿನ ಮಹತ್ವವುಳ್ಳ ಕೆಲಸಗಳು ಇರುವುದರಿಂದ ಇದನ್ನು ತಾವು ಸ್ಪಷ್ಟವಾಗಿ ಇಷ್ಟು ಎಂದು ಗೊತ್ತು ಮಾಡಬೇಕಾಗುತ್ತದೆ. ನಗರಸಭೆಯ ಸದಸ್ಯರಿಗೆ ಸ್ಯಾನಿಟರಿ, ಜವಾಬ್ದಾರಿ, ರಸ್ತೆಯ ಸ್ವಚ್ಛತೆ, ಮತ್ತು ಕೊಳಚೆ ಪ್ರದೇಶಗಳ ನಿರ್ಮೂಲನ ಜವಾಬ್ದಾರಿ, ಇತ್ಯಾದಿಗಳು ಇರುತ್ತವೆ. ಆದ್ದರಿಂದ ತಾಲ್ಲೂಕು ಬೋರ್ಡ್ ಅಧ್ಯಕ್ಷರುಗಳಿಗೆ ಏನು ತಿಂಗಳ ಸಂಬಳ ಗೊತ್ತು ಮಾಡಿದ್ದಾರೋ ಅದೇ ರೀತಿಯಲ್ಲಿ ಟೌನ್ ಮುನಿಸಿಪಾಲಿಟಿಯ ಅಧ್ಯಕ್ಷರಿಗೂ ಕೂಡ ಗೊತ್ತು ಮಾಡಬೇಕು. ಇವರಿಗೂ ಸಹ ಎರಡು ಸಾವಿರ ರೂಪಾಯಿಗಳನ್ನು, ಒಂದು ವರ್ಷಕ್ಕೆ ಗೊತ್ತು ಮಾಡಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಒಂದು ವಿಷಯ ಏನು ಎಂದರೆ ಈ ತಿದ್ದುಪಡಿಯಲ್ಲಿ ನಗರ ಸಮಿತಿಯ ಅಧ್ಯಕ್ಷರಿಗೆ ಹಾಗೂ ಕೌನ್ಸಿಲರ್‌ಗಳಿಗೆ ಕೆಲವೊಂದು ಅಧಿಕಾರ ಕೊಟ್ಟಿದ್ದರು ಮುಖ್ಯವಾಗಿ ಒಂದು ಸಂಶಯ ಏನು ಎಂದರೆ ಸರ್ಕಾರದ ಬಗ್ಗೆ ಹಿತ ಅಂದರೆ ಕಂಟ್ರೋಲ್ ಹೆಚ್ಚು ಕಾಣಿಸುತ್ತದೆ. ಅದರ ಒಂದು ಸ್ವಾತಂತ್ರ್ಯ, ಒಂದು ಹಕ್ಕುಬಾಧ್ಯತೆ ಜವಾಬ್ದಾರಿತನ ಅಷ್ಟೇನು ಕಂಡು ಬರುವುದಿಲ್ಲ. ಇದನ್ನು ತಾವು ಮತ್ತೊಮ್ಮೆ ಪುನರ್ ವಿಮರ್ಶೆ ಮಾಡಬೇಕು. ಕೊನೆಯದಾಗಿ ಮುನಿಸಿಪಾಲಿಟಿಯ ಉತ್ಪತ್ತಿಯಲ್ಲಿ ನಾಲ್ಕನೇ ಒಂದು ಅಂಶವನ್ನು ಕೇಂದ್ರ ಸರ್ಕಾರಕ್ಕೆ ಡಿಪಾಸಿಟ್ ಮಾಡಬೇಕೆಂದು ನಗರಾಭಿವೃದ್ಧಿಗೆ ತಿಳಿಸಿದ್ದಾರೆ. ಇದಕ್ಕೆ ಮೊದಲು ೧೨ವರೆ ಪರ್ಸೆಂಟ್ ಇತ್ತು. ಹಿಂದಕ್ಕೆ ಸೆಂಟ್ರಲ್ ಫಂಡ್ ಎಂದು ಕಲೆಕ್ಟ್‌ಮಾಡಿ ನಗರಾಭಿವೃದ್ಧಿ ಸಮಿತಿಯಿಂದ ಕೇಂದ್ರ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ತೆಗೆದುಕೊಳ್ಳತಕ್ಕಂಥ ಒಂದು ರೀತಿ ನೀತಿ ಇತ್ತು. ಈಗ ನಗರಾಭಿವೃದ್ಧಿ ಮಂಡಲಿಯ ನೆಟ್ ಇನ್‌ಕಂನಲ್ಲಿ ನಾಲ್ಕನೆಯ ಒಂದು ಭಾಗವನ್ನು ಕಡ್ಡಾಯವಾಗಿ ಕೊಡಬೇಕೆಂದು ಈ ಕಾಯಿದೆಯಲ್ಲಿ ತೋರಿಸಿದ್ದಾರೆ. ಇದು ಸಾಧುವಾದದ್ದು ಅಲ್ಲ. ನಗರಾಭಿವೃದ್ಧಿಯಲ್ಲಿ ಬಹಳ ತೊಂದರೆಗಳಾಗುತ್ತವೆ. ತಮ್ಮ ಮುಂದೆ ಈ ಒಂದು ತಿದ್ದುಪಡಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅನುಮತಿ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ)—ಮಾನ್ಯ ಅಧ್ಯಕ್ಷರೇ, ಪೌರಾಡಳಿತ ಸಚಿವರ ತಂದಿರತಕ್ಕಂಥ ಈ ತಿದ್ದುಪಡಿ ಮಸೂದೆಯನ್ನು ಉತ್ಪೂರ್ವಕವಾಗಿ ಸ್ವಾಗತಿಸುತ್ತಾ ಬಹಳ ಪ್ರಗತಿಪರವಾದ ಈ ಮಸೂದೆಯಲ್ಲಿ ಅನೇಕ ತಿದ್ದುಪಡಿಗಳನ್ನು ಹಿಂದೆ ಯಾರೂ ಕೂಡ ಯೋಚನೆಯನ್ನು ಮಾಡಿಲ್ಲದ ಇಷ್ಟು ಪ್ರಗತಿಪರವಾದ ವಿಚಾರಗಳನ್ನು ಮತ್ತು ಚಿಂತನೆಯನ್ನು ಮಾಡಿ ಇವರು ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಪ್ರಥಮವಾಗಿ ಈ ಸದಸ್ಯರ ಸಂಖ್ಯೆಯನ್ನು ಅಲ್ಲಿಯ ಜನಸಂಖ್ಯೆಯ ಆಧಾರವನ್ನಾಗಿ ಇಟ್ಟುಕೊಳ್ಳದೆ ಜನಸಂಖ್ಯೆ ಎಷ್ಟೇ ಜಾಸ್ತಿ ಇರಲಿ ಅಥವಾ ಕಡಿಮೆ ಇರಲಿ ಸಾಧಾರಣವಾಗಿ 15 ಜನರೆಂದು ಗೊತ್ತು ಮಾಡಿದ್ದರು. ಇದರಿಂದ ನಾಲ್ಕು ಸಾವಿರ ಜನಸಂಖ್ಯೆ ಇರತಕ್ಕಂಥ ಒಂದು ಸಣ್ಣ ಪಟ್ಟಣಕ್ಕೂ 11 ಜನ 50 ಸಾವಿರ ಪ್ರಜಾಸಂಖ್ಯೆ ಇರತಕ್ಕಂಥ ಪಟ್ಟಣಕ್ಕೂ 15 ಜನ ಎಂದು ಹಿಂದೆ ಈ ರೀತಿ ನಿಗದಿ ಮಾಡಿದ್ದರು. ಆದರೆ ಈಗ ನಮ್ಮ ಮಂತ್ರಿಗಳು ಆ ಬಗ್ಗೆ ಒಂದು ಸೂಕ್ತವಾದ ಆಧಾರವನ್ನು ಇಟ್ಟುಕೊಂಡು ಸದಸ್ಯರನ್ನು ನೇಮಕ ಮಾಡಬೇಕೆಂದು ಜೊತೆಗೆ ಚುನಾವಣೆಯಲ್ಲಿ ಬರಬೇಕಾದರೂ ಈ ಒಂದು ಆಧಾರ ಇರಬೇಕು ಎಂದು ಮಾಡಿದ್ದಾರೆ 10ಸಾವಿರ ಜನಸಂಖ್ಯೆ ಇದ್ದರೆ 9ಜನ 50 ಸಾವಿರದಿಂದ 75 ಸಾವಿರ ಜನರಿದ್ದರೆ 19ಜನ ಎಂದು ಮಾಡಿದ್ದಾರೆ. ಈ ರೀತಿ ಎಲ್ಲಾ ಕಡೆಯಲ್ಲಿಯೂ ಕೂಡ ಈ ಆಧಾರವನ್ನು ಇಟ್ಟಿದ್ದಾರೆ. ಇದನ್ನು ಮೆಚ್ಚುವಂತಹದ್ದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸದಸ್ಯರಿಗೆ ಹಿಂದೆ ಸಾಮಾನ್ಯವಾಗಿ ಕೆಲಸಮಾಡತಕ್ಕವರಿಗೆ ಏನಾದರೂ ಒಂದು ಸೌಲಭ್ಯ ಇರಬೇಕು ಮುನಿಸಿಪಾಲಿಟಿಯಲ್ಲಿ ಕೌನ್ಸಿಲರ್ ಆಗಲಿ, ಅಧ್ಯಕ್ಷರಾಗಲಿ ಉಪಾಧ್ಯಕ್ಷರಾಗಲಿ ಅವರಿಗೆ ಸಂಭಾವನೆ ಕೊಡತಕ್ಕಂಥಾದ್ದು ಇರಲಿಲ್ಲ. ಅಧ್ಯಕ್ಷರಿಗೆ

ಮತ್ತು ಉಪಾಧ್ಯಕ್ಷರಿಗೆ ಮಾತ್ರ ಸ್ವಲ್ಪ ಕೊಡುತ್ತಾ ಇದ್ದರು. ಅದರೆ ಶಾಸ್ತ್ರೀಯ ರೀತಿಯಲ್ಲಿ ನಿಗಧಿ ಮಾಡಿರಲಿಲ್ಲ. ಇವತ್ತಿನ ದಿವಸ ನಮ್ಮ ಮಂತ್ರಿಗಳು ತಂದಿರತಕ್ಕಂಥ ತಿದ್ದುಪಡಿಯಲ್ಲಿ ಎಲ್ಲಾ ಮುನಿಸಿಪಲ್ ಸದಸ್ಯರಿಗೂ ಕೂಡಾ ಆನರೇರಿಯಮ್ ಇರಬೇಕು. ಎಂದು ಇದೆ ತಮ್ಮ ಕೆಲಸ ಕಾರ್ಯಗಳ ಸಾರ್ವಜನಿಕ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಜೊತೆಗೆ ಅವರ ಕೈಯ್ಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳುದವುಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಈ ದರವನ್ನು ಎಲ್ಲಾ ಮುನಿಸಿಪಾಲಿಟಿ ಕೌನ್ಸಿಲರ್‌ಗಳಿಗೂ ಕೂಡ ಸಂಭಾವನೆ 50–75 ರೂಪಾಯಿಯ ತನಕ ಇರಬೇಕು ಮಾನ್ಯಮಂತ್ರಿಗಳು ಈ ತಿದ್ದುಪಡಿಯಲ್ಲಿ ತಂದಿದ್ದಾರೆ. ಇದು ಸ್ವಾಗತಿಸುವಂತಹ ವಿಚಾರ ಇದರಿಂದ ಮುನಿಸಿಪಾಲಟಿಯಲ್ಲಿ ಒಳ್ಳೆಯ ಕೆಲಸಕಾರ್ಯಗಳು ಆಗುತ್ತವೆ ಜೊತೆಗೆ ಬಹಳ ಕೆಲಸಗಳು ಇರುತ್ತವೆ. ಈ ಒಂದು ಸಂಭಾವನೆ ಕೊಡತಕ್ಕಂಥಾದ್ದು ಉಚಿತ ಮತ್ತು ಯೋಗ್ಯವೆಂದು ಹೇಳುವುದಕ್ಕೆ ನಾನಾದರೂ ಇಷ್ಟಪಡುತ್ತೇನೆ. ಈ ದಿಶೆಯಲ್ಲಿ ಮಾನ್ಯ ಮಂತ್ರಿಗಳು ಅಧ್ಯಕ್ಷರಿಗೆ 100 ರೂಪಾಯಿ ಮತ್ತು ಉಪಾಧ್ಯಕ್ಷರಿಗೆ 75 ರೂಪಾಯಿ ಹಾಗೆ ಮುನಿಸಿಪಲ್ ಕೌನ್ಸಿಲರ್ಸ್‌ಗಳಿಗೂ ಜೊತೆಗೆ ದೊಡ್ಡ ಮುನಿಸಿಪಾಲಿಟಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗೆ 200 ಹಾಗೂ 150 ರೂಪಾಯಿಯನ್ನು ಒಂದು ಶಾಸ್ತ್ರೀಯಲ್ಲಿ ಗೊತ್ತುಮಾಡಿದ್ದಾರೆ. ಹಿಂದಿನ ಹಾಗೆ ಏನೋ ಒಂದು ಕೊಡಬೇಕು ಎಂದು 50 ರೂಪಾಯಿ ಕೊಟ್ಟಿರತಕ್ಕಂಥಾದ್ದು ಅಲ್ಲ ಎಷ್ಟೋ ಮುನಿಸಿಪಾಲಿಟಿಗಳಲ್ಲಿ ಕೊಡುತ್ತಾ ಇರಲಿಲ್ಲ, ವರ್ಷಗಟ್ಟಲೆ ಪತ್ರವ್ಯವಹಾರ ಮಾಡಿ ತೆಗೆದುಕೊಂಡದ್ದು ಇದೆ. ಮುನಿಸಿಪಾಲಿಟಿಗಳಲ್ಲಿ ಸಾರ್ವಜನಿಕ ಕೆಲಸಕಾರ್ಯಗಳನ್ನು ಮಾಡುವವರಿಗೆ ಒಂದು ಸಂಭಾವನೆ ಕೊಡದೆ ಇದ್ದರೆ ಅಲ್ಲಿನ ಕೆಲಸಕಾರ್ಯಗಳನ್ನು ಕಷ್ಟವಾಗುತ್ತದೆ. ಇನ್ನು ನನ್ನ ಮಿತ್ರರು ಹೇಳಿದರು ತಾಲ್ಲೋಕು ಬೋರ್ಡಿನಲ್ಲಿ ಅಧ್ಯಕ್ಷರಿಗೆ ಕೊಡವ ರೀತಿ ಕೊಡಬೇಕು ಎಂದು. ಅಷ್ಟು ಕೊಡುವುದಕ್ಕೆ ಸಾಧ್ಯವಾಗದೆ ಇದ್ದರೂ ಯೋಗ್ಯರೀತಿಯಲ್ಲಿ ಮಾಡಿದ್ದಾರೆ. ಇವರು ಮಾಡಿರತಕ್ಕಂಥಾದ್ದು ಸಾಧುವಾದುದು ಆಗಿದೆ ಎಂದು ನಾವು ಎಲ್ಲರೂ ಕೂಡ ನಾಳೆ ಮೆಚ್ಚಲೇಬೇಕು ಎಂದು ನಾನು ಹೇಳುತ್ತೇನೆ.

ಇವತ್ತು ಆನೇಕ ಉದಾಹರಣೆಯನ್ನು ಕೊಡುವುದಾದರೆ, ಕೆಲವು ಕಡೆ ವ್ಯಾನ್‌ನ್ನು ಕಳುಯಿಸಿ ಕೊಟ್ಟು ಸದಸ್ಯರನ್ನು ಕರೆಸುತ್ತಾರೆ. ಅವರು ಬಂದರೆ ಬರಬಹುದು, ಬಿಟ್ಟರೆ ಬಿಡಬಹುದು, ಅನೇಕ ಮುನಿಸಿಪಾಲಿಟಿಗಳಲ್ಲಿ ಕೋರಂ ಇಲ್ಲದೇನೇ ಎಷ್ಟೋ ಮೀಟಿಂಗ್‌ಗಳೇ ನಡೆಯುವುದಕ್ಕೆ ಸಾಧ್ಯವಾಗಿಲ್ಲ. ಆದಕ್ಕೆ ಕಾರಣವಾದರೂ ಇಷ್ಟೆ ಅವರು ತಮ್ಮ ಸ್ವಂತ ಕೆಲಸ ಕಾರ್ಯಗಳನ್ನು ಬಿಟ್ಟು ಸಾರ್ವಜನಿಕ ಕೆಲಸಕಾರ್ಯಗಳಿಗೋಸ್ಕರ ಬರತಕ್ಕಂಥ ಸಂದರ್ಭದಲ್ಲ ಅವರಿಗೆ ಖರ್ಚಿಗಾದರೂ ಕೂಡ ಸ್ವಲ್ಪಮಟ್ಟಿಗೆ ಸಾಕಾಗುವಷ್ಟು, ಅವರು ಜನಗಳ ಕೆಲಸವನ್ನು ಮಾಡಲು ಓಡಾಡಲು ಬೇಕಾಗುವಷ್ಟು, ಮತ್ತು ಅವರು ಪ್ರಮಾಣಿಕತೆಯಿಂದ, ನಿಷ್ಠೆಯಿಂದ ಕೆಲಸ ಮಾಡುವುದಕ್ಕೆ ಅವರಿಗೆ ನಾವು ಸಾಕಷ್ಟು ಗೌರವ ಧನವನ್ನು ಕೊಡಬೇಕು ಎನ್ನುವುದನ್ನು ಸರ್ಕಾರ ಬಹಳ ವಿವೇಚನೆ ಮಾರ್ಗದಲ್ಲಿ ಹೋಗಿ ಈ ಕಾರ್ಯವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಅದಕ್ಕೆ ನಾವೆಲ್ಲರೂ ಕೂಡ ಅಭಿನಂಧನೆಯನ್ನು ಮಾನ್ಯ ಮಂತ್ರಿಗಳವರಿಗೆ ಸಲ್ಲಿಸಬೇಕಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಅವರು ನಿಜವಾಗಿಯೂ ಬಹಳ ಧೈರ್ಯದಿಂದ ಇದನ್ನು ತಂದಿದ್ದಾರೆ. ಇವರ ಬಗ್ಗೆ ಮಾನ್ಯ ಸದಸ್ಯರುಗಳು ಏನು ಹೇಳಿದ್ದಾರೆ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಗಣನೆಗೆ ತೆಗೆದುಕೊಂಡು ಮಾಡಿದ್ದಾರೆಂದು ನಾನಾದರು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಅಧ್ಯಕ್ಷರುಗಳಿಗೆ ಈ ಕಾರ್ಯದ ಬಗ್ಗೆ ಕೂಡ ಹಿಂದಿನ ಒಂದು ಆ್ಯಕ್ಟ್‌ನಲ್ಲಿ ಅಸಮಂಜಸವಾದ ರೀತಿಯಲ್ಲಿ ಇತ್ತು. ಅವರು ಯಾವುದೇ ಒಂದು ಸೂಚನೆಯನ್ನು ಕೊಡುವುದಕ್ಕೆ ಆಗಲೀ, ನಿರ್ದಿಷ್ಟವಾದ ಒಂದು ನಿರ್ದೇಶನವನ್ನು ಕೊಟ್ಟು ಕೆಲಸಕಾರ್ಯಗಳನ್ನು ನಡೆಯಿಸತಕ್ಕಂಥ ರೀತಿಯಲ್ಲಿ ಇರಲಿಲ್ಲ. ಅದನ್ನು ಕೂಡ ಮಾನ್ಯ ಮಂತ್ರಿಗಳು ಬದಲಾವಣೆ ಮಾಡಿ ಅಲ್ಲಿರತಕ್ಕಂಥ ಚೀಫ್ ಆಫೀಸರ ಆಗಲೀ ಕಮೀಷನರ್ ಆಗಲೀ ನಿರ್ದೇಶನ ಕೊಟ್ಟು ತೀರ್ಮಾನ ಮಾಡಿದಂಥ, ಕೌನ್ಸಿಲ್ ತೀರ್ಮಾನದಂತೆ, ಅವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅವರಿಗೆ ಅಧಿಕಾರ ಕೊಡತಕ್ಕಂಥದ್ದು ಕೂಡ ಅತಿಮುಖ್ಯ. ಈ ಬಗ್ಗೆ ತಂದಿರತಕ್ಕಂಥ ತಿದ್ದುಪಡಿ ಬಹಳ ಒಳ್ಳೆಯ ಸಮಂಜಸವಾದ ತಿದ್ದುಪಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತು ಇದರ ಬಗ್ಗೆ ಒಂದು ವಿಚಾರವನ್ನು ಮಾತ್ರ ಹೇಳಬೇಕಾಗುತ್ತದೆ. ಮಾನ್ಯ ಶ್ರೀ ಕಾಗೋಡು

ತಿಮ್ಮಪ್ಪನವರು ಹೇಳಿದರು ಈ ಸ್ಟ್ಯಾಂಡಿಂಗ್ ಕಮಿಟಿ ಅಧ್ಯಕ್ಷರನ್ನು ನೇಮಿಸುವಾಗ ಆಯಾಯ ಕೌನ್ಸಿಲ್ ಅಧ್ಯಕ್ಷರುಗಳೇ ಅಧ್ಯಕ್ಷರಾಗಿರತಕ್ಕಂಥದ್ದು ಉಚಿತವೆಂದು ಹೇಳಿ ತಾಲ್ಲೂಕ್ ಬೋರ್ಡ್‌ಗಳಲ್ಲಿ ಹಾಗೆ ಇದೆ ಎಂದು ಹೇಳಿ ಆ ಸಮಿತಿಗಳಿಗೂ ಕೂಡ ಅಧ್ಯಕ್ಷರಾಗಿರುವುದರಿಂದ ಇಲ್ಲೂ ಕೂಡ ಮಾಡಬಹುದಾಗಿತ್ತು ಎಂದು ಒಂದು ವಾದವನ್ನು ಹೂಡಿದರು, ಇನ್ನು ಕೆಲವು ಸಂದರ್ಭದಲ್ಲಿ ಕೆಲವು ಸದಸ್ಯರುಗಳಿಗೆ ಜವಾಬ್ದಾರಿಯನ್ನು ಕೊಟ್ಟು ಕೆಲಸ ಮಾಡಿಸತಕ್ಕಂಥದ್ದು ಯೋಗ್ಯ ತೀರ್ಮಾನವೆಂದು ಹೇಳಿ ನನಗೆನಿಸುತ್ತದೆ ಆದುದರಿಂದ ಇರತಕ್ಕಂಥ ಸದಸ್ಯರಲ್ಲಿ ಕೆಲಸ ಮಾಡತಕ್ಕ ದಕ್ಷತೆ ಇರತಕ್ಕಂಥವರಿಗೆ ಜವಾಬ್ದಾರಿಯನ್ನು ಕೊಟ್ಟು, ಮಾಡಿಸತಕ್ಕಂಥದ್ದು ಕೂಡ ಒಳ್ಳೆಯದು ಆ ಒಂದು ದೃಷ್ಟಿಯಿಂದ ಅಧ್ಯಕ್ಷರು ಅಲ್ಲದೇ ಇರತಕ್ಕಂಥವರು, ಉಪಾಧ್ಯಕ್ಷರು ಅಲ್ಲದೇ ಇರತಕ್ಕಂಥ ಸದಸ್ಯರನ್ನು ಆ ಸಮಿತಿಯ ಸದಸ್ಯರು ಆಗುವುದಕ್ಕೆ ಅವಕಾಶಗಳನ್ನು ಕಲ್ಪಿಸಿಕೊಂಡಿರತಕ್ಕಂಥದ್ದು ಒಂದು ದೃಷ್ಟಿಯಿಂದ ಒಳ್ಳೆಯದೆಂದು ನಾನಾದರೂ ಭಾವಿಸುತ್ತೇನೆ. ಆದುದರಿಂದ ಈಗ ಮಾನ್ಯ ಸಚಿವರು ತಂದಿರತಕ್ಕಂಥ ತಿದ್ದುಪಡಿ ಸರಿಯಾಗಿದೆ

ಶ್ರೀ ಕಾಗೋಡು ತಿಮ್ಮಪ್ಪ.— ಈಗ ಒಂದು ಬಡ್ಜೆಟ್‌ನ್ನು ಸ್ಟ್ಯಾಂಡಿಂಗ್ ಕಮಿಟಿ ತಯಾರು ಮಾಡುತ್ತಾರೆ. ಆ ಸ್ಟ್ಯಾಂಡಿಂಗ್ ಕಮಿಟಿ ತೀರ್ಮಾನದ ಪ್ರಕಾರ ಪ್ರಪೋಜಲ್‌ಗಳು ಕೌನ್ಸಿಲ್‌ಗೆ ಬರುತ್ತದೆ ಕೌನ್ಸಿಲ್‌ಗೆ ಬಂದಾಗ ಬೇರೆ ಪಾರ್ಟಿಯವರು ಅಧ್ಯಕ್ಷರಾಗಿರುತ್ತಾರೆ. ಆಗ ಆ ಕೌನ್ಸಿಲ್‌ನವರು ಅದಕ್ಕೆ ವಿರೋಧ ಮಾಡಿದರೆ ಆವಾಗ ಅದು ವಿರೋಧಾಭಾಸವಾಗುವುದಿಲ್ಲವೇ?

ಶ್ರೀ ಬಿ ಭೈರಪ್ಪಾಜಿ.— ಆ ರೀತಿ ವಿರೋಧ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವ ಪಕ್ಷ ಅಥವಾ ಗುಂಪು ಮೆಜಾರಿಟಿಯಲ್ಲಿರುತ್ತದೆಯೋ ಅವರೇ ಅಧ್ಯಕ್ಷರಾಗಿರುತ್ತಾರೆ ಮತ್ತು ಸ್ಟ್ಯಾಂಡಿಂಗ್ ಕಮಿಟಿಗೆ ಚುನಾಯಿತರಾಗಬೇಕಾದರೇ ಆ ಗುಂಪಿನ ಆ ಪಕ್ಷದ ಸದಸ್ಯರೇ ಆರಿಸಿ ಬಂದಿರುತ್ತಾರೆ. ಆದುದರಿಂದ ಎಲ್ಲರೂ ಕೂಡ ವಿರೋಧ ಮಾಡಿರತಕ್ಕಂಥದ್ದು ನಮ್ಮ ಗಮನಕ್ಕೆ ಕಂಡು ಬಂದಿಲ್ಲ, ಅದು ಸರ್ಕಾರದ ಗಮನಕ್ಕೂ ಕಂಡು ಬಂದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಇದು ಸರಿಯಾದಂಥ ಒಂದು ಸರ್ಕಾರದ ತೀರ್ಮಾನವಾಗಿದೆಂದು ನಾನಾದರೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅನೇಕ ತಿದ್ದುಪಡಿಗಳನ್ನು ತಂದಿದ್ದಾರೆ ಅದರಲ್ಲೂ ಕೂಡ ಬಹಳ ಪ್ರಗತಿಪರವಾಗಿ ತಿದ್ದುಪಡಿಗಳನ್ನು ಈ ಒಂದು ಪ್ರಗತಿದ್ಯೋತಕವಾಗಿರಲಿ. ಅನೇಕ ಸಂದರ್ಭದಲ್ಲಿ ಮುನಿಸಿಪಾಲಿಟಿಗಳಲ್ಲಿ, ಅಧ್ಯಕ್ಷರು ಆಗಲೀ, ಸದಸ್ಯರು ಆಗಲೀ ಸರಿಯಾದಂಥ ರೀತಿಯಲ್ಲಿ ಜನಗಳ ಒಂದು ಹಿತವನ್ನು ಬಯಸತಕ್ಕಂಥ ಒಂದು ಕೆಲಸಕಾರ್ಯಗಳನ್ನು ಮಾಡುವಾಗ ಕಾನೂನಿಗೆ ಕೆಲವೊಂದು ಅಡ್ಡಿ ಅಡಚಣೆಗಳು ಬರುತ್ತಿದ್ದವು ಅವೆಲ್ಲವನ್ನೂ ಕೂಡ ಹೋಗಲಾಡಿಸತಕ್ಕಂಥ ಒಂದು ಕಾರ್ಯವನ್ನು ಈ ತಿದ್ದುಪಡಿ ಒದಗಿಸಿಕೊಟ್ಟಿದೆ ಎಂದು ಹೇಳಿ ಈ ಒಂದು ತಿದ್ದುಪಡಿಯನ್ನು ತಂದು ಈ ದೇಶದ ಎಲ್ಲಾ ಪುರಸಭೆಗಳು ಮತ್ತು ನಗರ ಸಭೆಗಳಿಗೆ ಅನೇಕ ರೀತಿಯಲ್ಲಿ ಅತ್ಯಮೂಲ್ಯವಾದ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಡೆಯಿಸಲಿಕ್ಕೆ ಅನುಕೂಲವಾಗುವಂತೆ ತಿದ್ದುಪಡಿಯನ್ನು ತಂದಿದ್ದಾರೆ. ಈ ಒಂದು ಒಳ್ಳೆಯ ಕಾರ್ಯವನ್ನು ಮಾನ್ಯ ಮಂತ್ರಿಗಳವರು ಮಾಡಿದ್ದಾರೆ ಅದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಈಗ ಸಭೆಯು ಮುಂದುವರಿದು ಪುನಃ 4 ಗಂಟೆಗೆ ಸಮಾವೇಶಗೊಳ್ಳುವುದು.

*The House rose at Twenty six Minutes past Two of the Clock and re-assembled at five minutes past Four of the Clock.*

[MADAM SPEAKER. In the Chair]

† ಶ್ರೀ ಡಿ ಕೆ. ನಾಯ್ಕರ್.— ಅಧ್ಯಕ್ಷರೇ, ನಾನು ತಂದ ಕರ್ನಾಟಕ ಮುನಿಸಿಪಾಲಿಟಿಗೆ ಸಂಬಂಧಪಟ್ಟ ತಿದ್ದುಪಡಿ ಮಸೂದೆಯನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದ ಅನೇಕ ಸನ್ಮಾನ್ಯ ಸದಸ್ಯರುಗಳು ಮೆಚ್ಚುಗೆಯನ್ನು ವ್ಯಕ್ತ ಮಾಡಿದ್ದಾರೆ. ಇನ್ನು ಕೆಲವು ಮಾನ್ಯ ಸದಸ್ಯರುಗಳು ಸೂಕ್ಷ್ಮವಾದ ಟೀಕೆಗಳನ್ನು ಮಾಡುವುದರ ಜೊತೆಗೆ ಉಗ್ರವಾದ ಟೀಕೆಗಳನ್ನೂ ಮಾಡಿದ್ದಾರೆ. ಹೀಗೆ ಟೀಕೆಗಳನ್ನು ಮಾಡಿದವರಲ್ಲಿ ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರು ಒಬ್ಬರು. ಆದುದರಿಂದ, ನಾನು ಈ ಸಂದರ್ಭದಲ್ಲಿ ಒಂದೆರಡು

ಮಾತುಗಳನ್ನು ಪ್ರಾಸಂಗಿಕವಾಗಿ ಹೇಳಬಯಸುತ್ತೇನೆ. ವಿರೋಧ ಪಕ್ಷದ ಕೆಲವು ಸದಸ್ಯರು, ಈ ಮಸೂದೆಯ ಕುರಿತು ಮಾತನಾಡುವಾಗ, ಸರ್ಕಾರ ಇದರಲ್ಲಿ ಹೆಚ್ಚು ಅಧಿಕಾರವನ್ನು ತೆಗೆದುಕೊಂಡಿದೆ ಮತ್ತು ಇದರಿಂದಾಗಿ ಪುರಸಭೆಗಳ ಅಧಿಕಾರ ಮೊದಲಿದ್ದುದಕ್ಕಿಂತಲೂ ಕಡಿಮೆ ಇದೆ ಮತ್ತು ಸರ್ಕಾರ, ಇದರ ಎಲ್ಲಾ ಅಧಿಕಾರವನ್ನೂ ತಾನೆ ಇಟ್ಟುಕೊಳ್ಳಬೇಕೆಂಬ ಅಭಿಲಾಷೆಯಿಂದ. ಸ್ವಾಯತ್ತತೆ ಇರುವ ಮುನಿಸಿಪಾಲಿಟಿಗಳ ಅಧಿಕಾರಗಳನ್ನು ಕಡಿಮೆ ಮಾಡಿದೆ ಎನ್ನುವಷ್ಟರ ಮಟ್ಟಿಗೆ ಹೋಗಿದ್ದಾರೆ ; ನಿಜವಾಗಲೂ ಹೇಳುವುದಾದರೆ, ಸ್ಥಳೀಯ ಸಂಸ್ಥೆಗಳ ಪ್ರಗತಿಪಥವನ್ನು ನಾವು ದೃಷ್ಟಿಯಲ್ಲಿಟ್ಟುಕೊಂಡೇ ಈ ಮಸೂದೆಯಲ್ಲಿ ಸಂಪೂರ್ಣವಾದ ಅಧಿಕಾರವನ್ನು ಅವುಗಳಿಗೆ ಕೊಟ್ಟಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ೧೨ನೇ ಸೆಕ್ಷನ್‌ನಲ್ಲಿ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಅದು ಏನು ಹೇಳುತ್ತದೆ ಎಂದರೆ, ಎಲ್ಲಿ "ಫೆಲ್ಯೂರ್ ಟು ಎಲೆಕ್ಟ್ ಎ ಕೌನ್ಸಿಲರ್" ಎಂದು ಕಾಣುತ್ತದೆ, ಅಂಥಾ ಕಡೆಗಳಲ್ಲಿ ಕೌನ್ಸಿಲರನ್ನು ಸರ್ಕಾರ ನೇಮಕ ಮಾಡುವಂಥ ಅಧಿಕಾರ ಈಗಾಗಲೇ ಹಳೆಯ ಕಾನೂನಿನಲ್ಲಿಯೇ ಕೊಟ್ಟಿದೆ, ಆದರೆ, ಅದರಲ್ಲಿ. ಒಮ್ಮೆ ಸರ್ಕಾರ ನೇಮಕ ಮಾಡಿದಂಥ ಕೌನ್ಸಿಲರ್ ನಾಲ್ಕು ವರ್ಷಗಳ ಅವಧಿಯವರೆಗೂ ಮುಂದುವರೆಯುವಂತೆ ಅವಕಾಶವನ್ನು ಕೊಡಲಾಗಿತ್ತು. ಆ ಒಂದು ದೃಷ್ಟಿಯಿಂದ ಈಗಿರುವಂಥ ಅಧಿಕಾರವನ್ನು ಮೊಟಕುಗೊಳಿಸಬೇಕು ಮತ್ತು ಅದಕ್ಕೊಂದು ಮಿತಿಯಿರಬೇಕೆಂದು ಅದನ್ನು ಒಂದು ವರ್ಷಕ್ಕೆ ಮಾತ್ರ ಇಳಿಸಿದ್ದೇವೆ. ಸರ್ಕಾರದಿಂದ ನೇಮಕಗೊಂಡಂಥ ಒಬ್ಬ ಕೌನ್ಸಿಲರ್ ನಾಲ್ಕು ವರ್ಷಗಳ ಮಟ್ಟಿಗೆ ಅಧಿಕಾರದಲ್ಲಿರುವಂಥ ಒಂದು ಅವಕಾಶ ಇದ್ದಾಗ್ಯೂ ಕೂಡ. ಆ ಜಾಗಕ್ಕೆ ಒಂದು ವರ್ಷದೊಳಗೆ ಚುನಾವಣೆಯನ್ನು ನಡೆಸಬೇಕೆನ್ನುವುದನ್ನು ಸ್ಪಷ್ಟವಾಗಿ ಈ ತಿದ್ದುಪಡಿ ಮುಖಾಂತರ ತಂದಿದ್ದೇವೆ. ಸರ್ಕಾರ ಒಬ್ಬ ಕೌನ್ಸಿಲನ್ನು ನೇಮಕ ಮಾಡಿದ ಒಂದು ವರ್ಷದೊಳಗೆ ಚುನಾವಣೆ ಮಾಡಬೇಕು ; ಮತ್ತು ಸರ್ಕಾರ ನೇಮಿಸಿದಂಥ ವ್ಯಕ್ತಿ ಅಧಿಕಾರದಲ್ಲಿ ಬಹುದಿನಗಳವರೆಗೆ ಇರಕೂಡದು ಎನ್ನುವ ಉದ್ದೇಶ ಈ ತಿದ್ದುಪಡಿಯಲ್ಲಿ ಅಡಕವಾಗಿದೆ. ಇಂಥಾ ಪರಿಸ್ಥಿತಿಯಲ್ಲಿ ಸದಸ್ಯರು ಸತ್ತರೆ ಅಥವಾ ರಾಜೀನಾಮೆ ಸಹ ನೀಡಿದರೆ ಅಥವಾ ನ್ಯಾಯಾಲಯದಿಂದ ಆ ಸ್ಥಾನ ಖಾಲಿ ಇದೆ ಎಂದು ಘೋಷಣೆಯಾದರೆ, ಈ ಮೂರು ಸ್ಥಾನಗಳಿಗೂ ಸರ್ಕಾರ ಕೌನ್ಸಿಲರನ್ನು ನೇಮಿಸುವಂಥ ಅಧಿಕಾರವನ್ನು ೧ ನೇ ಸೆಕ್ಷನ್‌ನಲ್ಲಿ ಪಡೆದಿದೆ. ಇದರಲ್ಲಿ ಕೂಡ, ನಾಲ್ಕು ವರ್ಷದ ಅವಧಿ ಮುಗಿಯುವವರೆಗೆ ಅಥವಾ ಉಳಿದ ಅವಧಿಯವರೆಗೆ ಮುಂದುವರೆಯುವ ಅವಕಾಶವಿತ್ತು. ಇದನ್ನು ಮೊಟಕುಗೊಳಿಸಿ, ಇಂಥಾ ಸಂದರ್ಭದಲ್ಲಿ ನೇಮಿಸಿದಂಥ ಒಬ್ಬ ಕೌನ್ಸಿಲರ್ ಆರು ತಿಂಗಳಿಗಿಂತ ಹೆಚ್ಚು ಅಧಿಕಾರ ಸ್ಥಾನದಲ್ಲಿರಕೂಡದು ಮತ್ತು ಆ ಸ್ಥಾನಕ್ಕೆ ಚುನಾವಣೆ ಮಾಡಬೇಕು ಎನ್ನುವುದನ್ನು ಇದರಲ್ಲಿ ಸ್ಪಷ್ಟವಾಗಿ ನಾವು ಮಾಡಿದ್ದೇವೆ. ಸರ್ಕಾರದಲ್ಲಿದ್ದಂಥ ಅಧಿಕಾರವನ್ನು ಆದಷ್ಟು ಕಡಿಮೆ ಮಾಡಿ, ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿ ಚುನಾಯಿತ ಪ್ರತಿನಿಧಿಗಳು ಬರಬೇಕೆನ್ನುವ ಸದುದ್ದೇಶವನ್ನು ಇದರಲ್ಲಿ ನಾವು ಹೊಂದಿದ್ದೇವೆ.

ಪ್ರಜಾಪ್ರಭುತ್ವ ತತ್ವದ ಆಧಾರದ ಮೇಲೆ ಇದನ್ನು ತಂದಿರುವುದು. ಸರ್ಕಾರ ನೇಮಿಸಿದಂತ ಮನುಷ್ಯ ಆರು ತಿಂಗಳು ಮೇಲ್ಪಟ್ಟು ಇರಬಾರದು ಎನ್ನುವ ತತ್ವ ಇದೆ ; ಆದರಂತೆ ಮಾನ್ಯ ಅಧ್ಯಕ್ಷರೇ, ಇನ್ನೊಂದು ಸೆಕ್ಷನ್‌ನಲ್ಲಿ ಸಾಮಾನ್ಯವಾಗಿ ಒಂದು ಮುನಿಸಿಪಾಲಿಟಿ ನಾಲ್ಕು ವರ್ಷ ಇದ್ದರೆ ; ನಾಲ್ಕು ವರ್ಷಗಳೊಳಗೆ ಯಾವುದಾದರೂ ಒಂದು ಮುನಿಸಿಪಾಲಿಟಿ ಪ್ರಸಿಡೆಂಟ್ ಆರಿಸಿಬಂದರೆ ನಾಲ್ಕು ವರ್ಷಗಳವರೆಗೆ ಇರುವಂತ ವ್ಯವಸ್ಥೆ ಈ ಕಾನೂನಿನಲ್ಲಿ ಇದೆ. ಒಂದುವೇಳೆ ಒಂದು ಮುನಿಸಿಪಾಲಿಟಿ ವರ್ಷಕ್ಕೊಂದು ಸಲ ಪ್ರೆಸಿಡೆಂಟ್ ಆರಿಸಿರುವ ಹಕ್ಕು ಇರಬೇಕು ಎಂದು ರೆಸ್ಯೂಲ್ಯೂಷನ್ ಮಾಡಿ ಸರ್ಕಾರದ ಮನ್ನಣೆ ಪಡೆದರೆ ; ವರ್ಷ ವರ್ಷವೂ ಪ್ರೆಸಿಡೆಂಟ್ ಆರಿಸುವ ಅಧಿಕಾರ ಇರುತ್ತದೆ. ಹಾಗೆ ಮಾಡುವುದರಿಂದ ಚುನಾಯಿತ ಕೌನ್ಸಿಲರ್ ಇನ್ನೂ ಮುಂದೆ ಬರುವಂತ ಕೌನ್ಸಿಲರ್‌ಗಾಗಲೀ ಈ ರೆಸ್ಯೂಲ್ಯೂಷನ್ನಿಂದ ಅನುಕೂಲವಾಗುತ್ತದೆ. ಇಂಥ ಕೆಲವು ಕೇಸುಗಳಲ್ಲಿ ಹೈಕೋರ್ಟಿಗೆ ಹೋಗಿ ; ಆ ಬಗ್ಗೆ ಹೈಕೋರ್ಟಿನವರು ಕೂಡ ತೀರ್ಮಾನ ಕೊಟ್ಟಿದ್ದಾರೆ. ಒಂದು ಸಲ ಮುನಿಸಿಪಾಲಿಟಿ ರೆಸೋಲ್ಯೂಷನ್ ಮಾಡಿ ಸರ್ಕಾರದ ಮನ್ನಣೆ ಪಡೆದರೆ ಸ್ಟ್ಯಾಚ್ಯುಟರಿ ಪವರ್ ಕೊಟ್ಟ ಹಾಗೆ ಆಯಿತು ; ಆದರೆ ಬದಲಾವಣೆ ಮಾಡುವ ಹಕ್ಕು ಮುಂದಿನ ಚುನಾಯಿತ ಮುನಿಸಿಪಾಲಿಟಿಗೆ ಇಲ್ಲ ಎಂದು ತೀರ್ಮಾನ ವ್ಯಕ್ತಮಾಡಿದ್ದಾರೆ. ಆದ್ದರಿಂದ ನಾವು ಏನು ಮಾಡಿದ್ದೇವೆಂದರೆ ; ಯಾವ ಮುನಿಸಿಪಾಲಿಟಿ ಪ್ರೆಸಿಡೆಂಟರೂ ವರ್ಷ ವರ್ಷ ಆರಿಸಬೇಕೆಂದು ಇಚ್ಛೆ ಮಾಡಿದ್ದರೆ, ವರ್ಷಕ್ಕೊಂದು ಸಲ ಮಾಡುವುದಕ್ಕೆ ಬದಲು ಎರಡು ವರ್ಷಕ್ಕೆ ಒಂದು ಸಲ ಆರಿಸುವಂತ ಒಂದು ಹಕ್ಕನ್ನು ಕೊಟ್ಟಿದ್ದೇವೆ. ಒಂದು ವರ್ಷಕ್ಕೆ ಆರಿಸಿಬಂದಂತ ಪ್ರೆಸಿಡೆಂಟರು ಮುನಿಸಿಪಾಲಿಟಿ ಹಿತ ದೃಷ್ಟಿಯಿಂದ ಏನು ಕೆಲಸ ಮಾಡಲಾರ. ಆ ದೃಷ್ಟಿಯಿಂದ ಎರಡು ವರ್ಷಗಳ ಕಾಲ ಪ್ರೆಸಿಡೆಂಟರು ಅಧಿಕಾರದಲ್ಲಿರಬೇಕು ಎನ್ನುವ ಉದ್ದೇಶದಿಂದ ಈ ಅಧಿಕಾರ ಕೊಟ್ಟಿದ್ದೇವೆ. ಮತ್ತು ಈ ರೆಸೊಲ್ಯೂಷನ್

ಆಗಿದ್ದ ಮುನಿಸಿಪಾಲಿಟಿಗೆ ಮಟ್ಟಿಗೆ ಮಾತ್ರ ಸೀಮಿತ. ಮುಂದೆ ಬರುವಂತ ಮುನಿಸಿಪಾಲಿಟಿಗೆ ಸೀಮಿತ ಅಲ್ಲ ನಾಲ್ಕು ವರ್ಷಗಳಿಗೆ ಆರಿಸಿದರೆ ನಾಲ್ಕು ವರ್ಷಗಳಿಗೆ ಇರಬಹುದು ; ಒಂದುವೇಳೆ ಎರಡೆರಡು ವರ್ಷಕ್ಕೆ ಮಾಡಬೇಕೆಂದರೆ ಎರಡು ವರ್ಷಕ್ಕೆ ಇರಬಹುದು. ಈ ಅಧಿಕಾರವನ್ನು ಮುನಿಸಿಪಾಲಿಟಿಗೆ ಕೊಟ್ಟಿದ್ದೇವೆಯೇ ಹೊರತು : ಮುನಿಸಿಪಾಲಿಟಿಯ ಅಧಿಕಾರವನ್ನು ತೆಗೆದುಕೊಳ್ಳುವಂತ ಯಾವುದೇ ಪ್ರಯತ್ನವನ್ನು ಮಾಡಿಲ್ಲ ಎಂದು ಶ್ರೀಮಾನ್ ಕೃಷ್ಣನ್‌ರವರಿಗೆ ಹೇಳಬಯಸುತ್ತೇನೆ. ಅಲ್ಲದೆ ಇದರಿಂದ ಇನ್ನೂ ಹೆಚ್ಚಿನ ಮುನಿಸಿಪಾಲಿಟಿಗೆ ಕೊಟ್ಟಿದ್ದೇವೆ ; ಸರ್ಕಾರಕ್ಕೆ ಯಾವುದೇ ರೀತಿಯ ಅಧಿಕಾರವೂ ಬರುವುದಿಲ್ಲವೆಂದು ಹೇಳುತ್ತೇನೆ ಸೆಕ್ಷನ್ ೪೩ರ ಅಡಿಷನಲ್ ಫಂಡ್ಸ್ ಪ್ರೆಸಿಡೆಂಟರವರಿಗೆ ಯಾವುದು ಇರಬೇಕು ಎನ್ನುವ ಬಗ್ಗೆ ನಮೂದು ಮಾಡಿದ್ದೇವೆ. ಅದಕ್ಕೆ ಬಹು ಜನ ಸದಸ್ಯರು ತಮ್ಮ ಮೆಚ್ಚುಗೆಯನ್ನು ವ್ಯಕ್ತ ಮಾಡಿದ್ದಾರೆ. ಎ.ಬಿ.ಸಿ ಇ. ವರೆಗೆ ಮತ್ತು ಕ್ಲಾಸ್ ೪-೫ರ ವರೆಗೆ ಸಂಪೂರ್ಣವಾಗಿ ಸರ್ಕಾರ ಪ್ರೆಸಿಡೆಂಟರಿಗೆ ಅಧಿಕಾರವನ್ನು ಕೊಟ್ಟಿದೆ ಈ ಅಧಿಕಾರ ಕೊಟ್ಟಿರುವುದನ್ನು ನೋಡಿದರೆ ನಿಜವಾಗಿಯೂ ಈಗ ಆರಿಸಿಬರತಕ್ಕ ಪ್ರೆಸಿಡೆಂಟರೂ ಪೂರ್ಣ ಅಧಿಕಾರ ಪಡೆದಿರುತ್ತಾರೆಂದೂ ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆ ಅದರಂತೆ ಸೆಕ್ಷನ್ ೪೪-೪೫ರಲ್ಲಿ ಕೂಡ ಹೆಚ್ಚಿನ ಅಧಿಕಾರವನ್ನು ಮುನಿಸಿಪಾಲಿಟಿಗೆ ಕೊಟ್ಟಿದ್ದೇವೆ. ಕಮೀಷನರ್‌ರವರಿಗೆ, ಚೀಫ್ ಆಫೀಸರ್‌ರವರಿಗೆ ಸಭೆಯ ಕಾರ್ಯಕಲಾಪಗಳ ಕಾಪಿಯನ್ನು ನೋಟೀಸ್ ಜೊತೆಗೆ ಕೊಡುವ ವ್ಯವಸ್ಥೆ ಮಾಡುವುದಲ್ಲದೆ ಮುಂದಿನ ಮೀಟಿಂಗ್‌ಗೆ ಸಂಪೂರ್ಣವಾಗಿ ತಯಾರಾಗಿ ಕಾರ್ಯಕಲಾಪಗಳಲ್ಲಿ ವ್ಯವಸ್ಥಿತ ರೀತಿಯಿಂದ, ಬುದ್ಧಿವಂತಿಕೆಯಿಂದ ಹಾಗೂ ಅನುಭವದಿಂದ ಪಾರ್ಟಿಸಿಪೇಟ್ ಮಾಡುವ ಅಧಿಕಾರ ಕೊಟ್ಟಿದ್ದೇವೆ. ಇದರ ಜೊತೆಗೆ ಮಾನ್ಯ ಅಧ್ಯಕ್ಷರೇ, ಆ ಆಫೀಸರಿಂದ ರೆಕಾರ್ಡುಗಳನ್ನು ತರಿಸಿಕೊಂಡು ಅದನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಲು ಒಂದು ತಿಂಗಳವರೆಗೆ ತನ್ನ ಹತ್ತಿರ ಇಟ್ಟುಕೊಳ್ಳು ಪ್ರೆಸಿಡೆಂಟರ್‌ರವರಿಗೆ ಅಧಿಕಾರ ಕೊಟ್ಟಿದ್ದೇವೆ. ಆ ರೀತಿ ಕೊಡುವುದರಿಂದ ಅವರು ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದೇ ಸರಿಯಾಗಿ ನಡೆಸಿಕೊಳ್ಳುತ್ತಾರೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಇನ್ನೊಂದು ಸೂಪರ್‌ಸೀಡ್ ಮಾಡುವಂತ ಅಧಿಕಾರ ಈಗ ಆಕ್ಟ್‌ನಲ್ಲಿ ಇದೆ: ಕಲಮ್ ೩೧೬ರಲ್ಲಿ ಇದೆ. ಒಮ್ಮೆ ಸೂಪರ್‌ಸೀಡ್ ಮಾಡಿದರೆ ಎಷ್ಟು ವರ್ಷಗಳವರೆಗೆ ಸರ್ಕಾರ ಅವಧಿಯನ್ನು ಮುಂದುವರಿಸಬಹುದು ಎಂದು ಆದರೆ ಸರ್ಕಾರ ಈಗ ಇಂತಕ್ಕ ಕಾನೂನನ್ನು ಮೊಟಕು ಗೊಳಿಸಿ ಏನು ಮಾಡಿದೆ ಎಂದರೆ, ಸೂಪರ್‌ಸೀಡ್ ಮಾಡವುದಾದರೆ ಒಂದು ವರ್ಷದ ಮಟ್ಟಿಗೆ ಮಾಡಬೇಕು. ಒಂದು ವೇಳೆ ಮುಂದುವರಿಸುವುದಕ್ಕೆ ಹೆಚ್ಚಿನ ಕಾರಣಗಳು ಉಂಟಾಗಿದ್ದಲ್ಲಿ ೬ ತಿಂಗಳು ಮುಂದುವರಿಸಬಹುದು. ಒಟ್ಟಿನಲ್ಲಿ ೧೮ ತಿಂಗಳು ಹೆಚ್ಚಿಗೆ ಮಾಡುವಂತ ಕಾನೂನನ್ನು ತಂದಿದೆ, ಸಂಪೂರ್ಣವಾಗಿ ಪ್ರಜಾಪ್ರಭುತ್ವ ತತ್ವಕೆ ಅನುಗುಣವಾಗಿ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ. ಈ ರೀತಿಯಾಗಿ ನಾನಾ ಹಂತಗಳಲ್ಲಿ ಅಂದರೆ ಸ್ಟ್ಯಾಂಡಿಂಗ್ ಕಮಿಟಿ ಆಯ್ಕೆ ಮಾಡುವುದರಲ್ಲಾಗಲೀ, ಅವರು ಕಾರ್ಯಕಲಾಪಗಳನ್ನು ನಡೆಸುವುದರಲ್ಲಾಗಲೀ ಇನ್ನೂ ಅನೇಕ ರೀತಿಯ ಅಧಿಕಾರವನ್ನು ಲೋಕಲ್ ಅಥಾರಿಟಿಗೆ ಬಿಟ್ಟು ಕೊಟ್ಟಿರುವುದರಿಂದ ಸರ್ಕಾರ ಹೆಚ್ಚಿನ ಅಧಿಕಾರ ಪಡೆದಿದೆ ಎನ್ನುವುದು ಆಪಾದನೆ ಸರಿಯಾದುದಲ್ಲ ಎಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ

ಇನ್ನು ಶೀರ್ನಾಳಿ ಚಂದ್ರಶೇಖರ್‌ರವರು ಮಾತನಾಡುವಾಗ ಒಂದು ಸಲಹೆ ಕೊಟ್ಟಿದ್ದಾರೆ. ಅದು ಏನೆಂದರೆ ರೆಸಿಗ್ನೇಷನ್ ಬಗ್ಗೆ ಕೊಟ್ಟಿರುವ ಕ್ಲಾರಿಫಿಕೇಷನ್ ಸರಿಯಿಲ್ಲ ಎಂದು. ಹಾಲಿ ಇದ್ದ ಪರಿಸ್ಥಿತಿ ಏನು ಎಂದರೆ ಸದಸ್ಯರಾದವರು ಪ್ರೆಸಿಡೆಂಟರಿಗೆ ರಾಜೀನಾಮೆ ಕೊಡಬೇಕಾಗಿತ್ತು, ಕೊಟ್ಟಕೂಡಲೇ ಅದು ಸ್ವೀಕಾರವಾದಂತೆ ಎಂದು ತಿಳಿಯಬಹುದಾಗಿತ್ತು, ಅಲ್ಲದೆ ಇದರಿಂದ ದುಷ್ಪರಿಣಾಮ ಏನಾಗುತ್ತಿತ್ತು ಎಂದರೆ, ಪ್ರೆಸಿಡೆಂಟರಾದವರು ಎಲ್ಲರ ರಾಜೀನಾಮೆಯನ್ನು ತೆಗೆದುಕೊಳ್ಳುವುದರ ಜೊತೆಗೆ ಬಲವಂತದಿಂದಲೂ ರಾಜೀನಾಮೆ ಕೊಡಿಸಬಹುದಿತ್ತು, ಈ ದೃಷ್ಟಿಯಿಂದ ಕೌನ್ಸಿಲರುಗಳಾಗಲೀ, ವೈಸ್ ಪ್ರೆಸಿಡೆಂಟರಾಗಲೀ ಅಥವಾ ಪ್ರೆಸಿಡೆಂಟರಾಗಲೀ ತಮ್ಮ ರಾಜೀನಾಮೆಯನ್ನು ಡೆಪ್ಯೂಟಿ ಕಮೀಷನರ್‌ರವರಿಗೆ ಕೊಡತಕ್ಕದು ಎಂದು ಇದರಲ್ಲಿ ಅಡಕ ಮಾಡಿದ್ದೇವೆ, ರಾಜೀನಾಮೆ ಕೊಟ್ಟ ೧೫ ದಿವಸಗಳ ನಂತರ ಇದು ಕಾರ್ಯರೂಪಕ್ಕೆ ಬರಬಹುದು ಎಂದು ಹೊಸದಾಗಿ ಸೇರಿಸಿದ್ದೇವೆ. ಇದರಿಂದ ಯಾವುದೇ ರೀತಿಯ ತೊಂದರೆಗಳು, ಗಲಬೆಗಳು ಆಗುವುದಿಲ್ಲವೆಂದು ಸ್ಪಷ್ಟವಾಗಿ ಚಂದ್ರಶೇಖರ್‌ರವರಿಗೆ ಹೇಳಬಯಸುತ್ತೇನೆ. ಇನ್ನು ಮುನಿಸಿಪಾಲಟಿಯವರು ಮುನಿಸಿಪಾಲಿಟಿಗೆ ಸಂಬಂಧಪಟ್ಟ ಆಸ್ತಿಯನ್ನು ೨ ಸಾವಿರ ರೂಪಾಯಿಗೆ ಮೇಲ್ಪಟ್ಟು ವಿಲೇವಾಡುವಾಗ, ಮಾರ್ಟಗೇಜ್ ಮಾಡುವಾಗ ಸರ್ಕಾರದಿಂದ ಮನ್ನಣೆ ಪಡೆಯಬೇಕು

ಎನ್ನುವುದು ಈಗಿದ್ದ ಹಾಗ ಇದೆ, ಇದರಿಂದ ಎರಡು ಸಾವಿರ ರೂಪಾಯಿಗಿಂತ ಕಡಿಮೆ ಬೆಲೆಯುಳ್ಳ ಆಸ್ತಿಯನ್ನು ಮಾತ್ರ ಮಾರಾಟ ಮಾಡಬಹುದಿತ್ತು. ಎರಡು ಸಾವಿರಕ್ಕಿಂತ ಹೆಚ್ಚಿನ ಬೆಲೆ ಇದ್ದರೆ ಅದರ ಬಗ್ಗೆ ಯಾವುದೇ ರೀತಿಯ ವ್ಯವಹಾರ ಮಾಡುವ ಅಧಿಕಾರ ಇಲ್ಲ ಎಂದು ಇದರಲ್ಲಿ ಇದೆ.

ಮಾನ್ಯ ಅಧ್ಯಕ್ಷರೇ, ಈಗ ಏನಾಗಿದೆ ಎಂದರೆ ಈ ಬಿಲ್ಲಿನಲ್ಲಿರುವ ಪ್ರಕಾರ ಪುರಸಭೆಗಳಿಗೆ ತಮ್ಮ ಆಸ್ತಿಯ ಪರಭಾರೆಗೆ 2 ಸಾವಿರ ರೂಪಾಯಿಗಳ ಮೌಲ್ಯದ ಮಿತಿ ಇದ್ದುದನ್ನು 5 ಸಾವಿರ ದವರೆಗೆ ಏರಿಸಿವೆ. 5 ಸಾವಿರದವರೆಗೆ ಏರಿಸಿರುವುದರಿಂದ ಇದರಿಂದ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ಬಂತೇ ? ಇದರಿಂದ ಮುನಿಸಿಪಾಲಿಟಿಯವರಿಗೇನೇ ಒಂದು ಹೆಚ್ಚಿನ ಅಧಿಕಾರ ಕೊಟ್ಟ ಹಾಗೆ ಆಗಲಿಲ್ಲವೇ ? ಮುನಿಸಿಪಾಲಿಟಿಯವರು ಯಾವತ್ತೂ ಕೂಡ ಈ ಬಿಲ್ಲಿನ ಪ್ರಕಾರ 5 ಸಾವಿರ ರೂಪಾಯಿನ ಒಳಗಡೆ ಇರುವಂಥಾ ಈ ಒಂದು ವ್ಯವಹಾರವನ್ನು, ಇದರಿಂದ ಮಾಡಬಹುದು. ಯಾವುದಾದರೂ ಮುನಿಸಿಪಾಲಿಟಿಯವರು ತಮ್ಮ ಆಸ್ತಿಯನ್ನು ಮಾರ್ಟ್‌ಗೇಜ್ ಮಾಡುವುದಾಗಲಿ, ಸೇಲ್ ಮಾಡುವುದಾಗಲಿ, ಅಥವಾ ಲೀಸ್ ಮಾಡುವುದಾಗಲಿ ಇಂತಹ ವ್ಯವಹಾರಗಳನ್ನು ಮಾಡ ಬೇಕಾಗಿದ್ದರೆ ಅದು 5 ಸಾವಿರ ರೂಪಾಯಿನ ಮೇಲ್ಪಟ್ಟು ಆದರೆ ಮಾತ್ರ ಅದು ಸರ್ಕಾರಕ್ಕೆ ಬರ ಬೇಕು ಅಂತ ಇದೆ. ಅದಕ್ಕಿಂತ ಕಡಿಮೆ ಆದರೆ ಅದನ್ನು ಅವರೇ ಮಾಡಿಕೊಳ್ಳಬಹುದು. ಅವರಿಗೆ ಈರೀತಿಯಾಗಿ ಮೌಲ್ಯದ ಮಿತಿ 2 ಸಾವಿರ ಇದ್ದುದನ್ನು 5 ಸಾವಿರದವರೆಗೆ ಕೊಟ್ಟಿರತಕ್ಕಂಥಾ ಅಧಿಕಾರ ನೋಡಿದರೆ ಸರ್ಕಾರದಿಂದ ಅಧಿಕಾರ ಕಸಿದುಕೊಂಡ ಹಾಗೆ ಆಗಿಲ್ಲವೇ ? ಯಾರಿಗೆ ಈ ಬಗ್ಗೆ ಹೆಚ್ಚಿನ ಅಧಿಕಾರ ಇದೆ ತಾವೇ ನೋಡಿ. ಆದುದರಿಂದ ನಾವು ಈ ಬಿಲ್ಲಿನಲ್ಲಿ ಏನೂ ಬದಲಾವಣೆ ಮಾಡಿಲ್ಲಾ. ಯಾರಾದರೂ ಆಗಲಿ ಅವರು ಅಧಿಕಾರಕ್ಕೆ ಬಂದರೆ ಅವರು ಮುನಿಸಿಪಾಲಿಟಿಯ ಆಸ್ತಿ ಯನ್ನು ಕಸಿದುಕೊಂಡು ಹೋಗುವಂತೆ ಇರಬಾರದು. ಮುನಿಸಿಪಾಲಿಟಿಯ ಆಸ್ತಿ ಸರಿಯಾದ ರೀತಿ ಯಲ್ಲಿ ರಕ್ಷಣೆ ಆಗಬೇಕು, ಅವರು ಅಧಿಕಾರಕ್ಕೆ ಬಂದು ತಮಗೆ, ತಮ್ಮ ಸಂಬಂಧಿಕರಿಗೆ ಆ ಮುನಿಸಿ ಪಾಲಿಟಿ ಆಸ್ತಿಯನ್ನು ವಿಲೇವಾರಿ ಮಾಡುವುದಾದರೆ ಅದು ಮುನಿಸಿಪಾಲಿಟಿಗೆ ನಷ್ಟವಾಗುತ್ತದೆ ಎಂದು ಹೆಚ್ಚಿನ ಅಧಿಕಾರವನ್ನು ಅವರಿಗೆ ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇಷ್ಟು ಅಧಿಕಾರ ಇಟ್ಟುಕೊಂಡು ಕೃಷ್ಣ ಫ್ಲೋರ್ ಮಿಲ್ ಅನ್ನು ಏತಕ್ಕೆ ಕೊಟ್ಟಿರಿ ? ಮತ್ತು ಸುಭಾಷ್ ನಗರವನ್ನು ಏತಕ್ಕೆ ಕೊಟ್ಟಿರಿ ?

ಶ್ರೀ ಡಿ. ಕೆ. ನಾಯಕರ್.—ಯಾರಾದರೂ ಆಗಲಿ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಮಾಡ ಬೇಕು ಅಂತ ಒಂದು ಕಾರ್ಪೊರೇಟ್ ಬಾಡಿ ಮಾಡಿಕೊಂಡು ಬಂದರೆ ಆವಾಗ ಅದಕ್ಕೆ ಮನ್ನಣೆ ಕೊಡಬೇಕಾದ್ದು ಅವಶ್ಯಕತೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಇದಕ್ಕೆ ಇನ್ನೊಂದು ವಾದ ವನ್ನು ಮುಂದಿಟ್ಟಿದ್ದಾರೆ. ಬಡವರಿಗೆ ಫ್ರೀ ಸೈಟ್ ಕೊಡುವ ಬಗ್ಗೆ ಇವರಿಗೇತಕ್ಕೆ ಈ ಒಂದು ಅಧಿಕಾರ ಕೊಡಬಾರದು ಎಂದು ಕೇಳಿದ್ದಾರೆ. ಈ 20 ಅಂಶದ ಕಾರ್ಯಕ್ರಮದಲ್ಲಿ ಫ್ರೀ ಸೈಟು ಹಂಚುವ ಕಾರ್ಯಕ್ರಮವನ್ನು ಸರ್ಕಾರವೇ ತೆಗೆದುಕೊಂಡಿರುವುದರಿಂದ ಒಂದು ವೇಳೆ ಆ ಜಾಗ ಮುನಿಸಿಪಾಲಿಟಿಯ ಒಂದು ಬೌಂಡರಿಗೆ ಸೇರಿದ್ದರೆ ಅದು ಅವರ ವಶದಲ್ಲಿದ್ದರೆ ಅಂಥಾ ಜಾಗಕ್ಕೆ ಅಪ್ರೂವಲ್ ಕೊಟ್ಟೇ ಕೊಡುತ್ತೇವೆ. ಆ ಜಾಗ ಅರ್ಬನ್‌ಗೇನೇ ಸೇರಿರಲಿ ಎಲ್ಲಿಗೇ ಸೇರಿರಲಿ ಆರೀತಿ ಅನೇಕ ಸೈಟುಗಳನ್ನು ತೆಗೆದುಕೊಂಡು ಬಡವರಿಗೆ ಹಂಚಿದ್ದೇವೆ. ಆ ಬಗ್ಗೆ ಬೇಕಾದರೆ ನಾನು ಅಂಕಿಸಂಖ್ಯೆಗಳನ್ನು ಕೊಡಬಲ್ಲೆ. ಈ ಬಿಲ್ಲಿನ ಪ್ರಕಾರ ಸರ್ಕಾರ ಹೆಚ್ಚಿನ ಅಧಿಕಾರವನ್ನು ಮುನಿಸಿಪಾಲಿಟಿಗೆ ಕೊಟ್ಟುಬಿಟ್ಟಿದೆ.

ಶ್ರೀ ಅನಿವಾಳದ ನಂಜಪ್ಪ, ಶ್ರೀ ಟಿ. ಆರ್. ಶಾಮಣ್ಣ, ಶ್ರೀ ಪಿ. ಎಂ. ಭಾರಂಗಿ.—ಅವರು ಕೌನ್ಸಿಲರ್ ಸಂಖ್ಯೆಗಳನ್ನು ಕಡಿಮೆ ಮಾಡುವುದು ಸರಿಯಲ್ಲ ಎನ್ನುವ ವಾದವನ್ನು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಹೇಳುವುದು ಈಗ ಇದ್ದುದು ಸರಿಯಾಗಿತ್ತು. ಆದರೆ ಮಾನ್ಯ ಸದಸ್ಯರುಗಳ ಅಭಿಪ್ರಾಯದ ಮೇರೆಗೆ ಸರ್ಕಾರ ಇದನ್ನು ಒಪ್ಪಿಕೊಂಡು ಈ ಬಗ್ಗೆ ಮುಂದೆ ಸರಿಯಾದ ಅಮೆಂಡ್‌ಮೆಂಟ್ ತರುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಶ್ರೀ ಅನಿವಾಳದ ನಂಜಪ್ಪನವರು ಕುಡಿದವರನ್ನು ಡಿಸ್‌ಕ್ವಾಲಿಫೈ ಮಾಡಬೇಕು ಅಂತ ಹೇಳಿದ್ದಾರೆ. ಯಾವರೀತಿಯಾಗಿ ಫುಡ್ ಅಡಲ್ಟ್ರೇಷನ್ ಆಕ್ಟಿನಲ್ಲಿ ಮತ್ತು ಅನ್‌ಟಚಬಿಲಿಟಿ ಆಕ್ಟಿನಲ್ಲಿ ಡಿಸ್‌ಕ್ವಾಲಿಫೈ ಮಾಡಬೇಕು ಅಂತ ಮಾಡಿದೆಯೋ ಅದೇರೀತಿಯಾಗಿ ಕುಡಿದವರನ್ನೂ

ಕೂಡ ಡಿಸ್‌ಕ್ವಾಲಿಫೈ ಮಾಡಬೇಕು ಅಂತ ಹೇಳಿದ್ದಾರೆ. ಆದರೆ ಈ ಕುಡಿದವರು ಹೇಗೆ ಇರುತ್ತಾರೆ ಅನ್ನುವ ಬಗ್ಗೆ ನಾನು ಮೊದಲೇ ಉತ್ತರ ಹೇಳಿದ್ದೇನೆ. ಕುಡಿದುಕೊಂಡು ಬಂದವರನ್ನು ನಿರ್ದಿಷ್ಟ ಪಡಿಸಬೇಕಾದರೆ ಬಹಳ ಕಷ್ಟವಾಗುತ್ತದೆ. ಯಾರ್ಯಾರು ಯಾವ ಯಾವ ರೀತಿಯಾಗಿ ಕುಡಿದು ಕೊಂಡು ಬಂದಿರುತ್ತಾರೋ ಅವರು ಎಷ್ಟೆಷ್ಟರಮಟ್ಟಿಗೆ ಕುಡಿದುಕೊಂಡು ಬಂದಿರುತ್ತಾರೋ ಅದನ್ನು ನಿರ್ದಿಷ್ಟಪಡಿಸುವುದು ಕಷ್ಟ. ಆದುದರಿಂದ ಈ ಆಕ್ಟಿನಲ್ಲಿರುವ ಪ್ರಕಾರ ಕುಡಿದವರನ್ನು ಹೊರಗೆ ಹಾಕಿಸುವ ಅಧಿಕಾರ ಈ ಸಭೆಗೇ ಇರುತ್ತದೆ. ಅಲ್ಲದೆ ಸಭೆಯ ಕಾರ್ಯಕಲಾಪಗಳನ್ನು ಸರಿಯಾದ ರೀತಿಯಲ್ಲಿ ನಡೆಸುವ ಒಂದು ಅಧಿಕಾರವನ್ನೂ ಕೂಡ ಈ ಮುನಿಸಿಪಾಲಿಟಿಗೇನೇ ಕೊಟ್ಟಿದೆ. ಆದುದರಿಂದ ಇದು ಸರಿಯಾಗಿದೆ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಇನ್ನು ಶ್ರೀಮಾನ್ ಟಿ. ಆರ್. ಶಾಮಣ್ಣನವರು ಇವಕ್ಕೆ ಒಳ್ಳೆಯ ಜನರನ್ನು ಆರಿಸಿ ತರಬೇಕ ಎಂದು ಹೇಳಿದ್ದಾರೆ. ಈ ಆಕ್ಟ್ ಪ್ರಕಾರ ನಾವೂ ಕೂಡ ಹೇಳುತ್ತೇನೆ, ಒಳ್ಳೆಯ ಜನರೇ ಬರ ಬೇಕು ಎಂದು, ಉತ್ತಮ ಜನರನ್ನೇ ಆರಿಸಿ ತರಬೇಕು ಎಂದು, ಇದರಲ್ಲಿ ಕೆಟ್ಟವರು ಬರಬೇಕು ಅನ್ನುವ ಉದ್ದೇಶ ನಮಗೆ ಇಲ್ಲ. ಆದರೆ ಶ್ರೀ ಮಾನ್ ಶಾಮಣ್ಣನವರು ಕುಡಿದವರನ್ನು ಆರಿಸಿ ತಂದರೆ ನಾವೇನು ಮಾಡುವುದಕ್ಕಾಗುತ್ತದೆ ?

ಇನ್ನು ಸ್ತ್ರೀಯರಿಗೆ ಹೆಚ್ಚಿನ ಪ್ರಮಾಣದಲ್ಲಿ ರಿಸರ್ವೇಷನ್ ಕೊಡಬೇಕೆಂಬ ಬಗ್ಗೆ ಮೆಚ್ಚುಗೆ ಯನ್ನು ವ್ಯಕ್ತ ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಹಾಗೆಯೇ ಲೇಬರ್‌ಸ್‌ಗೆ ಏತಕ್ಕೆ ಇದರಲ್ಲಿ ಛಾನ್ಸ್ ಕೊಟ್ಟಿಲ್ಲ ?

ಶ್ರೀ ಡಿ. ಕೆ. ನಾಯಕರ್.—ಎಲ್ಲಾ ಕಡೆಯೂ ಲೇಬರರ್ಸ್ ಇಲ್ಲ. ಈ ಬಗ್ಗೆ ಮುನಿಸಿಪಾಲಿಟಿ ಆಕ್ಟಿನಲ್ಲೇ ಇರುವುದರಿಂದ ಇದಕ್ಕೆ ಪ್ರತ್ಯೇಕವಾಗಿ ಏನೂ ತರಬೇಕಾದ್ದಿಲ್ಲ. ಇದು ಒಂದು ಸಣ್ಣ ಮುನಿಸಿಪಾಲಿಟಿಗೂ ಅನ್ವಯವಾಗಲಿ ಎಂದು ಇದನ್ನು ಸಮಗ್ರವಾಗಿ ತಂದಿದ್ದೇವೆ. ಆದುದರಿಂದ ಅವರು ಇದರ ಬಗ್ಗೆ ಹೇಳಿದ್ದು ಅಷ್ಟು ಸಮಂಜಸವಾದುದಲ್ಲ ಎಂದು ಹೇಳುತ್ತೇನೆ.

ಶ್ರೀ ಮಾನ್ ಶಾಮಣ್ಣನವರು ಆಗಿರತಕ್ಕಂಥಾ ಪ್ರಿಸೈಡಿಂಗ್ ಆಫೀಸರ್ಸ್‌ನ್ನು ಹಾಕಬೇಕು ಅಂತ ಹೇಳಿದ್ದಾರೆ. ಅವರು ಇದನ್ನು ಏತಕ್ಕಾಗಿ ಪಾರ್ಷಿಯಲ್ ಆಗಿ ಕಂಡರೋ ನನಗೆ ಗೊತ್ತಿಲ್ಲ. ಈಗ ಅವರು ಸೀಟಿನಲ್ಲಿ ಇಲ್ಲ.

ಇನ್ನು ಈ ಬಿಲ್ಲಿನಲ್ಲಿ ಇನ್ನೊಂದು ಮಹತ್ವವಾದ ಪ್ರಾವಿಷನ್ ಮಾಡಿದೆ. ಎಲೆಕ್ಟೊ ರೋಲ್‌ನಲ್ಲಿ ಸಬ್‌ಸ್ಟ್ಯಾನ್‌ಷಿಯಲ್ ಡಿಸ್ಕ್ರಿಮಿನೇಷನ್ ಕಂಡುಬಂದಾಗ ಅದನ್ನು ಪರಿಶೀಲನೆ ಮಾಡಿ ಆ ಬಗ್ಗೆ ಯೋಗ್ಯವಾದ ಕಾರ್ಯಕ್ರಮವನ್ನು ಕೈಗೊಳ್ಳಲು ಈ ಬಿಲ್ಲಿನ 4 ಮತ್ತು 9 ನೇ ಸೆಕ್ಷನ್‌ನಲ್ಲಿ ಸಂಪೂರ್ಣವಾಗಿ ಅಳವಡಿಸಿದೆ.

ಇನ್ನು ಶ್ರೀ ಮಾನ್ ಎಂ. ಎಸ್. ಕೃಷ್ಣನ್‌ರವರು ಮತ್ತು ಶ್ರೀಮಾನ್ ಶಾಮಣ್ಣನವರು ಸರ್ಕಾರವೇ ಈ ಮುನಿಸಿಪಾಲಿಟಿ ಬಗ್ಗೆ ಹೆಚ್ಚಿನ ಅಧಿಕಾರ ತೆಗೆದುಕೊಂಡು ಬಿಟ್ಟಿದ್ದಾರೆ ಅನ್ನುವ ಟೀಕೆ ಮಾಡಿದ್ದಾರೆ, ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುವುದು ಏನೆಂದರೆ ಈಗ ಇದ್ದಂಥ ಪರಿಸ್ಥಿತಿಯಲ್ಲಿ ಜನರು ಅಸೆಂಬ್ಲಿ ಸೀಟಿಗೆ ಆರಿಸಿ ಬರಬೇಕಾದರೆ ಯಾವ ಎಲೆಕ್ಟೊರಲ್ ರೋಲ್ ಉಪಯೋಗ ಮಾಡುತ್ತೇವೋ ಅದೇ ಎಲೆಕ್ಟೊರಲ್ ರೋಲ್ ಅನ್ನೇ ಈ ಮುನಿಸಿಪಾಲಿಟಿಯವರು ಉಪಯೋಗ ಮಾಡಬೇಕು ಅಂತ ಇದೆ. ಆದರೆ ಇದರಿಂದ ಏನಾಗುತ್ತದೆ ಎಂದರೆ ಎಲೆಕ್ಟೊರಲ್ ಪ್ರಕಾರ ವೋಟರ್‌ಲಿಸ್ಟ್ ಮಾಡಿದರೆ 5 ವರ್ಷಕ್ಕೊಂದು ಸಾರಿ ಚುನಾವಣೆ ನಡೆಯಬೇಕಾಗುತ್ತದೆ ಒಮ್ಮೊಮ್ಮೆ ಏನಾಗುತ್ತದೆ 5 ವರ್ಷದೊಳಗೇನೇ ಅನೇಕ ಮುನಿಸಿಪಾಲಿಟಿಗಳಲ್ಲಿ ಚುನಾವಣೆ ಬರುತ್ತದೆ ಇದರಲ್ಲಿ ಕೆಲವರು ಮೆಜಾರಿಟಿ ಬಂದಿರುವವರು ಓಟು ಮಾಡುವ ಹಕ್ಕು ಇರುವುದರಿಂದ ಅವರಿಗೂ ಒಂದು ಛಾನ್ಸ್ ಇರಬೇಕಾಗುತ್ತದೆ. ಉದಾಹರಣೆಗೆ 1972 ರಲ್ಲಿ ಒಂದು ಸಾರಿ ಜನ ರಲ್ ಎಲೆಕ್ಷನ್ ಆಯಿತು. ನಂತರ 1973, 1974, 1975 ರಲ್ಲಿ ಅನೇಕ ಮುನಿಸಿಪಾಲಿಟಿಗಳಲ್ಲೂ ಕೂಡ ಅವರವರ ಟರ್ಮಗೆ ಅನುಗುಣವಾಗಿ ಎಲೆಕ್ಷನ್ ಆಗಬೇಕಾಯಿತು. ಹೀಗೆ 1972 ರಿಂದ 1976 ರವರೆಗೂ ಯಾರ್ಯಾರು ಮೆಜಾರಿಟಿ ಬಂದಿರುತ್ತಾರೋ ಅವರಿಗೆ ಓಟು ಮಾಡುವ ಹಕ್ಕು ಸಿಗಲಿ, ಅವರು ಈ ಓಟಿನಲ್ಲಿ ಭಾಗವಹಿಸಲಿ ಅಂತ ಈ ಸೆಕ್ಷನ್‌ನಲ್ಲಿ ಸೇರಿಸಿದ್ದೇವೆ. ಮೊದಲು ಅಂತಹವರಿಗೆ ಈ ಪ್ರಜಾಪ್ರಭುತ್ವದಲ್ಲಿ ಛಾನ್ಸ್ ಇರಲಿಲ್ಲ. ನನಗೆ ಜ್ಞಾಪಕ ಇದ್ದ ಹಾಗೆ ಒಮ್ಮೆ ಓಟರ್‌ಲಿಸ್ಟ್

ತಯಾರು ಮಾಡುವಾಗ ಅವನ ಹೆಸರೇ ಇರಲಿಲ್ಲ, ಅವನು ಆ ಮ್ಯುನಿಸಿಪಾಲಿಟಿಗೆ ಕಂಟೆಸ್ಟ್ ಮಾಡಬೇಕು ಎಂದು ನೋಡಿದಾಗ ಅವನ ಹೆಸರೇ ಇರಲಿಲ್ಲ. ಈರೀತಿ ಇದ್ದುದರಿಂದ ಅವನಿಗೆ ಅವರಿರದ ಓಟಿಗೆ ಸಿಗಲಿಲ್ಲ. ಮೊದಲು ಓಟು ಮಾಡುವ ಹಕ್ಕಾಗಲಿ ಅಥವಾ ಓಟು ಕೊಡುವ ಹಕ್ಕಾಗಲಿ ಸರ್ಕಾರಕ್ಕೆ ಇಲ್ಲ ಅಂತ ಮೊದಲು ಇತ್ತು. ಈ ಕಾರಣದಿಂದ ನಾಮಿನಲ್ ರೋಲ್ ತಯಾರು ಮಾಡುವ ಪೂರ್ವದಲ್ಲಿ ವೋಟರ್‌ಲಿಸ್ಟ್ ಬಗ್ಗೆ ತಿದ್ದುಪಡಿ ಮಾಡುವ ಅಧಿಕಾರ ಸರ್ಕಾರ ತೆಗೆದುಕೊಂಡಿದೆ. ಈ ರೀತಿ ಒಂದು ಅಧಿಕಾರ ತೆಗೆದುಕೊಂಡದ್ದು ಜನರ ಒಂದು ಹಿತಕ್ಕಾಗಿಯೇ ಹೊರತು ಸರ್ಕಾರಕ್ಕೆ ಇದರ ಅಧಿಕಾರ ಇರಬೇಕು ಎನ್ನುವ ಉದ್ದೇಶವಿಲ್ಲ. ಆದುದರಿಂದ ಈ ಒಂಬು ಅಧಿಕಾರವನ್ನು ಅಂದರೆ ಎಲೆಕ್ಟೋರೋಲ್‌ನಲ್ಲಿ ಕರೆಕ್ಷನ್ ಮಾಡುವ ಅಧಿಕಾರವನ್ನು ತೆಗೆದುಕೊಂಡು ಅಂಥಾವಾಗೂ ಛಾನ್ಸ್ ಕೊಟ್ಟಿದ್ದೇವೆ. ನಾವು ಈಗ ಮಾಡಿರುವುದು ಪ್ರಜಾತಂತ್ರಕ್ಕೆ ಅನುಗುಣವಾಗಿದೆ, ಶ್ರೀ ಮಾನ್ ಎಂ. ಎಸ್. ಕೃಷ್ಣನ್‌ರವರು ಸೆಕ್ಷನ್ 38 ರಲ್ಲಿ subject to control, supervision and direction by Government" ಅಂತ ಇರುವುದನ್ನು ತೆಗೆದುಕೊಂಡು ಎಲೆಕ್ಷನ್ ಮಾಡುವುದರಲ್ಲಿ ಹಂತಹಂತದಲ್ಲೂ ಇದು ದುರುಪಯೋಗವಾಗುವ ಸಂದರ್ಭ ಇದೆ ಅಂತ ಟೀಕೆ ಮಾಡಿದ್ದಾರೆ. ಇದು ಆರೀತಿ ಆಗುವುದಕ್ಕೆ ಬರುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರ ಜೊತೆ ಯಲ್ಲೇ ನಾನು ಹೇಳುವುದು ಏನೆಂದರೆ ಈ ಅಧಿಕಾರ "subject to control, supervision and direction by Goverament" ಅಂತ ಏನು ಇದೆ ಇದು ಹಿಂದೆ ನಿಯಮಾವಳಿಯಲ್ಲೂ ಇತ್ತು ಅದನ್ನೇ ಈಗ ಶಾಸನದಲ್ಲಿ ಅಂದರೆ 74 ಮತ್ತು 75ನೇ ಸೆಕ್ಷನ್‌ನಲ್ಲಿ ಅಳವಾಡಿಸಲಾಗಿದೆ.

4-30 ಪಿ.ಎಂ.

ಈಗ ಸೆಕ್ಷನ್ 38ಕ್ಕೆ ತಿದ್ದುಪಡಿ ಮಾಡಿದ್ದು ಏನೆಂದರೆ "revision and correction of electoral rolls, redistribution of territorial divisions" ಎಂದು. ಈರೀತಿ ಮಾರ್ಪಾಡು ಆದನಂತರ ಇವೆರಡೂ ಅತ್ಯಾವಶ್ಯಕವಾಗಿ ಆಗಬೇಕಾದಂಥ ಕಾರ್ಯಕ್ರಮವೆಂದುಕೊಂಡು 'ಬಿ' ಅಂಡ್ 'ಸಿ' ಎಂದು ಎರಡು ಕ್ಲಾಸ್‌ಗಳನ್ನು ಇಲ್ಲಿ ಅಳವಡಿಸಲಾಗಿದೆಯೇ ಹೊರತು, ಸರ್ಕಾರಕ್ಕೆ ಈ ಮೂಲಕ ಹೆಚ್ಚಿನ ಅಧಿಕಾರವನ್ನು ತೆಗೆದುಕೊಂಡಿಲ್ಲ. ಇದು ಪ್ರಜಾತಂತ್ರಕ್ಕೆ ಅನುಗುಣವಾಗಿ ಬೇಕಾಗಿರುವಂತಹ ಒಂದು ಪ್ರಾವಿಜನ್ ಎಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮತದಾರರ ಪಟ್ಟಿ ಸರಿಯಾಗಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಾಗಲೆಲ್ಲಾ ಇಲ್ಲಿ ಹೇಳಿರುವಂತೆ ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಅಲ್ಲ, ಸರ್ಕಾರದ ಗಮನಕ್ಕೆ ಬಂದಾಗ ಎಂದು ಅಲ್ಲ, ಇಲ್ಲಿ ಅಮೆಂಡ್‌ಮೆಂಟ್ ಕ್ಲಾಸ್-4 ರಲ್ಲಿ ಏನು ಹೇಳಲಾಗಿದೆಯೆಂದರೆ :

"(2) Notwithstanding anything contained in sub-section (1) or any other provisions of this Act,-

(*a*) if any time it appears to the State Covernment that there is a substantial discrepancy between the electoral roll of a constitutency as republihed under sub-section (1) and the electoral roll for the time being in force for the election of members of the Karnataka Legislative Assembly relating to the area comprised in that constituency the State Government may, by order, direct that within such time as may be specified in the order the electoral roll so republished shall be corrected by the revising" authority. ಎಂದು. ಇಲ್ಲಿ ಇದನ್ನು ಏಕೆ ಹೇಳಲಾಗಿದೆಯೆಂದರೆ, ಡಿವಿಜನ್‌ಗಳನ್ನು ಕಂಟಿಗ್ಯೋಯಸ್ ಆಗಿ ಮಾಡಬೇಕೆಂದು ನಾವು ಅವರಿಗೆ ಹೇಳಿದ ಮೇಲೂ ಸಹ, ಅದರಲ್ಲಿ ಏನಾದರು ಹೆಚ್ಚುಕಡಿಮೆಯಾಗಿದ್ದರೆ, ಅದನ್

ಸರಿಪಡಿಸತಕ್ಕಂಥ ಅಧಿಕಾರ ಸರ್ಕಾರಕ್ಕೆ ಇರಬೇಕೆಂದುಕೊಂಡು ಈರೀತಿ ಮಾಡಲಾಗಿದೆ. ಒಂದುವೇಳೆ ಈರೀತಿ ಲೋಪದೋಷಗಳನ್ನು ಇಟ್ಟುಕೊಂಡು ಚುನಾವಣೆಯನ್ನು ನಡೆಸಿಬಿಟ್ಟರೆ, ಪುನ: ಚುನಾವಣೆ ನಡೆಸಬೇಕೆಂದು ಕೋರ್ಟಿನಲ್ಲಿ ಯಾರಾದರೂ ಛಾಲೆಂಜ್ ಮಾಡಬಹುದೆಂದುಕೊಂಡು ಈರೀತಿಯಾಗಿ ಮಾಡಲಾಗಿದೆ. ಒಂದು ಕೇಸ್‌ನಲ್ಲಿ ಈರೀತಿ ಚುನಾವಣೆ ನಡೆದಾಗ ಸಂಬಂಧಪಟ್ಟವರು ಸುಪ್ರೀಂ ಕೋರ್ಟಿನವರೆಗೂ ಹೋದಂಥ ಕೇಸ್ ಇದೆ ಎಂದು ನಾನು ಆಗಲೇ ತಮಗೆ ಹೇಳಿದ್ದೇನೆ. ಇಲ್ಲಿ ನಾವು ಹೊಸ ಅಧಿಕಾರಣ ತೆಗೆದುಕೊಂಡಿಲ್ಲ. ಈ ಮೊದಲು ಇದ್ದಂಥ ಅಧಿಕಾರವನ್ನೇ ಈ ಆಕ್ಟ್‌ನಲ್ಲಿ ಅಳವಡಿಸಲಾಗಿದೆಯೇ ಹೊರತು, ಇದೇನೂ ಹೊಸ ಅಧಿಕಾರವಲ್ಲ.

ಶ್ರೀ ವಿ. ಎಸ್. ಪಾಟೀಲ್.— ಯಾರಾದರೂ ಸರ್ಕಾರಕ್ಕೆ ಬರೆದು ತಿಳಿಸಿದಾಗ ಈ ರೀತಿ ಮಾಡುತ್ತೀರೋ ಅಥವಾ ಸುವ್‌ಮೊಟೋ ನೀವ್ ಅಪ್ಲೈ ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.— ಡಿಸ್ಕ್ರಿಪೆನ್ಸಿ ಇದ್ದರೆ ಅದನ್ನು ಸರಿಪಡಿಸುತ್ತೇವೆ ಅಥವಾ ಸುವ್‌ಮೊಟೋ ಆದರೂ ಸರಿಯೇ ;

ಶ್ರೀ ಕಾಗೋಡು ತಿಮ್ಮಪ್ಪ.— ಚುನಾವಣೆ ಮಾಡುವುದಕ್ಕೆ ಮೊದಲು ರಿವೈಜಿಂಗ್ ಅಥಾರಿಟಿ ಯಾರು ಇರುತ್ತಾರೆ ಅವರು ಮತದಾರರ ಪಟ್ಟಿಯನ್ನು ರಿವೈಜ್ ಮಾಡಬೇಕು ಎಂಬತಕ್ಕಂಥ ಅಬ್ಲಿಗೇಟರಿ ಫಂಕ್ಷನ್ ಮಾಡಿದರೆ ಅವರೇ ಆ ಕೆಲಸ ಮಾಡುತ್ತಾರೆ. Irrespective of the fact whether it is brought to the notice of the Government or not, the revising authority is bound to revise the electoral roll.

ಶ್ರೀ ಡಿ. ಕೆ. ನಾಯ್ಕರ್.— ಹಾಗೆಮಾಡಿದಾಗಲೂ ಕೂಡ ಪುನಃ ಕಾಗೋಡು ತಿಮ್ಮಪ್ಪ ಅಂತಹವರು ಮತದಾರರ ಪಟ್ಟಿಯಲ್ಲಿ ಕೆಲವೊಂದು ನ್ಯೂನತೆಗಳಿವೆಂದು ಸರ್ಕಾರದ ಗಮನಕ್ಕೆ ತಂದರೆ ಆಗ ಸರ್ಕಾರ ಏನು ಮಾಡಬೇಕು ಎಂಬುದನ್ನು ತಾವೇ ಯೋಚನೆ ಮಾಡಿ. ಈ ಎಲ್ಲ ಅಂಶಗಳನ್ನು ಆ ಕಮಿಟಿಯವರು ಗಮನದಲ್ಲಿಟ್ಟುಕೊಂಡೇ ಈ ರೀತಿ ಬದಲಾವಣೆ ಮಾಡಬೇಕೆಂದು ಹೇಳಿರುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಸಂಬಂಧಪಟ್ಟ ಅಧಿಕಾರಿಯೇ ಮತದಾರರ ಪಟ್ಟಿಯನ್ನು ರಿವೈಜ್ ಮಾಡುವುದರಿಂದ, ಆ ವಿಚಾರವನ್ನು ಸರ್ಕಾರ ಗಮನಕ್ಕೆ ತರಬೇಕಾದಂಥ ಅಗತ್ಯವೇ ಇರುವುದಿಲ್ಲ.

ಶ್ರೀ ಡಿ. ಕೆ. ನಾಯ್ಕರ್.— ಈ ವಿಚಾರದಲ್ಲಿ ಏನು ಮಾಡಬೇಕೆಂಬುದನ್ನು ಆಕ್ಟ್‌ನಲ್ಲಿ ಹೇಳಲಾಗಿದೆ. ಇನ್ನು ಮಾನ್ಯ ಕೃಷ್ಣನ್ ಅವರು ಮತ್ತು ಮಾನ್ಯ ಶ್ಯಾಮಣ್ಣನವರು ತೆರಿಗೆ ಬಗ್ಗೆ ಪ್ರಸ್ತಾಪ ಮಾಡುತ್ತಾ, ಈಗ ಹನ್ನೆರಡೂವರೆ ಪರ್ಸೆಂಟ್ ಇರುವುದನ್ನು ೧೫ ಪರ್ಸೆಂಟ್‌ಗೂ ಮತ್ತು ಹದಿನೇಳೂವರೆ ಪರ್ಸೆಂಟ್ ಇರುವುದನ್ನು ೨೦ ಪರ್ಸೆಂಟಿಗೂ ಹೆಚ್ಚು ಮಾಡುತ್ತಿರುವುದು ಬಹಳ ಅನ್ಯಾಯ, ಅದು ಸರಿಯಾದುದಲ್ಲವೆಂದೂ ಹೇಳಿ, ಈಗ ಇರುವಂತಹ ಲೋಪದೋಷಗಳನ್ನೇ ಸರಿಪಡಿಸಿದರೆ ಹೆಚ್ಚಿನ ಆದಾಯ ಬರುತ್ತಿತ್ತು. ಆದರೆ ಈ ರೀತಿ ತೆರಿಗೆ ಹೆಚ್ಚು ಮಾಡುತ್ತಿರುವುದು ಸರಿಯಲ್ಲವೆಂದು ಹೇಳಿದ್ದಾರೆ. ಮಾನ್ಯ ಶ್ಯಾಮಣ್ಣನವರು ಈ ಬಗ್ಗೆ ಕೆಲವೊಂದು ಉದಾಹರಣೆಗಳನ್ನು ಸಹ ಕೊಟ್ಟರು. ಏನೆಂದರೆ, ಅನೇಕ ಮನೆಗಳು ಅನ್—ಅಸೆಸ್ಡ್ ಆಗಿ ಉಳಿದಿವೆ. ಮತ್ತು ಹಳೆಯ ಮನೆಗಳಿಗೆ ಮಾರ್ಕೆಟ್ ವ್ಯಾಲ್ಯೂ ಮೇಲೆ ಕಂದಾಯ ನಿಗದಿ ಮಾಡಿದರೆ ಆದಾಯ ಜಾಸ್ತಿ ಬರುವುತ್ತೆದೆಂದುಕೊಂಡು ಅವರೇ ಕೆಲವೊಂದು ಟಿಕೇಟುಗಳನ್ನು ಸಹ ಮಾಡಿದರು ಇಂತಹ ಲೋಪದೋಷಗಳೇನಾದರೂ ಇದ್ದರೆ, ಅವುಗಳನ್ನು ಸರಿಪಡಿಸಬೇಕೆಂದುಕೊಂಡೇ ಸರ್ಕಾರ ಇದನ್ನು ಇನ್ನೊಂದು ರೀತಿಯಲ್ಲಿ ರಿವೈಜ್ ಮಾಡುವಂತಹ ಅಧಿಕಾರವನ್ನು ಇದರಲ್ಲಿ ತಂದಿದೆ. ಆದರೂ ಸಹ ಅವರು ಈಗಿರತಕ್ಕಂಥ ಲೋಪದೋಷಗಳನ್ನು ಸರಿಪಡಿಸಿದ್ದೇ ಆದರೆ ಇದನ್ನು ರಿವೈಜ್ ಮಾಡತಕ್ಕಂಥ ಅವಶ್ಯಕತೆಯೇ ಇರುವುದಿಲ್ಲವೆಂದು ಹೇಳಿದರು,

ಶ್ರೀ ಎಂ. ಎಸ್. ಕೃಷ್ಣನ್.— ಈಗ ರೆಕವರಿ ಸರಿಯಾಗಿ ಆಗುತ್ತಿಲ್ಲ. ಅದನ್ನು ಸರಿಯಾಗಿ ಮಾಡಿ ಮತ್ತು ಕಾರ್ಗೆ ಸಮಿತಿಯ ವರದಿಯನ್ನು ತಾವು ಒಪ್ಪಿಕೊಳ್ಳಬೇಕು.

ಶ್ರೀ ಡಿ. ಕೆ. ನಾಯ್ಕರ್.— ಈ ಒಂದು ಪವರೆಯನ್ನು ಇದರಲ್ಲಿ ಅವಳಡಿಸಿದ್ದಕ್ಕೆ, ಈ ರೀತಿಯ ಒಂದು ಅಧಿಕಾರವನ್ನು ಪಡೆದುಕೊಂಡಿದ್ದು ಸರಿಯಲ್ಲವೆಂದು ಅವರು ಹೇಳಿದ್ದಾರೆ,

ಶ್ರೀ ಎಂ. ಎಸ್. ಕೃಷ್ಣನ್.— ೯ ಪರ್ಸೆಂಟ್‌ಗೆ ತೆರಿಗೆಯನ್ನು ಇಳಿಸುತ್ತೇವೆಂದು ತಾವು ಆಶ್ವಾಸನೆ ಕೊಟ್ಟಿದ್ದು ಏನಾಯಿತು ?

ಶ್ರೀ ಡಿ. ಕೆ. ನಾಯ್ಕರ್.— ೯ ಪರ್ಸೆಂಟ್ ಇಳಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದ ಕಾಲಕ್ಕೂ ಈಗಿನ ಕಾಲಕ್ಕೂ ಬದಲಾವಣೆಯಾಗಿದೆ. ಜೊತೆಗೆ ರೂಪಾಯಿಯ ಮೌಲ್ಯ ಹೆಚ್ಚು ಕಡಿಮೆಯಾಗಿರುವಾಗ ೯ ಪರ್ಸೆಂಟೇ ಇರಬೇಕೆಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಟ್ಯಾಕ್ಸ್ ವಸೂಲಿ ಮಾಡಬೇಡಿ ಎಂದು ಹೇಳತಕ್ಕಂಥ ಜನರು ನಾವಲ್ಲ. ಆದರೆ ಬೆಂಗಳೂರು ನಗರಕ್ಕೆ ಸೇರಿದ ಗ್ರಾಮಗಳಿಗೆ ಅವಶ್ಯಕವಾಗಿ ಬೇಕಾದಂಥ ನೀರು, ದೀಪ, ಒಳಚರಂಡಿ ವ್ಯವಸ್ಥೆಗಳನ್ನು ಮಾಡಿಕೊಟ್ಟಮೇಲೆ ೧೫ ಪರ್ಸೆಂಟ್ ತೆರಿಗೆ ಹಾಕುತ್ತೇವೆಂದು ತಾವು ಆಶ್ವಾಸನೆ ಕೊಟ್ಟಿದ್ದೀರಿ. ಆದರೆ ಈಗ ಬೆಂಗಳೂರು ನಗರಕ್ಕೆ ಸೇರಿದ ೩೬ ಗ್ರಾಮಗಳಿಗೆ ಈ ಯಾವ ಅನುಕೂಲಗಳನ್ನು ಮಾಡಿಕೊಟ್ಟಿಲ್ಲ. ತಾವು ನನ್ನ ಜೊತೆಯಲ್ಲಿ ಬಂದರೆ ಬೇಕಾದರೆ ತೋರಿಸುತ್ತೇನೆ. ಈ ಅನುಕೂಲಗಳನ್ನು ಮೊದಲು ಮಾಡಿ ಕೊಡಿ. ನಂತರ ೧೫ ಇಲ್ಲವೆ ೧೨ ಪರ್ಸೆಂಟ್ ಆದರೂ ತೆರಿಗೆ ಕೊಡಲು ನಾವು ಸಿದ್ಧ. ಅಲ್ಲಿಯ ವರೆಗೆ ಈಗಿನ ೯ ಪರ್ಸೆಂಟ್‌ಗೆ ಇಳಿಸಲು ತಯಾರಿದ್ದೀರಿ ?

ಶ್ರೀ ಡಿ. ಕೆ. ನಾಯ್ಕರ್.— ಮಾನ್ಯ ಕೃಷ್ಣನ್ ಅವರು ತಮ್ಮ ವಾದವನ್ನೇ ಮುಂದುವರೆಸಿ ಕೊಂಡು ಹೋಗುತ್ತಿದ್ದಾರೆ. ೭-೮ ವರ್ಷಗಳ ಹಿಂದೆ ಕೊಟ್ಟಂತಹ ವಚನವನ್ನು ಈಗಲೂ ಪಾಲಿಸ ಬೇಕೆಂದು ಹೇಳುತ್ತಿದ್ದಾರೆ. ಆದರೆ ಕೆಲವೊಂದು ಕೆಲಸಗಳನ್ನು ಈ ಸ್ಥಳೀಯ ಸಂಸ್ಥೆಗಳು ಮಾಡಬೇಕೆಂದೇ ಹೇಳಿದ್ದೇವೆ. ಅಂದರೆ, ನರ್ಸರಿ ಶಿಕ್ಷಣವನ್ನು ಅವರೇ ಕೊಡಬೇಕು. ಚುನಾವಣೆಯ ಜವಾಬ್ದಾರಿ ಯನ್ನು ಅವರೇ ವಹಿಸಿಕೊಳ್ಳಬೇಕು. ರೆಕಾರ್ಡ್ಸ್‌ನ್ನು ಅಪ್-ಟು-ಡೇಟ್ ಆಗಿ ಮೇನ್‌ಟೇನ್ ಮಾಡ ಬೇಕು. ಪ್ಲಾನಿಂಗ್ ಅಂಡ್ ಮೇನ್‌ಟೆನೆನ್ಸ್ ಆಫ್ ರೋಡ್ಸ್‌ನ ಜವಾಬ್ದಾರಿಯನ್ನು ಅವರಿಗೇ ವಹಿ ಸಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.— ನಾವು ಕೇಳುತ್ತಿರುವುದೇ ಒಂದಾದರೆ, ತಾವು ಹೇಳುತ್ತಿರುವುದೇ ಬೇರೆಯಾಗಿದೆ. ಈ ಹಿಂದೆ ಈ ರೀತಿಯ ಆಶ್ವಾಸನೆ ಕೊಟ್ಟಿರಲಿಲ್ಲವೇ ? ತಾವು ಕೊಟ್ಟಿರಲಿಲ್ಲವೆಂದು ಹೇಳಿದರೆ, ನಾವು ಪುಸ್ತಕ ತೆಗೆದು ನೋಡುತ್ತೇವೆ. ಈಗ ನೀವು ವಚನ ಭ್ರಷ್ಟರಾಗುತ್ತಿದ್ದೀರಿ.

ಶ್ರೀ ಡಿ. ಕೆ. ನಾಯ್ಕರ್.— ನಾನು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ಸಿ. ಎನ್. ಪಾಟೀಲ್.— ಹೆಲ್ತ್ ವಿಚಾರವನ್ನು ಇದರಲ್ಲಿ ಸೇರಿಸಿಲ್ಲ.

ಶ್ರೀ ಡಿ. ಕೆ. ನಾಯ್ಕರ್.— ಸ್ಥಳೀಯ ಸಂಸ್ಥೆಗಳಿಗೆ ಆ ಜವಾಬ್ದಾರಿ ಬೇಡ ಎಂದು ಕೊಂಡು ಆ ಕೆಲಸವನ್ನು ಸರ್ಕಾರವೇ ಮಾಡುತ್ತಿದೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣನ್ ಅವರು ಕೇಳುತ್ತಿರುವ ಪ್ರಶ್ನೆ ಬಹಳ ಪ್ರಾಮುಖ್ಯವಾಗಿದೆ. ಈ ಸದನದಲ್ಲಿ ಮಾನ್ಯ ಮಂತ್ರಿಗಳು ಒಂದು ಮಾತನ್ನು ಕೊಟ್ಟ ಮೇಲೆ ಅದರಂತೆ ನಡೆದುಕೊಳ್ಳತಕ್ಕಂಥ ಒಂದು ಜವಾಬ್ದಾರಿ, ಒಂದು ನೈತಿಕ ಹೊಣೆ ಸರ್ಕಾರದ ಮೇಲಿದೆ ಎಂಬುದಾಗಿ ಅವರು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ನೈತಿಕ ಹೊಣೆ, ಅಧಿಕಾರದ ಹೊಣೆ ಎರಡೂ ಇರುವುದರಿಂದ ಅದನ್ನು ನಡೆಸಿಕೊಡಬೇಕು. ಒಂದು ಸಲ ಹೇಳಿದ್ದೆನು. ಬದಲಾವಣೆ ಮಾಡುವುದಕ್ಕೆ ಬೇಕಾದಷ್ಟು ದಾರಿಗಳಿವೆ. ಆದರೆ ಅದಕ್ಕೆಲ್ಲಾ ಅವಕಾಶ ಕೊಡದೆ ಹೇಳಿದಂತೆ ನಡೆಸಿಕೊಡಬೇಕು. ಒಂದು ಸಲ ಹೇಳಿದ್ದನ್ನು ನಡೆಸಿಕೊಡುವುದೂ ಒಂದು ಛಾತಿ.

ಶ್ರೀ ಡಿ. ಕೆ. ನಾಯ್ಕರ್.— ಮಾನ್ಯ ಸದಸ್ಯರು ಈ ಹಿಂದೆ ಸರ್ಕಾರ ಕೊಟ್ಟಂತಹ ವಚನವನ್ನು ನನ್ನ ಜ್ಞಾಪಕಕ್ಕೆ ತರುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಒಂದು ವಿಷಯವನ್ನು ಅರ್ಥ ಮಾಡಿ ಕೊಳ್ಳಬೇಕು, ಏನೆಂದರೆ, ಈ ಹಿಂದೆ ವಚನ ಕೊಡುವಾಗ ಏನು ವಾತಾವರಣವಿತ್ತು. ಈಗ ಎಂಥಹ ವಾತಾವರಣವಿದೆ ಎಂಬುದನ್ನು ಅರ್ಥ ಮಾಡಿ ಕೊಳ್ಳಬೇಕು. ಈಗ ಸ್ಥಳೀಯ ಸಂಸ್ಥೆಗಳಿಗೆ ಕೆಲವೊಂದು ಜವಾಬ್ದಾರಿಗಳನ್ನು ವಹಿಸಲಾಗಿದೆ. ಮತ್ತು ಅವುಗಳ ಕೆಲಸವೂ ಹೆಚ್ಚಾಗಿದೆ. ಇದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ೧೯೬೯ರಲ್ಲಿ ಕೊಟ್ಟ ವಚನವನ್ನು ೧೯೭೬ರಲ್ಲಿ ನಡೆಸಬೇಕೆಂದರೆ ಯಾವ ಸುಧಾರಣೆ ಕೆಲಸಗಳು ಆಗಬಾರದೆಂದು ತಮಗೇನಾದರೂ ಇಚ್ಛೆ ಇದೆಯೇ ?

ಶ್ರೀ ಎಂ ಎಸ್. ಕೃಷ್ಣನ್.— ಮಾನ್ಯ ಮಂತ್ರಿಗಳು ಹಿಂದೆ ಯಾವ ಒಂದು ವಾತಾವರಣ ಇತ್ತೋ ಅದೇ ವಾತಾವರಣ ಇವತ್ತು ಇಲ್ಲ, ಒಳ್ಳೆಯ ವಾತಾವರಣ ಕಲ್ಪನೆ ಮಾಡುತ್ತೇವೆಂದು ಹೇಳಿದ್ದಾರೆ. ಕಲ್ಪನೆ ಮಾಡಿದ್ದರೆ ಈ ಒಂದು ಪ್ರಶ್ನೆ ಬರುತ್ತಾ ಇರಲಿಲ್ಲ. ನೀರು ಒಳಚರಂಡಿ ವ್ಯವಸ್ಥೆ ಮಾಡುತ್ತೇವೆ. ಲೈಟ್, ಕೊಡುತ್ತೇವೆ. ಎಂದು ಹೇಳುತ್ತೀರಿ. ನಮ್ಮ ಮುಂದೆ ಆ ರೀತಿ ಹೇಳಿ, ಮತ್ತೆ ಟ್ಯಾಕ್ಸಗಳನ್ನು ವಸೂಲು ಮಾಡುತ್ತೀರಿ.

ಶ್ರೀ ಡಿ ಕೆ. ನಾಯ್ಕರ್.—ಈಗ ನಮಗೆ ಒಳ್ಳೆಯ ವಾತಾವರಣವನ್ನು ಕಲ್ಪನೆ ಮಾಡಬೇಕಾದರೆ ಆದಾಯ ಬೇಕೋ ಬೇಡವೋ ? ಇವಕ್ಕೆಲ್ಲಾ ಹಣ ಖರ್ಚುಮಾಡಬೇಕಾದರೆ ನಾವು ಹಣವನ್ನು ಶೇಕರಣೆ ಮಾಡುವುದು ಬೇಡವೇ ? ಹಣ ಶೇಕರಣೆಯಾದರೆ, ಅಮಿನಿಟಿಸ್‌ಗಳಿಗೆ ಖರ್ಚುಮಾಡುವಂಥ ಒಂದು ಯೋಗ್ಯತೆ ಮುನಿಸಿಪಾಲಿಟಿಗಳಿಗೆ ಬರುತ್ತದೆ. ಹಣವನು ಜನರು ಕೊಡದಿದ್ದರೆ ಮತ್ತೆ ಯಾರು ಕೊಡುವರು ? ಅವಕ್ಕೋಸ್ಕರ ಸ್ವಾಮಿ, ಅಮಿನಿಟೀಸ್ ಕೊಡಬೇಕಾದರೆ ಈ ತರಹ ಟ್ಯಾಕ್ಸಗಳನ್ನು ನಾವು ಹಾಕಲೇ ಬೇಕಾಗುತ್ತದೆ. ಮುನಿಸಿಪಾಲಿಟಿಯವರು ಮತ್ತು ಸರ್ಕಾರದವರು ಇದನ್ನು ಮಾಡುವಾಗ ಸಿವಿಕ್ ಅಮಿನಿಟಿಸ್ ಕೊಡಬಾರದು ಎಂದು ಉದ್ದೇಶವನ್ನು ನಾವು ಇಟ್ಟುಕೊಂಡಿಲ್ಲ. ಈ ತೆರಿಗೆಯನ್ನು ಮಾತ್ರ ನಾವು ಕಾರ್ಪೋರೇಷನ್‌ಗೆ ಬಿಟ್ಟುಕೊಟ್ಟಿದ್ದೇವೆ. ಈಗಿನ ಕಾಲದಲ್ಲಿ ಸಿವಿಕ್ ಅಮಿನಿಟೀಸ್ ಹೆಚ್ಚಾಗಿ ಸಿಕ್ಕಬೇಕು ಎಂದು ನಾವು ಹೇಳುವಾಗ, ಈ ದಿಶೆಯಲ್ಲಿ ನಾವು ಹಿಂದೆ ಬಿದಿದ್ದೇವೆಂದಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ ಈಗಿನ ಸಂದರ್ಭದಲ್ಲಿ ನಾವು ಟ್ಯಾಕ್ಸನ್ನು ಹೆಚ್ಚು ಮಾಡಿದ್ದು ಸರಿಯಾಗಿದೆ.

ಇನ್ನು ಮುನಿಸಿಪಾಲಿಟಿಗೆ ಕಂಟೆಸ್ಟ್ ಮಾಡುವಾಗ ಕೌನ್ಸಲರ್ ಭಾಗಕ್ಕೆ ಮಿನಿಮಂ ೨೫ ವರ್ಷ ಇರತಕ್ಕದ್ದನ್ನು ಮಾನ್ಯ ಸದಸ್ಯರು ೧೮ ವರ್ಷಕ್ಕೆ ಇಳಿಸಬೇಕು ಎಂದು ಹೇಳಿದ್ದಾರೆ. ೧೮ ವರ್ಷ ಏಕೆ ಇರಬೇಕು, ೨೫ ವರ್ಷ ಏಕೆ ಇರಬಾರದು ಎನ್ನುವುದನ್ನು ಕೂಡ ಅವರುಗಳು ಹೇಳಿದ್ದಾರೆ. ಕೌನ್ಸಲರ್ ಆದಮೇಲೆ, ಅಂಡರ್‌ಸ್ಟಾಂಡಿಂಗ್ ಕೆಪಾಸಿಟಿ, ಮೆಚ್ಯುರಿಟಿ, ಮತ್ತು ದಕ್ಷ ಆಡಳಿತಗಾರರ, ಅನುಭವವುಳ್ಳವರು ಇವರು ಆಗಬೇಕಾಗುತ್ತದೆ. ಆದ್ದರಿಂದ ಅಸೆಂಬ್ಲಿ ಎಲೆಕ್ಷನ್‌ಗೆ ಯಾವ ರೀತಿಯಾಗಿ ೨೫ ವರ್ಷ ಇದೆಯೋ ಇದಕ್ಕೂ ಹಾಗೆಯೇ ಇರಬೇಕು ಎನ್ನುವುದು ನನ್ನ ಅಭಿಪ್ರಾಯ

ಶ್ರೀ ಎಂ. ಎಸ್. ಕೃಷ್ಣನ್.— ತಾವು ಕೊಟ್ಟಂಥ ವಚನ ಏನಾಯಿತು ?

ಶ್ರೀ ಡಿ. ಕೆ. ನಾಯ್ಕರ್.— ೧೦ ವರ್ಷದ ಹಿಂದೆ ಇದ್ದಂಥ ವಾತಾವರಣ ಈಗ ಇದೆಯೋ ? ಟ್ಯಾಕ್ಸನ್ನು ವಸೂಲು ಮಾಡಿದ ಮೇಲೆ ಅದನ್ನು ಖರ್ಚು ಮಾಡುವಂಥ ಶಕ್ತಿ ಬರುತ್ತದೆ. ಹಣ ಬಾರದೆ ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.— ಮುನಿಸಿಪಾಲಿಟಿಯನ್ನು ಟೌನ್ ಪಂಚಾಯತ್ ಮಾಡುವುದಕ್ಕೆ ಹೊರಟಿದ್ದೀರಿ. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಡಿ ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ಈಗಿರುವ ಆಕ್ಟನಲ್ಲಿ ನೋಟಿಫೈಡ್ ಏರಿಯಾ ಅಥವಾ ಬೇರೆ ಪ್ರದೇಶಗಳನ್ನು ಪರಿವರ್ತನೆಯನ್ನು ಮಾಡುವಂಥ ಕ್ಲಾಸ್ ಇಲ್ಲ. ಇವುಗಳನ್ನು ಪರಿವರ್ತನೆ ಮಾಡಿ ಮುನಿಸಿಪಾಲಿಟಿಯೊಳಗೆ ತರಬೇಕಾದರೆ ಮೊದಲು ಈ ಪ್ರದೇಶಗಳನ್ನು ನೋಟಿಫೈ ಮಾಡಿದರೆ ಮುನಿಸಿಪಾಲಿಟಿಯೊಳಗೆ ಇವುಗಳನ್ನು ತರುವುದಕ್ಕೆ ಅವಕಾಶವಾಗುತ್ತದೆ. ಇದು ಪ್ರೊವಿಜನಲ್ ಆಗಲೇ ಆಗುವಂಥಾದ್ದು ಇದೆ ಆದರಿಂದ ಈ ೩೪೫ (ಎ) ಪ್ರಾವಿಷನ್ ಮಾಡಿ, ನೇರವಾಗಿ ನೋಟಿಫೈ ಏರಿಯಾ ಇರಲಿ, ಮತ್ತು ಯಾವುದೇ ಪ್ರಾಂತ್ಯ ಇರಲಿ ಅದನ್ನು ಕನ್‌ವರ್ಟ್ ಮಾಡಬೇಕಾದರೆ ನೋಟಿಫಿಕೇಷನ್ ಮಾಡುವುದಕ್ಕೆ ಇದರಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಒಂದೊಂದು ಕಡೆ ನೋಟಿಫೈಡ್ ಏರಿಯಾ ಇದೆ. ಇದರಲ್ಲಿ ಜನಸಂಖ್ಯೆ ೩೫ ರಿಂದ ೪೦ ಸಾವಿರ ಇದೆ. ಇದರಿಂದ ಎಲ್ಲರಿಗೂ ನಾವು ಪ್ರಿವಿಲೇಜಸ್ ಕೊಡಬೇಕಾಗುತ್ತದೆ. ಪ್ರಿವಿಲೇಜಸ್ ಕೊಡಬೇಕಾದರೆ ಇಂಥ ಒಂದು ಪ್ರಾವಿಷನ್ ಬೇಕಾಗುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆ. ಅದೇ ರೀತಿ ಕೆಲವು ಟೌನ್ ಮುನಿಸಿಪಾಲಿಟಿಗಳನ್ನು ಪಂಚಾಯಿತಿ ಮಾಡುವಂಥ ಒಂದು ಅಧಿಕಾರವನ್ನು ಇದರಲ್ಲಿ ಅಳವಡಿಸಿದ್ದೇವೆ. ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಮತ್ತು ಕಾಗೋಡು ತಿಮ್ಮಪ್ಪನವರು ಇವರ ಬಗ್ಗೆ ಕಟುವಾಗಿ ಟೀಕೆ ಮಾಡಿದ್ದಾರೆ. ಅಧ್ಯಕ್ಷರ ಮುಖೇನ ನಾನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ, ಮಾನ್ಯ ಸದಸ್ಯರುಗಳು ಕೆಲವು ಮುನಿಸಿಪಾಲಿಟಿಗಳನ್ನು ನೋಡಿರಬಹುದು, ಕೆಲವು ಕಡೆ ಸುಮಾರು ೧೦ ಸಾವಿರದ ಒಳಗೆ ಜನಸಂಖ್ಯೆ ಇದ್ದು ಅವರಿಗೂ ಸರಿಯಾದಂಥ ಅಮ್ಯುನಿಟೀಸ್ ಕೊಡುವುದಕ್ಕಾಗುವುದಿಲ್ಲ.

ಆ ಪ್ರಕಾರ ಬೆಂಗಳೂರು ಪಟ್ಟಣಕ್ಕೆ ೨-೩ ಮುನಿಸಿಪಾಲಿಟಿಗಳು ಬೇಕಾಗಬಹುದು. ೧೯೬೪ ರಲ್ಲಿ ಮುನಿಸಿಪಲ್ ಆಕ್ಟ್ ಮಾಡಿದಂಥ ಕಾಲದಲ್ಲಿ ೧೦ ಸಾವಿರ ಮಿನಿಮಂ ಪಾಪ್ಯುಲೇಷನ್ ಇರತಕ್ಕ ಪಟ್ಟಣಕ್ಕೆ ಮುನಿಸಿಪಾಲಿಟಿಯನ್ನು ಕೊಡಬೇಕು ಎಂದು ಇದೆ. ಕೆಲವೊಂದು ಮುನಿಸಿಪಾಲಿಟಿಗಳಿಗೆ ನಾನು ಹೋಗಿ ನೋಡಿದಾಗ, ಹತ್ತು ಸಾವಿರಕ್ಕೂ ಕಡಿಮೆ ಜನಸಂಖ್ಯೆಯುಳ್ಳ ಮುನಿಸಿಪಾಲಿಟಿಗಳು ಏನೂ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಏಕೆಂದರೆ, ಅವುಗಳ ಉತ್ಪನ್ನ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಇಲ್ಲ. ಚೀಫ್ ಆಫೀಸರ್‌ಗೆ ಮತ್ತು ಇತರ ಸಿಬ್ಬಂದಿವರ್ಗದವರಿಗೆ ಸಂಬಳ ಕೊಡತಕ್ಕ ಯೋಗ್ಯತೆಯೂ ಕೂಡ ಕೆಲವೊಂದು ಮುನಿಸಿಪಾಲಿಟಿಗಳಿಗೆ ಇಲ್ಲ. ಅಲ್ಲಿ ಡ್ರೈನೇಜ್ ಇಲ್ಲ, ತಾರ್ ರೋಡ್ ಇಲ್ಲ. ಇಂಥ ಮುನಿಸಿಪಾಲಿಟಿಗಳನ್ನು ಮುನಿಸಿಪಾಲಿಟಿಗಳು ಎಂದು ಹೇಳಿ ನಾವು ಯಾವ ರೀತಿ ಸ್ಟೇಟಸ್ ಕೊಡಬೇಕು. ಸಿವಿಕ್ ಅಮಿನಿಟೀಸ್ ಕೊಟ್ಟು, ಸ್ವಚ್ಛವಾದ ವಾತಾವರಣ ಉಂಟುಮಾಡುವುದಕ್ಕೆ ತನ್ನ ಆದಾಯದ ಮೇಲೆ ಮೇಂಟೆನ್ ಮಾಡಲಿಕ್ಕೆ ಆಗದಂಥ ಮುನಿಸಿಪಾಲಿಟಿಯನ್ನು ಏಕೆ ಮುನಿಸಿಪಾಲಿಟಿಯಾಗಿ ಇರಬೇಕು ತಾವೇ ಹೇಳಿ? ಇದನ್ನು ಪಂಚಾಯಿತಿಯಾಗಿ ಇಟ್ಟರೆ ಅದಕ್ಕೆ ಬೇರೆ ಸರ್ಕಾರದ ಸಹಾಯ ಧನ ಸಿಗುತ್ತದೆ ಆದರಿಂದ ತನ್ನ ಕೆಲಸಗಳನ್ನು ಅದು ಮಾಡಿಕೊಂಡು ಹೋಗಬಹುದು. ಸಿವಿಕ್ ಅಮಿನಿಟೀಸ್ ಕೊಡುವುದಕ್ಕೆ ಯೋಗ್ಯತೆ ಇಲ್ಲದಂಥವುಗಳು ಮುನಿಸಿಪಾಲಿಟಿ ಏಕೆ ಆಗಿರಬೇಕು ಏನು ವುದು ಇದರಲ್ಲಿದೆ ಹೋದವರ್ಷ ೩-೪ ಮುನಿಸಿಪಾಲಿಟಿಗಳನ್ನು ನಾವು ಕನ್‌ವರ್ಟ್ ಮಾಡಿಬಿಟ್ಟಿದ್ದೇವೆ. ಕನ್‌ವರ್ಟ್ ಆದಮೇಲೆ ಅವು ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ತಾವು ಸಹ ಅಂಥ ಮುನಿಸಿಪಾಲಿಟಿಗಳನ್ನು ನೋಡಿದರೆ ಗೊತ್ತಾಗುತ್ತದೆ. ಎಷ್ಟೋ ಜನ ಲೋಕಲ್ ಲೀಡರ್ಸ್ ನಮ್ಮಲ್ಲಿ ಬಂದು ನಮ್ಮ ಮುನಿಸಿಪಾಲಿಟಿಯನ್ನು ಪಂಚಾಯಿತಿ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ ಆದ್ದರಿಂದ ನಮ್ಮ ಅಭಿಪ್ರಾಯದಲ್ಲಿ ಎಲ್ಲೆಲ್ಲಿ ಸಿವಿಕ್ ಅಮಿನಿಟೀಸ್ ಕೊಡುವುದಕ್ಕೆ ಯೋಗ್ಯತೆ ಇಲ್ಲದಂಥ ಮುನಿಸಿಪಾಲಿಟಿಗಳು ಇವೆಯೋ, ಮತ್ತು ತನ್ನ ನೌಕರರಿಗೆ ಸಂಬಳ ಕೊಡುವುದಕ್ಕೆ ಯೋಗ್ಯತೆ ಇಲ್ಲವೋ ಅಂಥ ಮುನಿಸಿಪಾಲಿಟಿಗಳು ಕನ್‌ವರ್ಟ್ ಆದರೆ, ಅವುಗಳನ್ನು ಸುಧಾರಣೆ ಮಾಡುವಂಥ ಒಂದು ಸಂದರ್ಭ ಬರುತ್ತದೆ. ಆದ್ದರಿಂದಲೇ ಸರ್ಕಾರದವರು ಇಂಥ ಒಂದು ಅಧಿಕಾರವನ್ನು ಇಟ್ಟುಕೊಳ್ಳಬೇಕು ಎಂದು ಹೇಳಿ ಕ್ಲಾಜ ೩೬೩ ಅನ್ನು ಇಟ್ಟಿದ್ದಾರೆ.

ಶ್ರೀ ಎಂ ಎಸ್ ಕೃಷ್ಣನ್. ತಾವು ಹೇಳುವುದಕ್ಕೂ ಮತ್ತು ಇದರಲ್ಲಿ ಬರುವಂಥ ಅರ್ಥಕ್ಕೂ ವ್ಯತ್ಯಾಸ ಇದೆ. ತಾವು ಹೇಳುವುದು ಮುನಿಸಿಪಾಲಿಟಿಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ; ಅವುಗಳಲ್ಲಿ ಹಣ ಇಲ್ಲ. ಆದರಿಂದ ವಿಲೇಜ್ ಪಂಚಾಯಿತಿಯನ್ನಾಗಿ ಮಾಡಬೇಕಾಗಿ ಬರುತ್ತದೆ ಎಂದು ನನ್ನ ಅಭಿಪ್ರಾಯದಲ್ಲಿ ಇದು ಒಂದು ಪನಿಷ್‌ಮೆಂಟ್ ಇದ್ದಹಾಗೆ, ಮುನಿಸಿಪಾಲಿಟಿಗಳು ಯಾವ ರೀತಿಯಾಗಿ ಕೆಲಸಮಾಡುತ್ತವೆಂದು ಒಂದು ಮೂರು ವರ್ಷಕಾಲ ಸಹಾಯ ನೀಡಿ ನಂತರ ಈ ತೀರ್ಮಾನಕ್ಕೆ ಬಂದಿದ್ದರೆ ಸರಿಯಾಗಿತ್ತು ಎಂದು ಕಾಣುತ್ತದೆ ಈ ರೀತಿಯಾಗಿ ಡೌನ್‌ಗ್ರೇಡ್ ಮಾಡುವಂಥ ಪವರ್ ಅನ್ನು ಏಕೆ ಪಡೆಯುತ್ತೀರೋ ? ಅದಕ್ಕೆ ಬದಲಾಗಿ ಮುನಿಸಿಪಾಲಿಟಿಗಳು ಏಕೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಎಂದು ದೋಷವನ್ನು ಕಂಡುಹಿಡಿದು ಅವುಗಳನ್ನು ಮುಂದುವರಿಸುವುದಕ್ಕೆ ಏಕೆ ಪ್ರಯತ್ನಪಡಬಾರದು ಇದರ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ತಾವು ಹೇಳಬೇಕು.

ಶ್ರೀ ಡಿ. ಕೆ. ನಾಯ್ಕರ್.—ಈಗ ಈ ಅಧಿಕಾರ ಏನು ಸರ್ಕಾರ ತೆಗೆದುಕೊಳ್ಳುತ್ತದೆ ಅದರ ಉದ್ದೇಶವಾದರೂ ಇಷ್ಟೆ. ಯಾವುದಾದರೂ ಟೌನ್ ಮುನಿಸಿಪಲ್ ಕೌನ್ಸಿಲ್‌ನ್ನು ಟೌನ್ ಪಂಚಾಯತಿಯಾಗಿ ಪರಿವರ್ತನೆ ಮಾಡಬೇಕಾದರೆ ಯಾವುದಾದರೂ ಕಾರಣವನ್ನು ತೋರಿಸಿ ಮಾಡಬೇಕಾಗುತ್ತದೆ ಆದ್ದರಿಂದ ಇದನ್ನೆಲ್ಲಾ ತಾವು ಕೇಳಿ ಸ್ವಾಮಿ......

ಶ್ರೀ ಕಾಗೋಡು ತಿಮ್ಮಪ್ಪ.—ನಾಳೆ ಅಲ್ಲಿ ಜನರು ಓಟು ಕೊಡುವುದಿಲ್ಲ ಎಂದು ಹೇಳುತ್ತಾರೆ ಆಗ ನಾವು ಮಾನ್ಯ ನಾಯ್ಕರ್‌ರವರನ್ನು ಹುಡುಕಿಕೊಂಡು ಬರಬೇಕಾಗುತ್ತದೆ.

ಶ್ರೀ ಡಿ. ಕೆ. ನಾಯ್ಕರ್ – ಯಾರು ಟೌನ್ ಮುನಿಸಿಪಾಲಿಟಿಯವರು ಮುಂದೆ ಬಂದು ಟೌನ್ ಪಂಚಾಯಿತಿ ಮಾಡಬೇಕೆಂದು ಕೇಳಿದರೆ ಅಂತಹವನ್ನು ಮಾತ್ರ ಮಾಡುವುದಕ್ಕೆ ಅವಕಾಶ ಮಾಡಿಕೊಂಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದಕ್ಕೆ ತಾವು ಸರಿಯಾದ ವ್ಯವಸ್ಥೆ ಮಾಡದೆ ಇದ್ದರೆ ನಾವು ಟೌನ್ ಮುನಿಸಿಪಲ್ ಕೌನ್ಸಿಲ್‌ನ್ನು ಟೌನ್ ಪಂಚಾಯಿತಿಯಾಗಿ ಪರಿವರ್ತಿಸುತ್ತೇವೆಂದು ಹೇಳಿದರೆ,......

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದವರು ಏನೇ ಕಾನೂನು ತಂದರೂ ಈ ರೀತಿ ಒಂದೇ ಸಾರಿ ತಿದ್ದುಪಡಿಯನ್ನು ತರುತ್ತಿರಲಿಲ್ಲ. ಅದಕ್ಕೆ ಕೆಲವು ಷರತ್ತುಗಳನ್ನು ಹಾಕಿ ಅದನ್ನು ಪೂರೈಕೆ ಮಾಡದೆ ಹೋದರೆ ಈ ರೀತಿ ಮಾಡುತ್ತೇನೆ ಎಂದು ಹೇಳುವುದು ಸಹಜ.

SRI D. K. NAIKAR.—The notification will say the terms under which a municipality will be converted into a Village Panchayat.

SRI KAGODU THIMMAPPA.—Why not you state here the terms?

SRI D. K. NAIKAR.—Such details cannot be explained here. It is only an enabling Provision.

ಶ್ರೀ ಎಸ್. ಬಂಗಾರಪ್ಪ.—ಪ್ರೀವಿಯಸ್ ನೋಟಿಫಿಕೇಷನ್ ನಲ್ಲಿ ಪ್ರಾವಿಷನ್ ಮಾಡಿದ್ದರೆ ಇದರಲ್ಲಿಯೂ ಅದನ್ನು ನಮೂದಿಸಿದ್ದರೆ ಯಾವ ಅಭ್ಯಂತರವೂ ಇರಲಿಲ್ಲ?

ಶ್ರೀ ಡಿ. ಕೆ. ನಾಯ್ಕರ್.—ಹಿಂದಿನ ನೋಟಿಫಿಕೇಷನ್ ನಲ್ಲಿ ಪ್ರಾವಿಷನ್ ಮಾಡದೆ ಹೋದರೆ ಇದರಲ್ಲಿಯೂ ಪ್ರಾವಿಷನ್ ಇಲ್ಲ......

SRI M. S. KRISHNAN.—Even for arresting people under the D. I. R. if he is a threat to the society, they will state the reason. You are just stating that you are converting Town Municipality into a Village Panchayat. You have not stated what are the reasons for such a conversion.

ಶ್ರೀ ಎಸ್. ಟಿ. ಕೃಷ್ಣಪ್ಪ.—ಮಾನ್ಯ ಮಂತ್ರಿಗಳು ಕೊಟ್ಟಂತ ಕಾರಣವದಲ್ಲಿ ಇಂತಿಂಥ ಸಂದರ್ಭಗಳಲ್ಲಿ ಮುನಿಸಿಪಾಲಿಟಿಗಳನ್ನು ಟೌನ್‌ಪಂಚಾಯಿತಿಗಳಾಗಿ ಪರಿವರ್ತನೆ ಮಾಡುತ್ತೇವೆಂದು ಕಾರಣವನ್ನು ಕಾನೂನಿನಲ್ಲಿ ಅಳವಡಿಸಿಬಿಟ್ಟರೆ ತೊಂದರೆಯಿಲ್ಲ. ಅದಕ್ಕೆ ನಮ್ಮ ಕಳಕಳಿಯಿಂದ ಕೇಳುತ್ತಿದ್ದೇವೆ. ಯಾವುದೇ ಕಾರಣದಿಂದ ಸದುದ್ದೇಶವಿರಿದ ಮಾಡಿದ್ದೀರಿ ಅದು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಕೂಡ ಬಾರದು. ಅದಕ್ಕೆ ಎರಡು ಕಾರಣವನ್ನು ಹೇಳಿದ್ದೀರಿ. ಯಾವು ಮುನಿಸಿಪಾಲಿಟಿಗೆ ಆರ್ಥಿಕ ಸ್ವಾವಲಂಬನೆ ಇರುವುದಿದೆಯೋ ಅದನ್ನು ಟೌನ್‌ಪಂಚಾಯಿತಿಯಾಗಿ ಪರಿವರ್ತಿಸಿದರೆ ಅದರ ಅಭಿವೃದ್ಧಿಗೆ ಸರ್ಕಾರದಿಂದ ಸಹಾಯ ಪಡೆಯಬಹುದು ಎನ್ನುವುದನ್ನು ನಾನು ಒಪ್ಪುತ್ತೇನೆ. ಎರಡನೆ ಯದಾಗಿ ಇನ್ನೊಂದು ಕಾರಣವನ್ನು ಹೇಳಿದ್ದೀರಿ ಅದು ಕೆಲವು ಮುನಿಸಿಪಾಲಿಟಿಯವರೇ ಮುಂದೆ ಬಂದು ಇದನ್ನು ಟೌನ್ ಪಂಚಾಯಿತಿಯನ್ನಾಗಿ ಪರಿವರ್ತಿಸಬೇಕೆಂದು ಕೇಳಿದಾಗ ಎಂದು. ಅದನ್ನೇ ತಮ್ಮ ತಿದ್ದುಪಡಿಯಲ್ಲಿ ಅಳವಡಿಸಿದರೆ ಸೂಕ್ತವೆಂದು ನಾವು ಹೇಗಬಹುದು ಆದರೆ ಅದನ್ನು ತಮ್ಮ ತಿದ್ದುಪಡಿಯಲ್ಲಿ ನಮೂದಿಸಿಲ್ಲವೆಂದು ನಾವು ಕೇಳುತ್ತಿರುವುದು.

ಶ್ರೀ ಡಿ. ಕೆ. ನಾಯ್ಕರ್.—ಬಹುಶಃ ನಾನು ಹೇಳಿದಾಗ ಕಾರಣಗಳನ್ನು ತಿಳಿಸಿದ್ದೇನೆ ಆದರೆ ಆ ಕಾರಣಗಳನ್ನು ಈ ಬಿಲ್ಲಿನಲ್ಲಿ ಅಳವಡಿಸಬೇಕೆಂದು ಹೇಳುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಇದು ಸಕಾಲವಲ್ಲ. What may not appear to be good at one time to a particular individual may appear to be good at the second time so, what is good and what is bad can be judged at a future date.

ಆದ್ದರಿಂದ ಅದನ್ನು ಈಗ ಅನ್ವಯಿಸಬೇಕಾಗಿಲ್ಲ. ಯಾವುದೇ ವಿಷಯವಿದ್ದರೂ ಯೋಗ್ಯ ಕಾಲದಲ್ಲಿ ಮಾಡಬೇಕೆಂದಾಗ ಅದಕ್ಕೆ ಎನೇಬಲಿಂಗ್ ಕ್ಲಾಸ್ ಎಂದು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೇನೆ ಆದ್ದರಿಂದ ಇದರಲ್ಲಿ ಯಾವುದೇ ದುರುದ್ದೇಶವಿಲ್ಲವೆಂದು ತಿಳಿದುಕೊಳ್ಳಬೇಕು....

ಶ್ರೀ ಎಸ್. ಬಂಗಾರಪ್ಪ.—ಸಫಿಷಿಯಲ್ ರೀಜನ್ಸ್ ಸರ್ಕಾರಕ್ಕೆ ಕೂಡ ಬಂದಿದ್ದರೆ ಟೌನ್‌ಮುನಿಸಿಪಲ್ ತೆಗೆದು ಟೌನ್ ಪಂಚಾಯಿತಿ ಎಂದು.........

ಶ್ರೀ ಡಿ. ಕೆ. ನಾಯ್ಕರ್.—ಎನೇಬಲಿಂಗ್ ಎಂದು ಇರುವುದನ್ನು ನೀವು ನೋಡಿದ್ದರೆ ಇಷ್ಟು ವ್ಯಾಖ್ಯಾನ ಮಾಡುತ್ತಿರಲಿಲ್ಲ, ಇದರ ಬಗ್ಗೆ ಇಷ್ಟು ವ್ಯಾಖ್ಯಾನ ಮಾಡುವುದು ಬೇಕಿರಲಿಲ್ಲವೆಂದು ಹೇಳುತ್ತೇನೆ. ಒಂದು ಮುನಿಸಿಪಾಲಿಟಿಯಲ್ಲಿ ೧೦ ಸಾವಿರ ಜನಸಂಖ್ಯೆ ಇರುತ್ತದೆ. ಅಲ್ಲಿನ ಉತ್ಪತ್ತಿ

ಸಾಕಷ್ಟು ಇರುವುದಿಲ್ಲ ಆದರಿಂದ ಅಲ್ಲಿನ ಜನರಿಗೆ ಯಾವ ರೀತಿ ಸೌಕರ್ಯ ಕೊಡುವುದಕ್ಕೆ ಹಣವಿಲ್ಲದೆ ತೊಂದರೆಗೆ ಒಳಗಾಗುವುದು ಬೇಡವೆಂದು ಯೋಚನೆಮಾಡಿ ಈ ರೀತಿ ಮಾಡಿದ್ದೇವೆ. ಈ ಅಪ್ರಹೆನ್ಷನ್ ವನಿದೆ ಇದು ಸಾಧ್ಯವಾದುದು ಅಲ್ಲ ಮತ್ತು ಸರಿಯಾದುದಲ್ಲ

ಶ್ರೀ ಎಚ್. ಟಿ. ಕೃಷ್ಣಪ್ಪ.—ಒಂದು ಸಲಹೆಯನ್ನು ಈ ಸನ್ನಿವೇಶದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ ಟೌನ್ ಮುನಿಸಿಪಲ್ ಕೌನ್ಸಿಲ್‌ನನ್ನು ಈ ಕಾರಣದಿಂದ ಟೌನ್ ಪಂಚಾಯಿತಿಯನ್ನಾಗಿ ಪರಿವರ್ತಿಸಬೇಕು ಎಂದು ಒಂದು ಎನೇಬಲ್ಲಿಂಗ್ ಪ್ರಾವಿಷನ್ ಹಾಕಿಕೊಳ್ಳಬೇಕು ಕಾಲಕಾಲಕ್ಕೆ ಸನ್ನಿವೇಶ ಮತ್ತು ಕಾರಣಗಳು ಬದಲಾವಣೆಯಾಗಬಹುದು ಆದಕ್ಕೆ ಇದು ಸಹಾಯವಾಗುತ್ತದೆ

ಶ್ರೀ ಡಿ. ಕೆ. ನಾಯ್ಕರ್—ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣಪ್ಪನವರಿಗೆ ಈಗಾಗಲೇ ಹೇಳಿದ್ದೇನೆ. ಪುನಃ ಪುನಃ ವ್ಯಾಖ್ಯಾನ ಮಾಡುತ್ತಾ ಹೋದರೆ ಅದಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವರ ಅಪ್ರಹೆಷನ್ ಏನು ಇದೆ ಅದರಂತೆ ೧೦ ಸಾವಿರ ಜನಸಂಖ್ಯೆಗಿಂತ ಜಾಸ್ತಿ ಇರುವ ಮುನಿಸಿಪಾಲಿಟಿಗಳನ್ನು ವಿನಾಕಾರಣ ಟೌನ್ ಪಂಚಾಯಿತಿಯಾಗಿ ಮಾಡುವುದಕ್ಕೆ ಯಾವತ್ತು ಸರ್ಕಾರ ಹೋಗುವುದಿಲ್ಲ ಅದು ಯಾವಾಗ ಆರ್ಥಿಕ ಸ್ವಾವಲಂಬನೆ ಇಲ್ಲದೆ ಜನತೆಗೆ ಯಾವ ರೀತಿಯಲ್ಲಿಯೂ ಸಹಾಯಕವಾಗಿಲ್ಲವೆಂದು ತಿಳಿದು ಬರುತ್ತಿದೆ. ಆ ರೀತಿ ತಿಳಿದು ಬಂದಾಗ ಅದರ ಯೋಚನೆ... ....

ಇದರಲ್ಲಿ ಸಂಪೂರ್ಣವಾಗಿ ಅದನ್ನೆಲ್ಲಾ ಸ್ಪೆಲ್ ಮಾಡತಕ್ಕಂಥದ್ದು ಅನಾವಶ್ಯಕ. ಈಗಿರತಕ್ಕಂಥದ್ದೇ ಸರಿಯಾಗಿದೆ. ಇನ್ನೊಂದು ಮಾತನ್ನು ಮಾನ್ಯ ಶ್ರೀ ಕೃಷ್ಣನ್‌ರವರು ಹೇಳುತ್ತಿದ್ದರು, ಈ ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ಕಾರ್ಗ ಸಮಿತಿಯ ವರದಿಯ ಪ್ರಕಾರ ಇನ್ನು ಕೊಟ್ಟಿಲ್ಲ ಇದನ್ನು ಹೆಚ್ಚಿಗೆ ಮಾಡುತ್ತಿದ್ದೀರಿ ಎಂದು. ಮತ್ತೆ ಈ ಪ್ರಾಪರ್ಟಿ ಟ್ಯಾಕ್ಸನ್ನು ಹೆಚ್ಚಿಗೆ ಮಾಡಿದ್ದೀರಿ ಎನ್ನುವಂಥ ವಾದವನ್ನು ಅವರು ಮುಂದುವರಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ಕಾರ್ಗ ಸಮಿತಿಯವರು ಕೊಟ್ಟಂಥ ವರದಿಯನ್ನು ಸರ್ಕಾರ ಪರಿಶೀಲನೆ ಮಾಡುವಂಥ ಹಂತದಲ್ಲಿದೆ ಅವುಗಳಲ್ಲಿ ಯಾವ ಯಾವ ಟ್ಯಾಕ್ಸ್‌ಗಳನ್ನು ಎಷ್ಟೆಷ್ಟರಮಟ್ಟಿಗೆ ಪೂರೈಸಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಬಗ್ಗೆ ಸರ್ಕಾರ ಯೋಗ್ಯವಾದ ಕ್ರಮವನ್ನು ಕೈಗೊಳ್ಳುವಂಥಾದ್ದು ಇದೆ.

ಶ್ರೀ ಎಂ. ಎಸ್. ಕೃಷ್ಣನ್—ಆವಾಗಲೇ ಎಲ್ಲವನ್ನೂ ಪರಿಶೀಲನೆ ಮಾಡಿ ಯೋಗ್ಯವಾದ ಬಿಲ್ಲನ್ನು ತರಬಹುದಾಗಿತ್ತಲ್ಲ!

ಶ್ರೀ ಡಿ. ಕೆ. ನಾಯ್ಕರ್.—ಈ ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ಬೆಂಗಳೂರು ನಗರ ಒಂದರಲ್ಲಿಯೇ ನನಗೆ ಜ್ಞಾಪಕದ ಇದ್ದಹಾಗೆ ೪ ಲಕ್ಷ ರೂಪಾಯಿ ಕೊಡುತ್ತಿದ್ದಾರೆ. ಈಗ ಕಾರ್ಗೆ ಸಮಿತಿಯವರು ಏನು ಹೇಳಿದ್ದಾರೆ ಎಂದರೆ ೪೦ ಪರ್ಸೆಂಟ್ ಕೊಡಬೇಕೆಂದು ಹೇಳಿದ್ದಾರೆ ಇವತ್ತು ಶೇಕಡ ೪೦ ರಂತೆ ಕೊಟ್ಟರೂ ಅದು ಎಷ್ಟು ಆಗುತ್ತದೆ. ಒಂದು ವೇಳೆ ಸರ್ಕಾರದವರು ೫, ೧೦, ೨೦ ಪರ್ಸೆಂಟ್ ಕೊಡಬೇಕೆಂದು, ಯಾವುದೋ ಒಂದು ನಿರ್ಣಯವನ್ನು ಮಾಡಿದಾಗ ಆ ನಿರ್ಣಯಕ್ಕೆ ಬಂದಾಗ ಅದು ೧೦ ಪಟ್ಟು ಆದರೂ ಏರಬಹುದು, ೨೦ ಪಟ್ಟು ಏರಬಹುದು.

ಶ್ರೀ ಎಂ. ಎಸ್. ಕೃಷ್ಣನ್—ಡೆವಲಪ್‌ಮೆಂಟ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್‌ನ ವಿಷಯ ಅದರಲ್ಲಿ ಹೇಳಿದ್ದಾರೆ ಮತ್ತು ಇತರ ವಿಷಯಗಳ ಬಗ್ಗೆಯೂ ಸಹ ಹೇಳಿದ್ದಾರೆ. ಹಾಗೆಯೇ ಟಾಡಿ ಆಕ್ಷನ್ ವಿಷಯ ಹೇಳಿದ್ದಾರೆ. ಇವತ್ತು ಸರ್ಕಾರಕ್ಕೆ ಎಷ್ಟು ಬೇಕಾದರೆ ಟ್ಯಾಕ್ಸನ್ನು ಹಾಕುವುದಕ್ಕೆ ಅಧಿಕಾರವಿದೆ, ಅದುದರಿಂದ ಎಷ್ಟೆಷ್ಟು ಪರ್ಸೆಂಟ್ ಟ್ಯಾಕ್ಸನ್ನು ಹಾಕಬೇಕೆಂದು ತೀರ್ಮಾನಕ್ಕೆ ಬಂದು, ಇಷ್ಟಿಷ್ಟು ಪರ್ಸೆಂಟೇಜ್ ಟ್ಯಾಕ್ಸನ್ನು ಕೊಡಬೇಕೆಂದು ಅದನ್ನು ಅಳವಡಿಸಿಕೊಂಡು ತಂದಿದ್ದರೆ ಅವಾಗ ಅದು ಸಮರ್ಪಕವಾಗಿರುತ್ತಿತ್ತು. ಆಗ ಪುನಃ ಏರಿಸುವ ಪ್ರಶ್ನೆಯೇ ಬರುತ್ತಾ ಇರಲಿಲ್ಲ.

ಶ್ರೀ ಡಿ ಕೆ. ನಾಯ್ಕರ್.—ಇದನ್ನು ಈ ದರದಲ್ಲಿ ಕೊಟ್ಟಾಗ ಹೆಚ್ಚಿಗೆ ಅಡಿಷನಲ್ ಫಂಡ್ಸ್ ಆಗುತ್ತದೆ ಅದರಿಂದ ಫೈನಾನ್ಸಿಯಲ್ ಪೊಜಿಶನ್‌ನಲ್ಲಿ ಲೋಕಲ್ ಬಾಡೀಸ್ ಸೌಂಡ್ ಆಗುತ್ತದೆ. ಆದರಿಂದ ಅವರು ಹೆಚ್ಚಿನ ಕೆಲಸಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಕೆಲವು ಪ್ರಾವಿಜನ್ ಮೇಲೆ ಶ್ರೀಮಾನ್ ಕೃಷ್ಣನ್‌ರವರು ಸುಧೀರ್ಘವಾದ ಭಾಷಣವನ್ನು ಮಾಡಿದರು ಹಾಗೂ ಶ್ರೀ ಕಾಗೋಡು ತಿಮ್ಮಪ್ಪನವರು ಕೂಡ ಒಂದು ದೊಡ್ಡ ಸುಧೀರ್ಘವಾದ ಭಾಷಣವನ್ನೇ ಮಾಡಿದ್ದಾರೆ. ನಿಮ್ಮ ಕಲ್ಪನೆ ಏನಿದೆ ಅವೆಲ್ಲವೂ ಇದರಲ್ಲಿ ಬರುವಂಥದ್ದು ಅಲ್ಲವೆಂದು ಹೇಳಿ ಪುನಃ ಅದಕ್ಕೆ ವಿಶೇಷವಾಗಿ ಉತ್ತರ ಕೊಡುವುದು ಅನಾವಶ್ಯಕವೆಂದು ಇಷ್ಟು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸೈಟ್‌ಗಳನ್ನು ಡಿಸ್ಟ್ರಿಬ್ಯೂಟ್ ಮಾಡಿರುವ ಬಗ್ಗೆ ಡಿಟೇಲ್ಸ್ ಇದೆಯೇ?

ಶ್ರೀ ಡಿ. ಕೆ. ನಾಯ್ಕರ್.—ಸೈಟ್‌ಗೆ ಬೇರೆ ಒಂದು ಸ್ಕೀಂ ಇದೆ ಅದನ್ನು ಇದರಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಆದಕ್ಕಾಗಿ ೨೦ ಅಂಶದ ಕಾರ್ಯಕ್ರಮದಲ್ಲಿ ಅದು ಪ್ರತ್ಯೇಕವಾದ ಕೆಲಸಕಾರ್ಯಗಳು ನಡೆಯುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಗರ ಪ್ರದೇಶಗಳಲ್ಲಿ ಎಲ್ಲಲ್ಲಿ ನಿವೇಶನಗಳನ್ನು ಹಂಚಿದ್ದೀರಿ, ಸೈಟ್‌ಗಳನ್ನು ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರೋ ನೋಡೋಣ.

ಶ್ರೀ ಡಿ. ಕೆ. ನಾಯ್ಕರ್.—ತಾವು ಅದಕ್ಕೆ ಬೇರೆ ಒಂದು ಪ್ರಶ್ನೆ ಹಾಕಿ ಉತ್ತರ ತರಿಸಿ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ನಗರ ಸಭೆಗಳ ನಿವೇಶನಗಳನ್ನು ಹಂಚುವುದರ ಬಗ್ಗೆ ವಿಚಾರ ಮಾಡುವುದಕ್ಕಾಗುವುದಿಲ್ಲ. ಈಗ ತಾವು ೨೦ ಅಂಶದ ಕಾರ್ಯಕ್ರಮದ ಪ್ರಕಾರವಾಗಿ ಎಲ್ಲೆಲ್ಲಿ ಸೈಟ್‌ಗಳನ್ನು ಹಂಚಿದ್ದೀರಿ ಎನ್ನುವ ಬಗ್ಗೆ ಒಂದೆರಡು ಉದಾಹರಣೆಗಳನ್ನು ಕೊಡಿ

ಶ್ರೀ ಡಿ. ಕೆ. ನಾಯ್ಕರ್.—ತಾವು ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿದರೆ ಎಲ್ಲೆಲ್ಲಿ ಯಾವ ಯಾವ ಟೌನ್ ಮುನಿಸಿಪಾಲಿಟಿಯಲ್ಲಿ ಎಷ್ಟೆಷ್ಟು ಕ್ಯಾಪಿಟಲ್ ಸೀಡ್‌ನ್ನು ಕೊಟ್ಟಿದ್ದೇವೆ, ಎಷ್ಟೆಷ್ಟು ಏರಿಯಾ ಅಕ್ವೈರ್ ಮಾಡಿದ್ದೇವೆ, ಎಷ್ಟೆಷ್ಟು ಸೈಟ್‌ಗಳನ್ನು ಅವರ ಡಿಸ್ಟ್ರಿಬ್ಯೂಟ್ ಮಾಡಿದ್ದಾರೆ, ಮಾಡತಕ್ಕಂಥವರು ಇದ್ದಾರೆ ಎನ್ನುವುದನ್ನು ತಿಳಿಸುತ್ತೇನೆ ಈಗ ನನ್ನ ಹತ್ತಿರ ಬಗ್ಗೆ ಮಾಹಿತಿ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಕೇಳಿರತಕ್ಕಂಥದ್ದು ಏಕೆಂದರೆ ತಾವು ಏನು ೨೦ ಅಂಶದ ಕಾರ್ಯಕ್ರಮದ ಕಲ್ಪನೆ ಏನು ಇಟ್ಟುಕೊಂಡಿದ್ದೀರಿ ಅದರ ಪ್ರಕಾರ ಮುನಿಸಿಪಾಲಿಟಿಯಲ್ಲಿ ಆ ಕಾರ್ಯಕ್ರಮವನ್ನು ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ನಾವು ಕೇಳುತ್ತಿದ್ದೇವೆ, ತಾವು ಎಲ್ಲೆಲ್ಲಿ ನಿವೇಶನಗಳನ್ನು ಹಂಚಿದ್ದೀರಿ, ಎಷ್ಟೆಷ್ಟು ಸೀಡ್ ಮನಿಯನ್ನು ಕೊಂಡಿದ್ದೀರಿ, ಎನ್ನುವುದನ್ನು ನಮಗೆ ತಿಳಿಸಿದರೆ ನಮಗೆ ಅನುಕೂಲವಾಗುತ್ತದೆ.

ಶ್ರೀ ಡಿ. ಕೆ. ನಾಯ್ಕರ್.—೨೦ ಅಂಶದ ಕಾರ್ಯಕ್ರಮವನ್ನು ಸರ್ಕಾರದ ಕಾರ್ಯಕ್ರಮವೆಂದು ಮಾಡುತ್ತಿದ್ದೇವೆ. ಆದರೆ ಲೋಕಲ್ ಬಾಡೀಸ್‌ಗೆ ಈ ತರಹದ ಪವರ್ ಕೊಟ್ಟುಬಿಟ್ಟರೆ ಮುನಿಸಿಪಾಲಿಟಿಗಳ ಸೈಟ್ಸ್‌ಗಳು ಏನಿವೆ, ಅನೇಕ ಮುನಿಸಿಪಾಲಿಟಿಗಳಲ್ಲಿ ಓಪನ್ ಏರಿಯಾ ಇಲ್ಲ, ಇದ್ದಂಥದ್ದನ್ನು ಕೂಡ ಯಾರು ಯಾರಿಗೋ ಕೊಟ್ಟು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎನ್ನುವ ದೃಷ್ಟಿಯಿಂದ ಅದನ್ನು ತೆಗೆದುಹಾಕಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಬೇರೆ ಕಡೆ ಕೊಟ್ಟಿದ್ದರೆ ಹೇಳಿ.

ಶ್ರೀ ಡಿ. ಕೆ. ನಾಯ್ಕರ್.—ಆ ವಿಷಯವನ್ನು ತರಿಸಿ ನಿಮಗೆ ಆ ಮೇಲೆ ಹೇಳುತ್ತೇನೆಂದು ನಿಮಗೆ ಆಗಲೇ ನಾನು ಹೇಳಿದೆ. ತಾವು ಅದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿ.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಏತಕ್ಕೆ ಇಷ್ಟು ಒತ್ತಾಯ ಮಾಡುತ್ತಿದೇವೆಂದರೆ ಈಗಿರತಕ್ಕಂಥ ಸೆಕ್ಷನ್‌ರ ಪ್ರಕಾರ ಈ ಕೆಲಸವನ್ನು ಮುನಿಸಿಪಾಲಿಟಿಯವರು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೀರಿ. ಆದುದರಿಂದ ತಾವು ಈ ವಿಚಾರದಲ್ಲಿ ೨೦ ಅಂಶದ ಕಾರ್ಯಕ್ರಮದಂತೆ ಏನು ಮಾಡಿದ್ದೀರಿ, ನಮಗೆ ಅದು ಒಂದು ವರಿ ಆಗಿದೆ, ಆದುದರಿಂದ ತಾವು ಇದರ ಬಗ್ಗೆ ನಮಗೆ ಸಮಾಧಾನವಾದ ಉತ್ತರವನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ ಈಗ ಸಧ್ಯಕ್ಕೆ ಇರತಕ್ಕಂಥ ಮಾಹಿತಿ ಪ್ರಕಾರ ಗುಲ್ಬರ್ಗಾದಲ್ಲಿ ೩೧೫೨ ಸೈಟ್‌ಗಳನ್ನು ಬೆಳಗಾಂನಲ್ಲಿ ೧೫೪ ಸೈಟ್‌ಗಳನ್ನು ಮೈಸೂರು ಡಿವಿಜನ್‌ನಲ್ಲಿ ೧ ಸಾವಿರದ ೭೦ ಸೈಟ್‌ಗಳನ್ನು ಈಗಾಗಲೇ ಹಂಚಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳವರ ಉತ್ತರ ಮುಗಿದಿದ್ದರೆ, ನನ್ನ ಎರಡು ಕ್ಲಾರಿಫಿಕೇಷನ್‌ಗಳಿಗೆ ಅವರು ಉತ್ತರ ಕೊಡಲಿಲ್ಲ ಆದುದರಿಂದ ಅವರು ನನ್ನ ಎರಡು ಕ್ಲಾರಿಫಿಕೇಷನ್‌ಗಳಿಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಸೆಕ್ಷನ್ ೪ನ್ನು ಪಾಯಿಂಟ್ ಔಟ್ ಮಾಡುವಾಗ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಕೂಡ ಕೇಳಿಕೊಂಡರು, ನ್ಯಾಚುರಲ್ ಜಸ್ಟೀಸ್ ಬಗ್ಗೆ ಬಹಳ ಧೀರ್ಘವಾಗಿ ಹೇಳಿದರು ತಾವು ಅದರ ಬಗ್ಗೆ ಮಾತನಾಡಲಿಲ್ಲ. In regard

to amendment to Section 382, what have you done? ಈ ಎರಡು ವಿಷಯಗಳ ಬಗ್ಗೆ ತಾವು ಉತ್ತರ ಕೊಡಲಿಲ್ಲ. ಎಂಪ್ಲಾಯಿಸ್ ಈಗವನ್ನು ಅವರು they are enjoying better conditions than elsewhere. Now, you are trying to make their condition worse. ಇವರೆಡರ ಬಗ್ಗ ಏನು ಯೋಜನೆ ಮಾಡಿದ್ದೀರಿ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ ಕ್ಲಾಜ್ ೧೧ರಲ್ಲಿ ಅಮೆಂಡ್‌ಮೆಂಟ್ ಸೆಕ್ಷನ್ ೪೧ ಎಂದು ಹೇಳಿ ಒಂದು ಮುಖ್ಯವಾದ ಸೂಚನೆಯನ್ನು ತಂದಿದ್ದೇವೆ. ಅದು ನೆಂದರೆ 'after giving him an opportunity of being hard ......'' ಎಂದು ಇದೆ. ಪ್ರೆಸಿಡೆಂಟ್ ಮೇಲೆ ಮಿಸ್ ಕಾಂಡಕ್ಟ್ ಇರಲಿ, ನೆಗ್ಲಿಜೆನ್ಸ್ ಆಫ್ ಡ್ಯೂಟೀಸ್ ಆಗಲೀ, ಇನ್ನು ಯಾವುದೇ ಕಾರಣದಿಂದ ಆಗಲೀ ಪ್ರೆಸಿಡೆಂಟ್‌ನ್ನು ತೆಗೆಯುವುದಕ್ಕೆ ಇರುವ ಅವಕಾಶ ಇದೆ, ಆದರೆ ಹಾಗೆ ತೆಗೆಯುವುದಕ್ಕೆ ಮೊದಲು ಚಾರ್ಜ್‌ಸ್ ಫ್ರೇಂ ಮಾಡಿ ಅವನಿಗೆ ಶೋಕಾಸ್ ನೋಟೀಸ್ ಕೊಡಬೇಕು. ಶೋಕಾಸ್ ಕೊಟ್ಟ ನಂತರ ಅವನಿಗೆ ಹಿಯರಿಂಗ್‌ಗೆ ಟೈಮ್ ಕೊಡಬೇಕು, ಸ್ವತಃ ಸರ್ಕಾರದವರು ಅವನಿಗೆ ನೋಟೀಸ್ ಕೊಟ್ಟು ಯಾವ ತಾರೀಖಿನ ದಿವಸ ಕೇಸನ್ನು ಹಿಯರ್ ಮಾಡುತ್ತೇವೆಂದು ತಿಳಿಸಿ ತಾರೀಖಿನ ದಿವಸ ಕ್ವಾಜಿ ಜುಡಿಶಿಯಲ್ ಎನ್‌ಕ್ವೈರಿ ಮಾಡಿ, ಸರ್ಕಾರದವರು ಒಂದು ಆರ್ಡರನ್ನು ಪಾಸ್ ಮಾಡಬೇಕೆಂದು ಇತ್ತು. ಈಗ ಏನು ಆಯಿತು ಎಂದು ಹೇಳಿದರೆ ಈ ಹಿಯರಿಂಗ್‌ಗೆ ಅವಕಾಶ ಇರಕೂಡದೆಂದು ತಿದ್ದುಪಡಿಯನ್ನು ತಂದಿದ್ದೇವೆ. ಇವತ್ತು ಮಿಸ್ ಕಂಡಕ್ಟ್ ಆಗಲೀ, ನೆಗ್ಲಿಜೆನ್ಸ್ ಆಗಲಿ ಯಾವಯಾವ ಕಾರಣಗಳಿಂದ ಸೆಕ್ಷನ್ ೪೧ ಮತ್ತು ಸೆಕ್ಷನ್ ೪೨ ಕೆಳಗೆ ಏನು ಹಾಕಿದ್ದೇವೆ ಅವೆಲ್ಲಾ ಸೆಕ್ಷನ್‌ಗಳ ಪ್ರಕಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾದರೆ ಕ್ವಶ್ಚನ್ ಮಾಡಲಿಕ್ಕೆ ಮಾತ್ರ ಅವನಿಗೆ ಒಂದು ಅವಕಾಶವನ್ನು ಕೊಟ್ಟಿದ್ದೇವೆ. ಜ್ಯುಡಿಶಿಯಲ್ ಎನ್‌ಕ್ವೈರಿ ತೆಗೆದುಕೊಳ್ಳುವುದಕ್ಕೆ ಮೊದಲು ಅವನು ಏನಾದರೂ ಲಿಖಿತ ಮೂಲಕ ಹೇಳಬೇಕೆಂದು ಇಚ್ಛೆಪಟ್ಟಿದ್ದರೆ ಲಿಖಿತ ಮೂಲಕ ಹೇಳುವಂಥ ಸಂದರ್ಭವನ್ನು ಇದರಲ್ಲಿ ಅಡಗಿಸಿದ್ದೇವೆ. ಹಿಯರಿಂಗ್‌ಗೆ ಮಾತ್ರ ಅವಕಾಶ ಹೇಳಿದ್ದೇವೆ. ಇವತ್ತು ತಾವು ಹೇಳುವ ಪ್ರಕಾರ ಒಂದು ಕೇಸ್‌ನ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾದರೆ, ತಮಗೆ ಒಂದು ಉದಾಹಣೆ ಹೇಳುತ್ತೇನೆ, ಈಗ ಒಬ್ಬ ಪ್ರೆಸಿಡೆಂಟ್‌ನ್ನು ಕೆಲವು ಚಾರ್ಜ್‌ಸ್ ಮೇಲೆ ತೆಗೆಯಬೇಕು ಎನ್ನುವ ಅವಕಾಶ ಬಿದ್ದಾಗ ಈ ರೀತಿ ಹಿಯರಿಂಗ್‌ಗೆ ಅವಕಾಶವನ್ನು ಕೊಟ್ಟರೆ ಅವನು ಅಡ್ವೊಕೇಟನ್ನು ಎಂಗೇಜ್ ಮಾಡುತ್ತಾನೆ. ಆ ಮೇಲೆ ವಕೀಲರೊಡನೆ ಕಾಗದ ಪತ್ರ ವ್ಯವಹಾರ ಮಾಡುವುದಕ್ಕೆ ಟೈಮ್ ತೆಗೆದುಕೊಳ್ಳುತ್ತಾನೆ.

ಶ್ರೀ ಎಂ. ಎಸ್. ಕೃಷ್ಣನ್—ಮಾನ್ಯ ಸಚಿವರು ಮಾತನಾಡುತ್ತಿರುವ ರೀತಿಯನ್ನು ನೋಡಿ ನಮಗೆ ಆಶ್ಚರ್ಯವಾಗುತ್ತಿದೆ. ಈಗ ಸಾಮಾನ್ಯವಾಗಿ ಎಕ್ಸ್‌ಪ್ಲೆನೇಷನ್‌ಗೆ ನೋಟೀಸನ್ನು ಕೊಡಲೇಬೇಕು; ಕೊಟ್ಟಮೇಲೆ ಅದರ ಬಗ್ಗೆ ಮಾತನಾಡುವುದಕ್ಕೆ "ಹಿಯರಿಂಗ್''ಗೂ ಅವಕಾಶವಿರಬೇಕು. ಆಗ ಆ ವ್ಯಕ್ತಿ ಹಿಯರಿಂಗ್‌ಗೆ ಬರದೇ ಹೋದರೆ ಅಥವಾ ಬೇಕೆಂದು ಅವಕಾಶವನ್ನು ದುರುಪಯೋಗಪಡಿಸಿಕೊಂಡು ಕಾಲವನ್ನು ಮುಂದುವರಿಸಿದ್ದೇ ಆದರೆ, ಆಗ ಆತನ ಮೇಲೆ ಕ್ರಮ ಜರುಗಿಸಲು ಕಾನೂನಿನಲ್ಲಿ ಅಧಿಕಾರ ಪಡೆಯಬೇಕು ಆದುದರಿಂದ, ಈ ರೀತಿ ಕಾನೂನಿನಲ್ಲಿ ಅವಕಾಶವಿರಬೇಕೇ ಹೊರತು, 'ಹಿಯರಿಂಗ್' ಬೇಡನೀ ಬೇಡ ಎಂದು ಹೇಳುವುದು ಸರಿಯಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಹಿಯರಿಂಗ್‌ನ್ನು ಯಾವ ಕಾಗದ ಪತ್ರಗಳ ಆಧಾರದ ಮೇಲೆ ವಿಚಾರಗಳನ್ನು ಕ್ಲೈಂ ಮಾಡುತ್ತಾನೋ, ಅ ವಿವರಗಳನ್ನು ಷೋಕಾಷ್ ನೋಟಿಸ್ ಕೊಟ್ಟಾಗ ಮತ್ತು ಎಕ್ಸ್‌ಪ್ಲನೇಷನ್ ಕೇಳಿದಾಗ ಸಾದರ್ಪಡಿಸಿರುತ್ತಾನೆ. ಆದುದರಿಂದ, ಬೇಕಾದ ವಿಷಯ ಮಾಹಿತಿಯನ್ನು ಸಂಪೂರ್ಣವಾಗಿ ಕೊಟ್ಟಿರುವುದರಿಂದ, ಮತ್ತೆ "ಹಿಯರಿಂಗ್'' ಮಾಡುವುದರಲ್ಲಿ ಅರ್ಥವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಯರಿಂಗ್‌ನಲ್ಲಿ ಪಾರ್ಟಿ ನಿಧಾನ ಮಾಡುತ್ತಾನೆ ಎನ್ನುವ ಅಭಿಪ್ರಾಯವಿದ್ದರೆ, ಅದನ್ನು ಸಂಪೂರ್ಣವಾಗಿ ಒಪ್ಪತಕ್ಕದ್ದಲ್ಲ. ಹಿಯರಿಂಗ್ ಗೊತ್ತು ಮಾಡಿದ್ದ ದಿನ ಇವರುಗಳು ಸಾರ್ವಜನಿಕ ಸಭೆಗಳಿಗೆ ಹೋಗಿಬಿಡುತ್ತಾರೆ. ಆ ಪಾರ್ಟಿ ಬಂದು ವಾಪಸ್ಸು ಹೋಗುತ್ತಾನೆ. ಹೀಗಿರುವಾಗ why a party should be penalised?

SRI D. K. NAIKAR.—The Hon'ble Member must know that there will be lapses in disposal even on both sides. In order to avoid lapses on both sides this has been done.

ಶ್ರೀ ಎಂ. ಎಸ್. ಕೃಷ್ಣನ್ - ಈ ರೀತಿ ಕಾನೂನು ಮಾಡಿದರೆ ಏನಾಗುತ್ತದೆ ಎಂದರೆ. ಕೆಲವರು ಕೋರ್ಟುಗಳಿಗೆ ಹೋಗುತ್ತಾರೆ. ಆಗ ಸರ್ಕಾರದವರು ಮಾಡಿದ ಕಾನೂನು ವ್ಯರ್ಥವಾಗುತ್ತದೆ ಅಷ್ಟೆ.

ಶ್ರೀ ಡಿ. ಕೆ. ನಾಯ್ಕರ್.—ಯಾವುದೂ ವ್ಯರ್ಥವಾಗುವುದಿಲ್ಲ. ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಅವಕಾಶ ಕೊಟ್ಟರೆ ಸಾಕು ಎಂದು ಸುಪ್ರೀಂ ಕೋರ್ಟ್ ತೀರ್ಮಾನ ಕೊಟ್ಟಿದೆ. ಅದರಂತೆ ಎಕ್ಸ್‌ಪ್ಲನೇಷನ್ನಿನಲ್ಲೇ ಎಲ್ಲವನ್ನೂ ಹೇಳುವುದಕ್ಕೆ ಅವಕಾಶವಿದೆ. ಇದು ಕಾನೂನು ಬದ್ಧವಾಗಿದೆ ಮತ್ತು ಯಾವ ಅಧಿಕಾರವನ್ನು ಇಲ್ಲಿ ತಡೆಗಟ್ಟಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಮದರಾಸು ಆ್ಯಕ್ಟಿನಲ್ಲಿದ್ದ ಅವರ ಹಕ್ಕುಗಳನ್ನು ಮೊಟಕುಗೊಳಿಸುವ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್ ಅವರು ಹೇಳಿದರು. ಇದರಲ್ಲಿ ಅಂಥಾ ಹಕ್ಕು ಯಾವುದೇ ಇದ್ದರೂ, ಮಾನ್ಯ ಸದಸ್ಯರುಗಳಿಗೆ ಗೊತ್ತಿರುವ ಹಾಗೆ ರೀ-ಆರ್ಗನೈಜೆಷನ್ ಪೂರ್ವದಲ್ಲಿ ಯಾವ ನೌಕರರಿದ್ದರು, ಅಂಥವರ ಹಕ್ಕುಗಳಿಗೆ ಅಲ್ಲಿ ರಕ್ಷಣೆ ಕೊಡಲಾಯಿತು, ಅನಂತರ ಬಂದವರಿಗೆ ನಮ್ಮ ಸರ್ಕಾರದವರು ರೂಲ್ಸ್ ಆಫ್ ರಿಕ್ರೂಟ್‌ಮೆಂಟ್ ಎಂದು ಮಾಡಿದ್ದಾರೆ; ಮದರಾಸು ಆ್ಯಕ್ಟಿನಲ್ಲಿರತಕ್ಕ ಹಕ್ಕುಗಳನ್ನು ಮಾನ್ಯ ಸದಸ್ಯರು ವಿಶೇಷವಾಗಿ ಕಲ್ಪನೆ ಮಾಡಿಕೊಂಡಿದ್ದರೆ, ಅಂಥಾ ವಿಶೇಷ ಹಕ್ಕುಗಳು ಮೊಟಕಾಗುವುದಿಲ್ಲ; ಅಲ್ಲದೆ ಅಂತಹ ಹಕ್ಕುಗಳೂ ಇಲ್ಲ. ಆದುದರಿಂದ, ನೌಕರರ ಹಕ್ಕುಗಳನ್ನು ಮೊಟಕುಗೊಳಿಸುವ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ಕಳವಳ ಬೇಡ. ನಾವು ಹಿಂದೆ, ಅವರಿಗೆ ಸಂಪೂರ್ಣವಾದ ರಕ್ಷಣೆ ಕೊಟ್ಟಿದ್ದೇವೆ. ಆದುದರಿಂದ ಅಂಥಾ ಒಂದು ಅಂಜಿಕೆ ಮಾನ್ಯ ಸದಸ್ಯರಿಗಾಗ ಕೂಡದು ಎಂದು ವಿನಯದಿಂದ ಹೇಳುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈ ವಿಧೇಯಕದ ಚರ್ಚೆಯಲ್ಲಿ ಭಾಗವಹಿಸಿರಲಿಲ್ಲ. ಆದುದರಿರದ ಒಂದೆರಡು ಸ್ಪಷ್ಟೀಕರಣವನ್ನು ಕೇಳಲು ಅಪ್ಪಣೆ ಬೇಡುತ್ತೇನೆ. 316ನೇ ವಿಧಿ ಪ್ರಕಾರ, ಯಾವ ಪುರಸಭೆ ಚೆನ್ನಾಗಿ ಕೆಲಸ ಮಾಡುವುದಿಲ್ಲ; ಕರ್ತವ್ಯ ಲೋಪ ಮಾಡಿದೆ, ಅಂಥಾ ಪುರಸಭೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ. ಈಗ ಅಲ್ಲಿ ಒಂದು ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ತಂದಿದ್ದಾರೆ. ಅದೇನೆಂದರೆ 'O is functioning in a mannar prejudical to the Municipality" ಹಾಗಾದರೆ ಈ "ಪ್ರಿಜುಡಿಷಿಯಲ್ ಟು ದಿ ಮುನಿಸಿಪಾಲಿಟಿ" ಎನ್ನುವುದು ಯಾವ ಯಾವ ಸಂದರ್ಭಗಳಲ್ಲಿ ಬರುತ್ತದೆ ? ಮತ್ತು "Interest of the Municipality may come in conflict with the interests of the public" ನನ್ನ ಅಭಿಪ್ರಾಯದಲ್ಲಿ ಮುನಿಸಿಪಾಲಿಟಿ ಇಂಟರೆಸ್ಟಿಗಿಂತ ಪಬ್ಲಿಕ್ ಇಂಟರೆಸ್ಟ್ ಮುಖ್ಯವಾಗಿರಬೇಕು. ಆದುದರಿಂದ ಅಲ್ಲಿ "ಪಬ್ಲಿಕ್ ಇಂಟರೆಸ್ಟ್" ಎನ್ನುವುದನ್ನು ಸೇರಿಸಬೇಕೆಂಬುದು ನನ್ನ ಅಭಿಪ್ರಾಯ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಭಾವನೆಯನ್ನು ತಿಳಿಸಲಿ.

ಇನ್ನು ಮುನಿಸಿಪಾಲಿಟಿಯವರು ಟೌನ್ ಪ್ಲಾನಿಂಗ್ ಅಥಾರಿಟಿಯವರನ್ನು ಕನ್ಸಲ್ಟ್ ಮಾಡಬೇಕೆಂದು ಇದೆ ಆದರೆ, ಮುನಿಸಿಪಾಲಿಟಿಯವರು ಕನ್ಸಲ್ಟ್ ಮಾಡಿ, ಟೌನ್ ಪ್ಲಾನಿಂಗ್ ಅಥಾರಿಟಿಯವರ ಅಭಿಪ್ರಾಯಕ್ಕೆ ಯಾವ ವಿಧವಾದ ಮನ್ನಣೆ ಮತ್ತು ಪುರಸ್ಕಾರ ಕೊಡದೆ, ಅವರ ಮನಸ್ಸಿಗೆ ಬಂದ ರೀತಿಯಲ್ಲಿ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋದರೆ, ಆಗ ಅವರ ಬಗ್ಗೆ ಏನು ಮಾಡಬೇಕೆಂಬುದನ್ನು ಈ ಕಾನೂನಿನಲ್ಲಿ ತಿಳಿಸಿಲ್ಲ. ಕನ್ಸಲ್ಟ್ ಮಾಡುವುದು ಅಬ್ಲಿಗೇಟರಿ ಡ್ಯೂಟಿಯಾಗುತ್ತದೆ. ಟೌನ್‌ಪ್ಲಾನಿಂಗ್ ಅಥಾರಿಟಿಯವರು ಪುರಸಭೆಗಳಿಗೆ ಏನಾದರೂ ಶಿಫಾರಸ್ಸು ಮಾಡುತ್ತಾರೆ ಆ ಶಿಫಾರಸ್ಸುಗಳನ್ನು ಅವರು ಒಪ್ಪದೆ ಹೋದರೆ ಮತ್ತು ಅವುಗಳನ್ನು ಜಾರಿಗೆ ಕೊಡದೆ ಹೋದರೆ, ಅಂಥಾ ಸಂದರ್ಭಗಳಲ್ಲಿ ಪುರಸಭೆಗಳ ಮೇಲೆ ಏನು ಕ್ರಮವನ್ನು ಜರುಗಿಸಬೇಕೆಂದು ಇಲ್ಲಿ ವಿವರಣೆ ಇಲ್ಲ. ಅದನ್ನೂ ಕೂಡ ಈ ಮಸೂದೆಯಲ್ಲಿ ಸೇರಿಸಿದ್ದರೆ ಬಹಳ ಒಳ್ಳೆಯದಿತ್ತು ಎಂದು ನನಗನ್ನಿಸುತ್ತದೆ. ಇದಿಲ್ಲದೇ ಇರುವುದರಿಂದ, ಕೆಲವರು ಅವರ ಮನಸ್ಸಿಗೆ ಬಂದ ರೀತಿಯಲ್ಲಿ ಮನೆ ಕಟ್ಟುತ್ತಿರುವುದು ಮತ್ತು ರಸ್ತೆ ಬಿಡುತ್ತಿರುವುದು ಹಾಗೂ ಸಾರ್ವಜನಿಕರಿಗಾಗಿದ್ದ ಖಾಲಿ ಜಾಗಗಳನ್ನು ಕೆಲವು ಪ್ರಭಾವಶಾಲಿಗಳು ಲಟಪಟಾಯಿಸುವುದು—

ಇವೆಲ್ಲಾ ನಡೆಯುತ್ತಿವೆ; ವೆಸ್ಟೆಡ್ ಇಂಟರೆಸ್ಟ್ ಇರುವವರು ತಮ್ಮ ಪ್ರಭಾವವನ್ನು ಬೀರಿ ತಮಗೆ ಬೇಕಾದಂತೆ ಮಾಡಿಕೊಳ್ಳುತ್ತಾರೆ. ಆದುದರಿಂದ ಇವೆಲ್ಲವನ್ನೂ ತಪ್ಪಿಸಬೇಕಾದರೆ, ಟೌನ್ ಪ್ಲಾನಿಂಗ್ ಅಥಾರಿಟಿಯವರ ಶಿಫಾರಸ್ಸುಗಳನ್ನು ಕಡ್ಡಾಯವಾಗಿ ಪುರಸಭೆಗಳವರು ಪಾಲನೆ ಮಾಡಬೇಕೆಂಬ ಅಂಶವನ್ನು ಅಡಕ ಮಾಡಿದ್ದರೆ ಚೆನ್ನಾಗಿತ್ತು ಎಂದು ನನ್ನ ಅಭಿಪ್ರಾಯ.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರು ಮಾತನಾಡುತ್ತ, ಮೊದಲನೆಯದಾಗಿ, "ಪ್ರಿಜುಡಿಷಿಯಲ್ ಟು ದಿ ಮುನಿಸಿಪಾಲಿಟಿ" ಎನ್ನುವುದರ ಬಗ್ಗೆ ವಿವರಣೆ ಏನು ಎಂದು ಕೇಳಿದ್ದಾರೆ. ನಾನು ಅವರ ಗಮನಕ್ಕೆ ತರುವುದಿಷ್ಟೆ, ಮುನಿಸಿಪಾಲಿಟಿಗೆ ಸಂಬಂಧಪಟ್ಟಂತೆ ಯಾವುದೋ ಒಂದು ಮಾರ್ಕೆಟಿಂಗ್ ಕಾಂಪ್ಲೆಕ್ಸ್ ಇರುತ್ತದೆ. ಅದಕ್ಕೆ ಒಂದು ಸಾವಿರ ರೂಪಾಯಿ ವರಮಾನ ಬರುತ್ತದೆ ಎಂದು ತಿಳಿಯೋಣ. ಆಗ ಮುನಿಸಿಪಾಲಿಟಿಯಲ್ಲಿ ಅಧಿಕಾರದಲ್ಲಿರುವವರು, ತಮಗೆ ಅಧಿಕಾರವಿದೆ ಎಂದು ತಿಳಿದು, ಆ ಕಾಂಪ್ಲೆಂಕ್ಸನ್ನು 800-500 ರೂಪಾಯಿಗಳಿಗೆ ಲೀಸ್ ಮೇಲೆ ಯಾರಿಗೋ ಕೊಟ್ಟುಬಿಡುತ್ತಾರೆ. ಆಗ ಮುನಿಸಿಪಾಲಿಟಿ ಇಂಟರೆಸ್ಟ್ "ಪ್ರಿಜ್ಯುಧಿಷಿಯಲ್" ಆಗುತ್ತದೆಯೋ ಅಥವಾ ಇಲ್ಲವೆ ಎಂಬುದನ್ನು ಮಾನ್ಯ ಸದಸ್ಯರು ವಿಚಾರ ಮಾಡಲಿ. ಯಾವುದೋ ತೆರಿಗೆ ವಸೂಲಾತಿ ವಿಚಾರದಲ್ಲಿ ಪ್ರಕರಣವೊಂದು ಹೈಕೋರ್ಟಿಗೆ ದಾಖಲಾಗಿರುತ್ತದೆ ಎಂದು ತಿಳಿಯೋಣ ಅದು ಹೈಕೋರ್ಟಿನಲ್ಲಿ ಹತ್ತಾರು ವರ್ಷ ಉಳಿದ ಅನಂತರ ಹೈಕೋರ್ಟಿನವರು ಅದನ್ನು ವಸೂಲ್ಮಾಡಬೇಕೆಂದು ತೀರ್ಮಾನ ಬಂದಾಗ ಅಲ್ಲಿ ಅಧಿಕಾರದಲ್ಲಿರುವವರು ಅದನ್ನು ವಸೂಲ್ಮಾಡುವುದನ್ನು ಬಿಟ್ಟು, ಅತನು ತೆರಿಗೆ ಕಟ್ಟಬೇಕಾಗಿಲ್ಲ ಎಂದು ಒಂದು ನಿರ್ಣಯವನ್ನು ಮಾಡಿವರೆ, ಆಗ ಅದು "ಪ್ರಿಜ್ಯುಡಿಷಿಯಲ್ ಇಂಟರೆಸ್ಟ್" ಆಗುತ್ತದೆಯೋ ಅಥವಾ ಇಲ್ಲವೇ ?

ಇನ್ನೊಮ್ಮೆ ತಮಗೆ ಹೇಳುವುದಾದರೆ, ಅನೇಕ ಕಾರ್ಯಕ್ರಮಗಳಲ್ಲಿ ಗ್ಯಾರಂಟಿ ವರ್ಕ್ ಕೊಡುವ ಬಗ್ಗೆ ತಾವು ಹೇಳುತ್ತಿದ್ದೀರಿ, ಗ್ಯಾರಂಟಿ ವರ್ಕ್‌ನ್ನು ಸಾಲದ ರೂಪದಲ್ಲಿ ಅಚ್ಚುಕಟ್ಟು ಮಾಡಿ ಸರ್ಕಾರ ಗ್ಯಾರಂಟಿ ಕೊಡುತ್ತದೆ. ಎಕ್ಸಿಕ್ಯೂಷನ್ ಆಫ್ ವರ್ಕ ಮಾಡಬೇಕಾದರೆ ಕೌನ್ಸಿಲ್ ನಿರ್ಣಯ ಮಾಡಬೇಕಾಗುತ್ತದೆ. ಕಾಸ್ಟ್ ಮುನಿಸಿಪಾಲಟಿಗೆ ಬಂದಾಗ ಪ್ರಿಜುಡಿಷಿಯಲ್ ಇಂಟರೆಸ್ಟ್ ಅಗುತ್ತದೆಯೋ ಸ್ವಾಮಿ, ಅನೇಕ ರೀತಿಯಲ್ಲಿ ಈ ರೀತಿ ಆಗುತ್ತದೆ, ಆದುದರಿಂದ ಇಂಥ ಒಂದು ಶಾಸನ ಸರ್ಕಾರಕ್ಕೆ ಬೇಕಾಗುತ್ತದೆಂದು ತಾವು ತಿಳಿದುಕೊಳ್ಳಬೇಕು. ಇನ್ನೊಂದು ವಿಚಾರ ಏನು ಎಂದರೆ ಟೌನ್ ಪ್ಲಾನಿಂಗ್ ಬಗ್ಗೆ ಹೇಳಿದ್ದಾರೆ. ವೆಂಕಟಲಿಂಗಯ್ಯನವರು ಮೈಸೂರು ಮುನಿಸಿಪಾಲಟಿ ಬಗ್ಗೆ ಹೇಳಿದ್ದಾರೆ, ಟೌನ್ ಪ್ಲಾನಿಂಗ್ ಅಥಾರಿಟಿ ಇರುತ್ತದೆ, ಮುನಿಸಿಪಾಲಟಿ ಇರುತ್ತದೆ. ನಗರ ಬೆಳೆಯ ಬೇಕಾದರೆ, ಟೌನ್ ಪ್ಲಾನಿಂಗ್ ಅಥಾರಿಟಿಗೆ ಅಚ್ಚುಕಟ್ಟು ರೀತಿಯಿಂದ ಬೆಳೆಸುವುದಕ್ಕೆ ಪ್ರಾವಿಷನ್ ಕೊಟ್ಟಿದ್ದೇವೆ. ನಿಮ್ಮ ಭೀತಿ ಏನು ಎಂದರೆ ಟೌನ್ ಪ್ಲಾನಿಂಗ್ ಸಲಹೆ ಕೇಳಲೇ ಇಲ್ಲ ಎಂದರೆ ಏನು ಮಾಡಬೇಕು ಎಂದು. ಟೌನ್ ಪ್ಲಾನಿಂಗ್ ಅಥಾರಿಟಿ ಪ್ರತ್ಯೇಕವಾದ ಆಕ್ಟಿನಲ್ಲಿ ಕೆಲಸ ಮಾಡುತ್ತಿದೆ. ಆ ರೀತಿ ಒಂದು ಪಕ್ಷ ತಮ್ಮ ಸಲಹೆ ಕೇಳದೆ ಇದ್ದಾಗ ಸರ್ಕಾರಕ್ಕೆ ರಿಪೋರ್ಟ್ ಮಾಡುವ ಅಧಿಕಾರ ಇದೆ. ಅಂಥ ರಿಪೋರ್ಟ್ ಬಂದಾಗ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಆದನ್ನು ತೆಗೆದುಕೊಳ್ಳುತ್ತದೆ. ಅದನ್ನು ಸರಿಪಡಿಸುವಂತ ಅಧಿಕಾರ ಸರ್ಕಾರಕ್ಕೆ ಇದೆ.

MADAM SPEKER —I will put the consideration motion to the vote of the House. The question is :

"That the Karnataka Municipalities (Amendment) Bill, 1976, be taken into consideration."

*The Motion was adopted*

I will take up consideration of the Bill clause by clause tomorrow. Now the House stands adjourned to meet again at 1 P. M. tomorrow.

*The House adjourned at Twenty five Minutes past Five of the Clock to meet again at one of the Clock on Tuesday the 25th May 1976.*